# ಡಿಪ್ಲೊಮಾ ಇನ್ ಎಲಿಮೆಂಟರಿ ಎಜುಕೇಶನ್

## DIPLOMA IN ELEMENTARY EDUCATION D.El.Ed.

### ಸೆಮೆಸ್ಟರ್ – 1

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT), ಕೇರಳ
State Council of Educational Research and Training (SCERT), Kerala

## ಪೇಪರ್ 103 : ಕನ್ನಡ ಭಾಷಾಧ್ಯಯನ ಸಮೀಪನ ಮತ್ತು ರೀತಿ

ಘಟಕ 1 : ನುಡಿಯ ಕಿಡಿ

ಘಟಕ 2 : ಭಾಷಾ ಕಲಿಕೆಯ ಆರಂಭ

ಘಟಕ 3 : ಮಾತುಗಾರಿಕೆಯ ಕೌಶಲ್ಯ ಮತ್ತು ವಾಚನಾ ಕೌಶಲ್ಯ

ಘಟಕ 4 : ಮಕ್ಕಳ ಸಾಹಿತ್ಯ

## ಘಟಕ – 1

# ನುಡಿಯ ಕಿಡಿ

**ವಿಷಯ ಸೂಚಿ**

ಕನ್ನಡ ಭಾಷೆಯ ಸಂಪನ್ಮೂಲಗಳಾದ ಜನಪದ ಗೀತೆಗಳು, ಗಾದೆಗಳು ಒಗಟುಗಳು ಹಾಗೂ ಕಥೆಗಳ ಕುರಿತು ಜ್ಞಾನವನ್ನು ಗಳಿಸುವುದು ಮತ್ತು ಅವುಗಳ ಸಾಹಿತ್ಯ, ಸಾಂಸ್ಕೃತಿಕ ಪ್ರಾಧಾನ್ಯವನ್ನು ತಿಳಿದುಕೊಳ್ಳುವುದು, ದೃಶ್ಯಾವಿಷ್ಕಾರ, ವಿಚಾರಗೋಷ್ಠಿ, ಪದಕೋಶ ನಿರ್ಮಾಣ, ಭಾಷಾ ಆಟಗಳು, ಸಂಚಿಕೆ ತಯಾರಿ ಮೊದಲಾದವುಗಳ ಮೂಲಕ ಪರಂಪರಾಗತವಾಗಿ ಬಂದ ಜನಪದ ಸಾಹಿತ್ಯವನ್ನು ಆಸ್ವಾದಿಸುತ್ತಾ ತರಗತಿಯಲ್ಲಿ ಭಾಷಾ ಕಲಿಕೆಯ ವೈವಿಧ್ಯಪೂರ್ಣ ಸಾಧ್ಯತೆಗಳನ್ನು ತಿಳಿದುಕೊಳ್ಳುವುದು.

- ಕವಿತೆ, ಹಾಡು, ಜನಪದ ಗೀತೆ ಮೊದಲಾದವುಗಳನ್ನು ಹಾಡುವುದರೊಂದಿಗೆ ಅವುಗಳ ಆಶಯಗಳನ್ನು ನಾಟಕೀಯವಾಗಿ ಪ್ರಕಟಪಡಿಸುವುದೇ ದೃಶ್ಯಾವಿಷ್ಕಾರ.
- ಒಂದನೇ ತರಗತಿಯಿಂದ 8ನೇ ತರಗತಿಯವರೆಗೆ ಕಲಿತ ಜನಪದ ಹಾಡುಗಳ ದೃಶ್ಯಾವಿಷ್ಕಾರ
- ICT ಮೂಲಕ ಜನಪದ ಹಾಡುಗಳ ಆಸ್ವಾದನೆ/ದೃಶ್ಯಾವಿಷ್ಕಾರಗಳನ್ನು ಆಸ್ವಾದಿಸುವುದು.
- **ಹಾಡಿ ಆನಂದಿಸುವ**

    ತಂದನ್ನ ತಾನಾನಾ
    ತಂದನಾನಾ ತಾನಾನಾ ॥
    ತಾನಿತಾನಂದನೋ ತಂದನಾನಾ
    ತಂದಾನಿತಾನಂದನೋ ತಂದೆ ನಾನಾ ॥

- ಝುಕ್ಕಣ್ಣಕ್ಕ ಣಕ್ಕ ಝುಕ್ಕ
  ಝುಕ್ಕಣ್ಣಕ್ಕ ಣಕ್ಕ ಝುಕ್ಕ
- ಲ್ಲಲ್ಲಲ ಲಾಲಾಲ ಲಾಲಾಲಾ ಲಾಲಲ್ಲಲ್ಲಲ
  ಲಾಲಾಲಾ ಲಾಲಾಲಾ ಲಾಲಲ್ಲಲ್ಲಲ ಲಾಲಾಲ
  ಲಾಲಾಲಾಲಲ
  ತಾನಿ ತಂದನೋ ತಾನಿ ತಂದನೋ
  ತಂದಾನಿತಂದಾನ
  ತಾನಿತಂದನೋ ತಾನಿತಂದನೋ

ವಿಭಿನ್ನ ಬಾಯಿತಾಳಗಳ ಹಾಡನ್ನು ಸಂಗ್ರಹಿಸಿ ಹಾಡುವುದು.

**ಬಾಯಿತಾಳ – ಚರ್ಚಾ ಸೂಚಕಗಳು**

- ಬಾಯಿತಾಳಗಳ ಪ್ರಾಧಾನ್ಯ
- ತಾಳಕ್ರಮ
- ವಿಭಿನ್ನ ಬಾಯಿತಾಳ
- ತರಗತಿಯಲ್ಲಿ ಅನಿವಾರ್ಯತೆ

**ಜನಪದ ತಾಳವು–ಬಾಯಿತಾಳಗಳೂ**

ಜನಪದ ಹಾಡುಗಳಲ್ಲಿ ಬಹುಪಾಲು ಹಾಡುಗಳೂ ವೈಯಕ್ತಿಕವಾಗಿ ಅಥವಾ ಗುಂಪಿನಲ್ಲೂ ತಾಳದೊಂದಿಗೆ ಹಾಡುವವುಗಳಾಗಿವೆ. ಅವುಗಳನ್ನು ಕೈತಾಳದಿಂದಲೋ, ವಾದ್ಯೋಪಕರಣಗಳ ಸಹಾಯದಿಂದಲೋ ರಾಗಬದ್ಧವಾಗಿ ಹಾಡಬಹುದಾಗಿದೆ.

ಸಂಗೀತ ಶಾಸ್ತ್ರದಲ್ಲಿ 'ಜತಿ'ಗೆ ಸಮಾನವಾಗಿ ಜನಪದ ಹಾಡಿನಲ್ಲಿ ಬಾಯಿತಾಳಗಳನ್ನೂ ಉಪಯೋಗಿಸುವರು. 'ತಾಳಕ್ರಮವನ್ನು ಕ್ರಮಬದ್ಧಗೊಳಿಸುವುದಕ್ಕಾಗಿ ಜನಪದ ಹಾಡಿನಲ್ಲಿ ಬಾಯಿತಾಳವನ್ನು ಉಪಯೋಗಿಸುವುದು. 'ತಾರಿ' ಎನ್ನುವ ಪದಕ್ಕೆ ತಾಳ, ವಿಧ ಎನ್ನುವ ಅರ್ಥಗಳಿವೆ. ಗ್ರಾಮೀಣ ಗಾಯಕರು ಮಾತ್ರವಲ್ಲ ನರ್ತಕರು, ವಾದ್ಯಕಾರರು ಹಲವು ವಿಧದ ಬಾಯಿತಾಳವನ್ನು ಉಪಯೋಗಿಸುವುದನ್ನು ಕಾಣಬಹುದು. ಆಧುನಿಕ ಸಂಗೀತದ ಮೂಲವನ್ನು ಹುಡುಕುತ್ತಾ ಹೋದರೆ ನಾವು ತಲುಪುವುದು ಜನಪದ ಸಂಗೀತ (Folk Song) ದ ಎಡೆಗಾಗಿರಬಹುದು.

**ಜನಪದ ಸಾಹಿತ್ಯ ಬೆಳೆದು ಬಂದ ಬಗೆ**

ಇದನ್ನು 'ಮಣ್ಣಿನ ವಾಸನೆ' ಉಳ್ಳ ಸಾಹಿತ್ಯ ಎಂದೇ ಕರೆಯಬಹುದು. ಸಹಜವಾಗಿ ಕವಿ ಹೃದಯವನ್ನು ಹೊಂದಿರುವ ಈ ನಾಡಿನ ಜನ ತಮ್ಮ ದುಡಿಮೆಯ ಬೇಸರವನ್ನು ಕಳೆಯಲು ಜೀವನದ ದುಃಖ ದುಮ್ಮಾನಗಳನ್ನು ಮರೆಯಲು, ಜೀವನದ ಸುಖ ಸಂತೋಷಗಳನ್ನು ಹಂಚಿಕೊಳ್ಳಲು, ಒಟ್ಟಾರೆ ತಮ್ಮ ಅನುಭವಗಳನ್ನು ಹಂಚಿಕೊಳ್ಳಲು, ಹುಟ್ಟಿಕೊಂಡ ಸಾಹಿತ್ಯವೇ ಜನಪದ ಸಾಹಿತ್ಯ. ಕಥೆ, ಗಾದೆ, ಒಗಟು, ಗೀತೆ, ಹಾಡು ಇತ್ಯಾದಿಗಳು ಸಹಜವಾಗಿ ಹುಟ್ಟಿಕೊಂಡವು. ಇವುಗಳು ಸಹಜವಾಗಿ ನಮ್ಮ ನಾಡಿನ ಸಂಸ್ಕೃತಿಯನ್ನು ಬಿಂಬಿಸುವವು. ಮೌಖಿಕವಾಗಿ ಬಾಯಿಂದ ಬಾಯಿಗೆ ಹರಿದು ಬಂದ ಮೌಖಿಕ ಸಾಹಿತ್ಯ (Oral literation) ಮೌಖಿಕ ಸಂಸ್ಕೃತಿಯ (Oral culture) ಪ್ರಧಾನ ಘಟಕಗಳಲ್ಲಿ ಒಂದು.

ಹಳ್ಳಿಯ ಜನ ಅಕ್ಷರಸ್ಥರಲ್ಲದಿದ್ದರೂ ಕಾವ್ಯಶಾಸ್ತ್ರಗಳನ್ನು ಅಧ್ಯಯನ ಮಾಡದಿದ್ದರೂ ಲೋಕಜ್ಞಾನದ ಬಗ್ಗೆ ತಿಳುವಳಿಕೆ ಉಳ್ಳವರು. ಇವರಿಗೆ ಅನುಭವವೇ ತಾಯಿಬೇರು. ತಮ್ಮ ಸುತ್ತಮುತ್ತ ಕಂಡ ಮರ, ಗಿಡ, ಪ್ರಾಣಿ, ಪಕ್ಷಿ, ದೇವರು–ಧರ್ಮ ಹೀಗೆ ವಿವಿಧ ವಿಷಯಗಳ ಬಗ್ಗೆ ರಚಿಸಿದ ಸಾಹಿತ್ಯದಲ್ಲಿ ಶ್ರೀಮಂತಿಕೆ ಕಂಡುಬಂದಿದೆ. ಜಾನಪದ ಕಾವ್ಯದಲ್ಲಿ ಅಲಂಕಾರಗಳು, ಭಾವತೀವ್ರತೆ, ಸಾಮಾಜಿಕ ಜೀವನ, ದುಡಿಮೆ, ಪ್ರತಿಮೆ–ಪ್ರತೀಕಗಳಂತಹ ಕಾವ್ಯಗುಣಗಳನ್ನು ಕಾಣಬಹುದು.

**ಜನಪದ ಹಾಡು – ವಿಚಾರಗೋಷ್ಠಿ**

**ಆರಿಸಿಕೊಳ್ಳಬಹುದಾದ ಮಂಡಲಗಳು**

- ಜನಪದ ಹಾಡುಗಳ ಚಾರಿತ್ರಿಕ ಪ್ರಾಧಾನ್ಯ
- ಸಾಮಾಜಿಕ ಜೀವನ

- ಸಂಸ್ಕೃತಿ
- ಚರಿತ್ರೆ
- ಜನಪದ ಹಾಡು/ಗೀತೆಗಳ ಸಾಹಿತ್ಯ
- ವರ್ಣನೆ
- ಅಲಂಕಾರ
- ಪ್ರತಿಮೆ/ಪ್ರತೀಕ
- ಜನಪದ ಹಾಡುಗಳ ಸಂಗೀತ
- ತಾಳ
- ವಾದ್ಯೋಪಕರಣಗಳು
- ಜನಪದ ಹಾಡುಗಳ ಭಾಷೆ
- ಪ್ರಾದೇಶಿಕತೆ
- ಪ್ರಯೋಗ ವಿಶೇಷತೆ
- ಸರಳತೆ

## ಜನಪದ ಸಾಹಿತ್ಯದ ಚರಿತ್ರೆ

ಜನಪದ ಸಾಹಿತ್ಯಕ್ಕೆ ಗುಡಿಸಲುಗಳೇ ಉಗಮಸ್ಥಾನ. ಸಾಮಾನ್ಯ ಜನರ ಜೀವನ ಚಿತ್ರಣವೇ ಕಥೆ; ನಿಸರ್ಗವೇ ನರ್ತಿಸುವ ರಂಗಭೂಮಿ; ಜನಸಾಮಾನ್ಯರ ಕಿವಿಗಳೇ ಪರಿಸೆ, ಜಾನಪದ ಸಾಹಿತಿಗಳೆಲ್ಲ ನಿರಕ್ಷರ ಕುಕ್ಷಿಗಳೇ, ಸ್ಫೂರ್ತಿ ಬಂದಾಗ, ಸಂತೋಷದ ಪ್ರಸಂಗ ಬಂದಾಗ, ತಮಗೆ ತೋಚಿದಂತೆ ಹಾಡಿಕೊಂಡು ತೃಪ್ತಿಪಡುವಂಥವರು. ಹೀಗಿರುವಾಗ ಅವರು ಬರೆಯುವುದಾಗಲಿ, ಅವರನ್ನು ಬರೆಸುವುದಾಗಲಿ ಹೇಗೆ ಸಾಧ್ಯ? ಈ ಹಾಡುಗಳನ್ನು ಹಾಡುವವರು ಹೆಚ್ಚಾಗಿ ಬಾಯಿಪಾಠ ಮಾಡಿರುವುದೇ ಹೆಚ್ಚು. ಈ ಸಾಹಿತ್ಯ ಕರ್ನಾಟಕದಲ್ಲಂತೂ ಬಹಳವಾಗಿ ಬೆಳೆದು ಹಬ್ಬಿ ಹರಡಿದೆ. ಬೀಸುವ ಹಾಡು, ಒನಕೆಯ ಹಾಡು, ಬೆಳದಿಂಗಳ ಹಾಡು, ಕೋಲಿನ ಹಾಡು, ಹೋಳಿ ಹಾಡು, ಮಕ್ಕಳ ಹಾಡು, ಸುಗ್ಗಿಯ ಹಾಡು, ಹಬ್ಬ ಹರಿದಿನಗಳ ಹಾಡು, ಗರತಿಯ ಹಾಡು, ಎಲ್ಲಮ್ಮನ ಹಾಡು, ರಾಮಾಯಣ ಮಹಾಭಾರತದಂತಹ ಹಾಡು, ಸೋಬಾನೆ ಪದಗಳು ನಿಂದೆ-ವ್ಯಥೆ, ಅಳಲು-ವ್ಯಂಗ್ಯ ಬುದ್ಧಿ ಜರಿದು ಹಾಡುವ ಪದ-ಗರತಿ-ಕುಲಸತಿ, ಪ್ರೇಮಿಪದಗಳು ಒಂದೆಡೆಯಾದರೆ, ಅಶ್ಲೀಲ-ವ್ಯಭಿಚಾರದಿಂದ ಕೂಡಿದ ಶೃಂಗಾರ ರಸದ ಹಾಡುಗಳು – ಹೀಗೆ ಅನೇಕ ವಿಧವಾಗಿ ರಾಶಿರಾಶಿಯಾಗಿ ಈ ಪದಗಳು ಹರಡಿವೆ. ಈ ಎಲ್ಲಾ ಸಾಹಿತ್ಯದ ಕಾಲಮಾನವನ್ನು ಗುರುತಿಸುವುದಾಗಲೀ ಅಳೆಯುವುದಾಗಲೀ ರಚನಾಕಾರರನ್ನು ಗುರುತಿಸುವುದಾಗಲಿ, ಸಾಧ್ಯವಿಲ್ಲದ ಮಾತು.

## ಜನಪದ ಸಾಹಿತ್ಯ (Folklore)

ಒಂದು ಕಾಲಕ್ಕೆ ಅಲಕ್ಷ್ಯಕ್ಕೆ ಒಳಗಾದ ಈ ಸಾಹಿತ್ಯಕ್ಕೆ ಪಾಶ್ಚಿಮಾತ್ಯ ಸಾಹಿತ್ಯ ಸಂಪರ್ಕದಿಂದ ೨೦ನೆಯ ಶತಮಾನದಿಂದಲೇ ಬೆಲೆ ಕೊಡತೊಡಗಿದರು. (ವಿಲ್ಯಂ-ಜೋನ್ ತೋಮ್ಸ್-1846ರಲ್ಲಿ ಫೋಕ್‌ಲೋರ್ ಎನ್ನುವ ಪದವನ್ನು ಮೊದಲು ಪ್ರಯೋಗಿಸಿದರು). ಭಾರತದ ಸಾಂಸ್ಕೃತಿಕ ಪರಂಪರೆಯ ಬಹುಮಟ್ಟಿನ ತಿರುಳು ಇದರಲ್ಲಿ ಹುದುಗಿವೆ. ಇವು ಕರುಳನ್ನು ಮಿಡಿಸುತ್ತವೆ. ಅಂತರಂಗವನ್ನು ತಟ್ಟಿ ಮಾರ್ದನಿಗೊಳಿಸುತ್ತವೆ. ನಮ್ಮ ಹಳ್ಳಿಯ ಗಂಡು ಹೆಣ್ಣುಗಳೆಲ್ಲರ ಜೀವನ ಸಾರವನ್ನು ಹೊರಹೊಮ್ಮಿಸುವ ಈ ಗೀತೆಗಳು, ಒಗಟು, ಗಾದೆಗಳು ಅವರನ್ನು ತಣಿಸಿ ಹುರಿದುಂಬಿಸುವಂತೆ ಮಾಡುತ್ತದೆ ಎಂದರೆ ಅತಿಶಯೋಕ್ತಿಯಾಗಲಾರದು. ಆದುದರಿಂದ ಇಂತಹ ಮೌಖಿಕ ಸಂಸ್ಕೃತಿಯ ಪರಿಚಯ ಮಾಡಿಸುವ ಈ ಘಟಕಕ್ಕೆ 'ನುಡಿಯ ಕಿಡಿ' ಎಂಬ ಹೆಸರನ್ನು ನೀಡಲಾಗಿದೆ.

## ಜನಪದ ಹಾಡುಗಳ ವರ್ಗೀಕರಣ

ತುಂಬ ಶ್ರೀಮಂತವಾಗಿರುವ ಕನ್ನಡ ಜನಪದ ಗೀತೆ ಸಾಹಿತ್ಯದಲ್ಲಿ ಎಲ್ಲ ಬಗೆಯ, ಎಲ್ಲ ಮಟ್ಟದ, ಎಲ್ಲ ಪ್ರಕಾರದ ಗೀತೆಗಳೂ ಇರುವುದು ಗಮನಾರ್ಹ ಸಂಗತಿ. ನುಡಿಮುತ್ತುಗಳಾದ ತ್ರಿಪದಿಗಳು, ದ್ವಿಪದಿ, ಚೌಪದಿಗಳು, ಸಾಂಗತ್ಯ, ಷಟ್ಪದಿಗಳು, ಲಾಲಿಪದ, ಶಿಶುಪ್ರಾಸ, ಕಥನ ಕವನ, ಲಾವಣಿ, ತತ್ತ್ವದ ಪದ, ಗದ್ಯಾತ್ಮಕ ಗೀತೆಗಳು ಇವೆಲ್ಲಕ್ಕೂ ಮಹತ್ವದ್ದಾದ ಪದ್ಯ ಗಂಧಿ ಛಂದೋಬಂಧದಲ್ಲಿರುವ ವೀರವಚನಗಾಥೆ, ಜನಪದ ಮಹಾಕಾವ್ಯ, ಎಲ್ಲವೂ ಕನ್ನಡದಲ್ಲಿದೆ. ಇವುಗಳಲ್ಲಿ ಪ್ರಾಂತೀಯ ಬೇಧವುಳ್ಳ ಆಯಾ ಪರಿಸರದ ಸಂಸ್ಕೃತಿಯಿಂದ ಶ್ರೀಮಂತವಾದ ಹಾಗೂ ಇಡೀ ಕನ್ನಡ ನಾಡಿನ ಸಾಮಾನ್ಯವಾದ ಒಂದು ಜೀವನಾದರ್ಶವುಳ್ಳ ಗೀತೆಗಳು ಸಮೃದ್ಧವಾಗಿವೆ. ಈ ಒಂದೊಂದು ಗೀತೆಯೂ ಆಯಾ ಜನತೆಯ ಸಾಂಸ್ಕೃತಿಕ ಚರಿತ್ರೆಯನ್ನು ಸೂಚಿಸಬಲ್ಲದು. ಇಡೀ ಜನಪದ ಸಾಹಿತ್ಯ ಆ ಭಾಷೆಯನ್ನಾಡುವ ಜನತೆಯ ಸಂಸ್ಕೃತಿ ಸಂಪುಟವಾಗಬಲ್ಲದು.

## ದೇವರನ್ನು ಕುರಿತವು/ಸ್ತುತಿರೂಪದ ಗೀತೆಗಳೂ

ಕನ್ನಡ ಜನಪದದಲ್ಲಿ ದೇವ, ದೇವಿಯರನ್ನು ಸ್ತುತಿಸುವ, ಅವರ ಕುರಿತಾದ ಹಾಡುಗಳು ಹೇರಳವಾಗಿವೆ. ಜನರು ದೇವರಲ್ಲಿ ಇಟ್ಟುಕೊಂಡ ಆತ್ಮಾಭಿಮಾನವೇ ಇದಕ್ಕೆ ಕಾರಣ. ಮಾನವರೆಲ್ಲರೂ ಆ ದಯೆ, ಧರ್ಮದ ದಾತಾರನ ಕರುಣಾಧ್ವಾರದಲ್ಲಿ ಸೆರಗೊಡ್ಡಿ ನಿಂತಿರುವವರು ಎಂಬುದು ಅಭಿಪ್ರಾಯವಾಗಿದೆ. 'ರಾಗಿ ಕಲ್ಲುಪದ' ಗೀತೆಯಲ್ಲಿ ರಾಗಿಯೂ ದೇವರು ನೀಡಿದ ಧಾನ್ಯ. ಬಡವನಿಂದ, ಶ್ರೀಮಂತರವರೆಗೂ ರಾಗಿ ಉಣ್ಣದವರೇ ಇಲ್ಲ. ರಾಗಿ ಕಲ್ಲಿನಲ್ಲಿ ಬೀಸದ ಧಾನ್ಯಗಳೇ ಇಲ್ಲ. ಬೀಸುವ ಕಲ್ಲಿಗೂ ಜಾನಪದರು ಮಹತ್ವ ಕೊಟ್ಟಿದ್ದರು.

ರಾಗಿ ಬೀಸೋಕಲ್ಲೆ ರನ್ನ ಮುತ್ತಿನ ಕಲ್ಲೆ
ಅಣ್ಣನ ಮನೆಯ ಸಿರಿಗಲ್ಲೆ/ಪಚ್ಚೆಕಲ್ಲೆ
ಶೋಬನದ ಕಲ್ಲೆ ಕೊಡು ದನಿಯ/

ಕಲ್ಲು ಹಿಡಿಯುವಾಗ, ಗೌರಮ್ಮನಿಗೆ, ರಂಗಯ್ಯನಿಗೆ, ಮಲ್ಲಯ್ಯನಿಗೆ, ಲಕ್ಕಮ್ಮನಿಗೆ, ಕೆಂಡಮ್ಮ ಮುಂತಾದ ದೇವರನ್ನು ನೆನೆಯುತ್ತ ರಾಗಿಕಲ್ಲಿಗೆ 'ಕಲ್ಲಮ್ಮ' ಎಂದು ಸಂಬೋಧಿಸುವ ಔಚಿತ್ಯಪೂರ್ಣವಾದ ಮಾತು ಜಾನಪದರು ಬಹುದೇವತಾ ಉಪಾಸನೆ ಮಾಡುತ್ತಿದ್ದರು ಎಂಬುದನ್ನು ತಿಳಿಸಿಕೊಡುತ್ತದೆ. ಇಲ್ಲಿ ಬರುವ ಎಲ್ಲ ಹಾಡುಗಳು ತ್ರಿಪದಿ ಛಂದಸ್ಸಿನಲ್ಲಿವೆ. ಹೆಚ್ಚಾಗಿ ರಾಗಿ ಬೆಳೆದು ರಾಗಿ ಕಲ್ಲಿನಿಂದ ಬೀಸುವಂತಹ ಭಾಗ್ಯ ಉಂಟಾಗಲಿ ಎಂಬ ಆಶಯವನ್ನು ಈ ಗೀತೆಯಲ್ಲಿ ಕಾಣಬಹುದು.

ಕಲ್ಲು ಕೊಟ್ಟಮ್ಮಗೆ ಎಲ್ಲಾ ಭಾಗ್ಯವು ಬರಲಿ
ಪಲ್ಲಕ್ಕಿ ಮೇಲೆ ಮಗ ಬರಲಿ/ಆ ಮನೆಗೆ
ಮಲ್ಲಿಗೆ ಮುಡಿಯೋ ಸೊಸೆ ಬರಲಿ

ಬೀಸುವ ಕಲ್ಲು ಎಲ್ಲರಲ್ಲೂ ಇರದೆ ಉಳ್ಳವರಲ್ಲಿ ಮಾತ್ರ ಇರುತ್ತಿತ್ತು ಎನ್ನುವುದನ್ನು ಸೂಚಿಸುತ್ತಾ, ಅದನ್ನು ಎಲ್ಲರೂ ಉಪಯೋಗಿಸಿ ಬೀಸಿಕೊಳ್ಳುವ ಪರಂಪರೆ ಇದ್ದಂತೆ ತೋರುತ್ತದೆ.

## ಗರತಿಯರ ಹಾಡುಗಳು

ಜನಪದ ಹಾಡುಗಳಲ್ಲಿ ಮಹಿಳೆಯರನ್ನು ಕುರಿತಾದ ಅನೇಕ ಸಿಹಿ–ಕಹಿ ಅನುಭವಗಳು ಜಾನಪದ ಸಾಹಿತ್ಯದಲ್ಲಿ ನಮಗೆ ಬೇಕಾದಷ್ಟು ಸಿಗುತ್ತವೆ. ಇವೆಲ್ಲ ಕೇವಲ ಇಂದಿನ ಬಹಳಷ್ಟು ಕವಿತೆಗಳಂತೆ ಶ್ರಮ ವಹಿಸಿ ತಿಣುಕಿ ಬರೆದವುಗಳಲ್ಲ. ಇವು ಅನುಭವದಿಂದ ಹೊರಹೊಮ್ಮಿದ ಸಹಜವಾದ ಅಮೃತ ಬಿಂದುಗಳಾಗಿವೆ. ಹಾಗಾಗಿ ಇವು ಸಹೃದಯರ ಮನಕ್ಕೆ ಹೆಚ್ಚು ಒಗ್ಗುತ್ತದೆ. ಒಂದು ರೀತಿಯ ಉಲ್ಲಾಸದಲ್ಲಿ ಮನಸ್ಸು ತೇಲುವಂತೆ ಮಾಡುತ್ತದೆ.

ಕುಟುಂಬದಲ್ಲಿ ಹೆಣ್ಣಿನ ಸ್ಥಾನ ಬಹು ಮುಖ್ಯವಾದದು. ಕುಟುಂಬದ ಯಜಮಾನಿಯಾಗಿ, ತಾಯಿಯಾಗಿ, ನಾದಿನಿಯಾಗಿ, ಅತ್ತೆಯಾಗಿ ಹೀಗೆ ಜೀವನದ ವಿವಿಧ ಮಜಲುಗಳನ್ನು ಯಶಸ್ವಿಯಾಗಿ ನಿರ್ವಹಿಸುವಾಕೆ. ಇಂತಹ ಸಂದರ್ಭಗಳಲ್ಲಿ ತನ್ನ ಅನುಭವಗಳನ್ನು ಸುಂದರ ತ್ರಿಪದಿಗಳಲ್ಲಿ ಕಟ್ಟಿಕೊಟ್ಟಿದ್ದಾಳೆ. 'ಲಾಲಿ' 'ಜೋಗುಳ' 'ನಿದ್ದೆಪದ' 'ತೊಟ್ಟಿಲು ಪದ' ಮುಂತಾದ ಹೆಸರುಗಳಲ್ಲಿ ಇವುಗಳನ್ನು ಕರೆಯುತ್ತಾರೆ.

ಇವುಗಳಲ್ಲದೆ ರಾಮಾಯಣ/ಮಹಾಭಾರತಕ್ಕೆ ಸಂಬಂಧಿಸಿದ, ಪ್ರಣಯ/ಪ್ರೇಮಕ್ಕೆ ಸಂಬಂಧಿಸಿದ, ಕುಲವೃತ್ತಿ/ದುಡಿಮೆಗೆ ಸಂಬಂಧಿಸಿದ ವಿಷಯಗಳಾಗಿ ವರ್ಗೀಕರಿಸಿದುದನ್ನು ಕಾಣಬಹುದು.

## ಹೆಚ್ಚಿನ ಓದಿಗೆ

- ಕನ್ನಡ ಜಾನಪದ ವಿಶ್ವಕೋಶ
- ಜಾನಪದ ಅಧ್ಯಯನ – ದೇ.ಜ.ಗೌ.
- ಜಾನಪದ ಸ್ವರೂಪ – ಡಾ. ಹಾ.ಮಾ. ನಾಯಕ
- ಕನ್ನಡ ಜನಪದ ಗೀತೆಗಳು – ಡಾ. ಎಸ್.ಕೆ. ಕರೀಂಖಾನ್
- ಶತಮಾನದ ಕನ್ನಡ ಸಾಹಿತ್ಯ – ಜಿ.ಎಚ್. ನಾಯಕ
- ಜಾನಪದ ತಲೆಮಾರು. ಹಿ.ಸಿ. ರಾಮಚಂದ್ರೇಗೌಡ ಮತ್ತು ಡಾ. ಚಕ್ಕೆರೆ ಶಿವಶಂಕರ್.

## ಗಾದೆಗಳು

ನಮ್ಮ ದೈನಂದಿನ ಜೀವನದಲ್ಲಿ ಗಾಢವಾದ ವಿಚಾರಗಳನ್ನು, ಪರಿಣಾಮಕಾರಿಯಾಗಿ 'ಗಾದೆ'ಗಳ ಬಳಕೆಯೊಂದಿಗೆ ಆಶಯ ವಿನಿಮಯ ಮಾಡುವುದನ್ನು ಗಮನಿಸಿರಬಹುದು. ಕೆಲವು ಗಾದೆಗಳನ್ನು ವಿಸ್ತರಿಸಿ ನೋಡುವ. ನಿಮಗೆ ತಿಳಿದಿರುವ ಗಾದೆಗಳನ್ನು ಮಂಡಿಸಿರಿ.

- ತಾಯಿಗಿಂತ ಬಂಧುವಿಲ್ಲ, ಉಪ್ಪಿಗಿಂತ ರುಚಿಯಿಲ್ಲ
- ಕೈ ಕೆಸರಾದರೆ ಬಾಯಿ ಮೊಸರು
- ಮೂಗಿಗಿಂತ ಮೂಗುತಿ ಭಾರ
- ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು
- ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ
- ಅಕ್ಕ ಸತ್ತರೆ ಅಮವಾಸ್ಯೆ ನಿಲ್ಲದು, ಅಣ್ಣ ಸತ್ತರೆ ಹುಣ್ಣಿಮೆ ನಿಲ್ಲದು
- ಅಜ್ಜಿಗೆ ಕೆಮ್ಮಿನ ಚಿಂತೆ, ಮೊಮ್ಮಗನಿಗೆ ತಿಂಡಿ ಚಿಂತೆ

- ಬಡವರ ಮನೆ ಊಟ ಚೆಂದ, ದೊಡ್ಡವರ ಮನೆ ನೋಟ ಚಂದ
- ಮದುವೆ ಮಾಡಿ ನೋಡು ಮನೆ ಕಟ್ಟಿ ನೋಡು

## ಗಾದೆಗಳು ಜನಜೀವನದ ಪ್ರತಿಬಿಂಬಗಳು

ಗಾದೆಗಳು ಅಜ್ಞಾತ ಕವಿಗಳ ಕಲಾಕೃತಿಗಳು. ಮಾನವ ಲೋಕದ ಹೃದಯದಿಂದ ಮಿಡಿದವು. ಇನ್ನೂ ಅನೇಕ ಗುಪ್ತಗಾಮಿನಿಯಾಗಿ ಭಾರತದ ಎಲ್ಲಾ ಜನಾಂಗಗಳನ್ನು ನಡೆಸುತ್ತಿರುವ ಸನಾತನ ಸಂಸ್ಕೃತಿಗೆ ಸಂಬಂಧಿಸಿದುವುಗಳು; ದೇಹಪೋಷಣೆ, ವಂಶ ಪರಿಪಾಲನೆ, ದಯೆ, ದಾನ, ಅಹಿಂಸೆ, ದೇಶಪ್ರೇಮ, ಗುರುಹಿರಿಯರ ಶುಶ್ರೂಷೆ, ಪಾತಿವ್ರತ್ಯ, ಮಾತೃಭಕ್ತಿ ಮುಂತಾದ ವಿಷಯ ಗಳಿಗೆ ಅನ್ವಯಿಸುವ ಗಾದೆಗಳು ನಯದ ದೊಂಕಿಲ್ಲದೆ, ನಾಜೂಕಿನ ಕೊಂಕಿಲ್ಲದೆ, ನೇರವಾಗಿ ಜನಮನದಿಂದ ಮೂಡಿ ಜನಮನವನ್ನು ತಿದ್ದಿ ಬೆಳೆಸುತ್ತದೆ. ನಮ್ಮ ಸಮಾಜದಲ್ಲಿ ಹಾಸು ಹೊಕ್ಕಾಗಿರುವ ಮೇಲು–ಕೀಳು, ಸಿಹಿ–ಕಹಿ, ಕಟ್ಟು ನಿಟ್ಟು, ನಮ್ಮ ಸಂಸಾರ ಜೀವನದಲ್ಲಿ ತುಂಬಿರುವ ರೀತಿ ನೀತಿಗಳು, ಪ್ರೀತಿ ಗೌರವಗಳು, ಅನೇಕ ಗಾದೆಯ ವಿಷಯಗಳಾಗಿವೆ. ಇವುಗಳನ್ನು ಮನನ ಮಾಡಿದರೆ ನಮ್ಮ ಜನರ ಧರ್ಮದೃಷ್ಟಿ ಎತ್ತ ಬಾಗಿದೆ, ಅವರ ನ್ಯಾಯಾನ್ಯಾಯ ವಿಮರ್ಶೆ ಯಾವ ಆಧಾರಗಳ ಮೇಲೆ ನೆಲೆಸಿದೆ, ಅವರನ್ನು ತಿದ್ದಿ ಎಚ್ಚರಿಸುತ್ತಿರುವ ಗೊತ್ತು ಗುರಿಗಳು ಯಾವುವು ಎಂಬುದೆಲ್ಲಾ ಮನದಟ್ಟಾಗುತ್ತದೆ.

## ಗಾದೆಗಳ ವಿಶೇಷತೆಗಳು

- ಅನುಭವ ಸಂಪತ್ತು
- ಪ್ರಾದೇಶಿಕತೆ
- ಜೀವನ ಸಂದರ್ಭ
- ಹಾಸ್ಯ
- ವಿಡಂಬನೆ
- ಭಾಷಾ ವಿಶೇಷತೆ (ಪ್ರಾಸ)
- ಅತಿಶಯೋಕ್ತಿ
- ಸರಳತೆ

ಬಹುಕಾಲದ ವರೆಗೆ ನೀರಿನ ಸೆಳೆತಕ್ಕೆ ಸಿಕ್ಕಿದ ಕಲ್ಲುಗಳು ತಮ್ಮ ಓರೆಕೋರೆಗಳನ್ನು ಕಳೆದುಕೊಂಡು ಚಿಕ್ಕದಾಗಿ ಚೊಕ್ಕವಾಗಿ ಹೊಳೆಯುವಂತೆ ಜನರ ಬಾಯಿ ಬಳಕೆಗೆ ಸಿಕ್ಕಿದ ಅನುಭವದ ಮಾತುಗಳು ಹಿತ–ಮಿತ ರೂಪ ತಾಳಿ ಗಾದೆಗಳಾಗುತ್ತವೆ.

– ಎಚ್.ಎಸ್. ಅಚ್ಚಪ್ಪ

## ಗಾದೆಗಳ ಅರ್ಥ ವ್ಯಾಪ್ತಿ

ಗಾದೆಗಳು ವೇದಗಳಿಗೆ ಸಮಾನ ಎನ್ನುತ್ತಾರೆ. ಗಾದೆಗಳು ಜನಮಾನಸದಲ್ಲಿ ಸ್ಥಾಯಿಯಾಗಿ ನಿಂತ ಅನುಭವದ ನುಡಿಗಳು. ನೂರಾರು ವರ್ಷಗಳ ಅನುಭವದ ಆಧಾರದಲ್ಲಿ ನಿರ್ಮಿತವಾದ ನುಡಿಗಟ್ಟುಗಳು. ಇವು ಭಾಷೆಗೆ ಒಂದು ಸೊಗಡನ್ನು ನೀಡುತ್ತವೆ. ಒಂದು ಪ್ರಾದೇಶಿಕತೆಯ ಮೆರುಗನ್ನೂ ನೀಡುತ್ತವೆ. ಗಾದೆಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನ ರೂಪದಲ್ಲಿ ಬಳಕೆಯಾಗಿರುವುದುಂಟು. ಗಾದೆ ಮಾತುಗಳನ್ನು ನುಡಿಗಟ್ಟುಗಳಾಗಿ ಪ್ರಯೋಗಿಸುವಾಗ ಅದು ಆಯಾ ಕಾಲದ ಸಾಮಾಜಿಕ ಜೀವನವನ್ನೂ ಜನರ ಜೀವನಾಂಶವನ್ನು ಪ್ರತಿಬಿಂಬಿಸುತ್ತವೆ. ಎಲ್ಲಾ ಗಾದೆಗಳೂ ಸಂದರ್ಭಕ್ಕನುಸರಿಸಿ ವಾಚ್ಯಾರ್ಥವಾಗಿಯೂ, ಅಂತರಂಗದಲ್ಲಿ ಅಗಾಧವಾದ ಇನ್ನೊಂದು ಆಶಯವನ್ನು ಬಿಂಬಿಸುವ ಸೂಚ್ಯಾರ್ಥವಾಗಿಯೂ ವ್ಯತ್ಯಸ್ತ ಅರ್ಥಗಳನ್ನು ನೀಡುವವುಗಳಾಗಿ ಕಂಡುಬರುತ್ತವೆ.

ಅಂತೆಯೇ ಕಾಲಕ್ಕನುಸರಿಸಿ ಕೆಲವು ಗಾದೆಗಳು ತಮ್ಮ ಅರ್ಥವ್ಯಾಪ್ತಿಯನ್ನು, ಪ್ರಸ್ತುತತೆಯನ್ನು ಕಳೆದುಕೊಂಡು ಬೇರೆಯೇ ಅರ್ಥದ ರೂಪದಲ್ಲಿ ಪ್ರಯೋಗಿಸಲ್ಪಡುತ್ತದೆ.

ಉದಾಹರಣೆಗೆ 'ಮಾಡಿದ್ದುಣ್ಣೋ ಮಹರಾಯ' ಎಂಬ ಗಾದೆಯನ್ನು ತೆಗೆದುಕೊಂಡರೆ, ಇವತ್ತಿನ ಸಂದರ್ಭದಲ್ಲಿ ಈ ಗಾದೆ ಸತ್ಯಕ್ಕೆ ದೂರವಾಗಿದೆ. ಯಾರೋ ಕಳ್ಳತನ ಮಾಡಿದ್ದಕ್ಕೆ ಇನ್ನಾರಿಗೋ ಶಿಕ್ಷೆಯಾಗುವುದು, ಯಾರೋ ಕೊಲೆ ಮಾಡಿದ್ದಕ್ಕೆ ಇನ್ಯಾರೋ ಗಲ್ಲಿಗೇರುವುದು ಈಗ ಸಾಮಾನ್ಯವಾಗಿ ಬಿಟ್ಟಿದೆ. ಹಾಗಂತ ಈ ಗಾದೆಯನ್ನು ರದ್ದುಪಡಿಸಿದರೆ ನಮ್ಮ ಜನಪದ ಸಾಹಿತ್ಯ ಪ್ರೇಮಿಗಳಿಗೆ ಬೇಸರವಾಗಬಹುದು.

## ಚಟುವಟಿಕೆಗಳು

- ಗಾದೆಗಳ ಸಂಗ್ರಹ, ವಿಸ್ತರಣೆ, ಗಾದೆಗಳ ಆಟ
- ಗಾದೆಗಳ ಹುಟ್ಟು, ಬೆಳವಣಿಗೆ, ವರ್ಗೀಕರಣ–ಒದಿನ ಟಿಪ್ಪಣಿ
- ಗಾದೆಗಳನ್ನು ವಿಸ್ತರಿಸಿ ಬರೆಯಿರಿ . ಉದಾ: . ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ, . ಕೈ ಕೆಸರಾದರೆ ಬಾಯಿ ಮೊಸರು

## ಹೆಚ್ಚಿನ ಓದಿಗೆ

- ಕನ್ನಡ ವಿಷಯ ವಿಶ್ವಕೋಶ : ಪ್ರಧಾನ ಸಂಪಾದಕ ಡಾ.ಹಾ.ಮಾ. ನಾಯಕ
- ಕನ್ನಡ ಗಾದೆಗಳ ಕೋಶ : ಟಿ.ವಿ. ವೆಂಕಟರಮಣಯ್ಯ
- ಗಾದೆಗಳ ಭಂಡಾರ : ಜಂಗಮಕೋಟೆ ಕೃಷ್ಣಶಾಸ್ತ್ರಿ
- ಗ್ರಂಥಸ್ಥ ಗಾದೆಗಳು : ಎಚ್.ಎಸ್. ಅಪ್ಪಚ್ಚು
- ಕನ್ನಡ ಗಾದೆಗಳು : ಎಚ್.ಎಸ್. ಅಪ್ಪಚ್ಚು
- ಕನ್ನಡ ಗಾದೆಗಳು : ರಾಗೌ
- ಗಾದೆಗಳ ಲೋಕ : ಎಚ್.ಎಸ್. ಗಂಗಾಧರಾ ಚೌರ್

## ನುಡಿಗಟ್ಟುಗಳು

ಯಾವುದೇ ಭಾಷೆಯಾಗಲೀ, ಅದು ಬೆಳೆದಂತೆಲ್ಲಾ ಅದರಲ್ಲಿ ಆಡುವ ಮಾತಿನ ಸೊಗಸು ಹೆಚ್ಚುವ ಹಾದಿಯಲ್ಲಿ ವಿಶಿಷ್ಟ ಪದ ಪುಂಜಗಳೂ, ಅರ್ಥಗರ್ಭಿತ ವಾಕ್ಯ ಸಮುಚ್ಚಯಗಳೂ ಪ್ರಧಾನ ಪಾತ್ರ ವಹಿಸುತ್ತವೆ.

'ನುಡಿಗಟ್ಟು' ಎಂದರೆ ಪದಶಃ ತಿಳಿಸುವ ಸಾಮಾನ್ಯ ಅರ್ಥಕ್ಕೆ ಹೊರತಾಗಿ, ಮಿಗಿಲಾಗಿ, ವಿಶೇಷ ಅರ್ಥವನ್ನು ಸ್ಪುರಿಸುವ ವಾಗ್ಧಾರೆ (ಇಂಗ್ಲೀಷ್‌ನಲ್ಲಿ 'ಈಡಿಯಮ್') ಎಂದು ಕರೆಯುತ್ತಾರೆ. 'ಅವಳು ಕಣ್ಣೀರಿನಲ್ಲಿ ಕೈ ತೊಳೆಯುತ್ತಾಳೆ' ಎಂದಾಗ, ಈ ನುಡಿಗಟ್ಟು 'ತುಂಬಾ ದುಃಖವನ್ನು ಅನುಭವಿಸುತ್ತಾಳೆ' ಎಂದು ಸೂಚ್ಯವಾಗಿ ಹೊಸದೇನೋ ಬೆಳಕನ್ನು ಚೆಲ್ಲುತ್ತದೆ. ಹೋಲಿಕೆ, ಅರ್ಥ ವಿಸ್ತಾರ, ಸ್ವಲ್ಪ ಮಟ್ಟಿನ ಉತ್ಪ್ರೇಕ್ಷೆಗಳು ನುಡಿಗಟ್ಟಿನ ಗುಣಗಳು.

## ಕೆಲವು ನುಡಿಗಟ್ಟುಗಳನ್ನು ವಿಸ್ತರಿಸುವ

- ಒಂದು ಕಣ್ಣಿಗೆ ಸುಣ್ಣ, ಒಂದು ಕಣ್ಣಿಗೆ ಬೆಣ್ಣೆ
- ಹಾಲು ತುಪ್ಪದಲ್ಲಿ ಕೈ ತೊಳೆ
- ಒಂಟಿ ಕಾಲಲ್ಲಿ ನಿಲ್ಲು

- ಗಾಳಿಮಾತು
- ಅಟ್ಟವನ್ನು ಬೆಟ್ಟಮಾಡು
- ಗೆದ್ದೆತ್ತಿನ ಬಾಲಹಿಡಿ
- ಅಡ್ಡಗೋಡೆಯ ಮೇಲಿನ ದೀಪ
- ಛಳಿಜ್ವರ ಹಿಡಿಸಿದೆ
- ಅತ್ತಧರೆ, ಇತ್ತ ಪುಲಿ
- ಗುಬ್ಬಿಮೇಲೆ ಬ್ರಹ್ಮಾಸ್ತ್ರ
- ಅರಣ್ಯರೋದನ
- ಕೈಕೊಡು
- ಅಡ್ಡಗಾಲು ಹಾಕು
- ಶುಕ್ರದೆಸೆ
- ಗಾಳಿಗೋಪುರ

## ಚಟುವಟಿಕೆ

ಹೆಚ್ಚಿನ ನುಡಿಗಟ್ಟುಗಳನ್ನು ಸಂಗ್ರಹಿಸಿ, ವ್ಯಾಖ್ಯಾನಿಸುವುದು, ಸಂಚಿಕೆ ತಯಾರಿ

### ಒಗಟುಗಳು

ಜನಪದ ಸಾಹಿತ್ಯದಲ್ಲಿ ಒಗಟುಗಳ ಬಳಕೆ ವಿಪುಲವಾಗಿದೆ. ಒಗಟು ಎಂದರೆ ಒಬ್ಬರು ಮತ್ತೊಬ್ಬರಿಗೆ ಒಡ್ಡಿದ ಸವಾಲು, ಸಮಸ್ಯೆ. ಒಂದು ವಸ್ತುವನ್ನು ಮತ್ತೊಂದು ವಸ್ತುವಿನ ಮೂಲಕ ಚಮತ್ಕಾರವಾಗಿ ವರ್ಣಿಸಿ ಆ ಅವ್ಯಕ್ತ ವಸ್ತುವನ್ನು ಹೆಸರಿಸುವುದಕ್ಕೆ ಹೇಳುವುದು ಇದರ ರೀತಿ. ಜನಸಾಮಾನ್ಯರ ಪ್ರತಿಭಾ ಸಾಮರ್ಥ್ಯಕ್ಕೂ ಅದ್ಭುತ ಕಲ್ಪನಾ ಶಕ್ತಿಗೂ ಜ್ವಲಂತ ನಿದರ್ಶನವಾಗಿರುವ ಜನಪದ ಸಾಹಿತ್ಯ ಪ್ರಕಾರ. ಅರ್ಥಗೋಪನ, ಅಸ್ಪಷ್ಟತೆ, ರೂಪಕ, ಸಾಂಕೇತಿಕತೆ, ಹಾಸ್ಯ, ಅಶ್ಲೀಲತೆ, ಪ್ರಾಸ, ಅನುಪ್ರಾಸ, ಲಯಬದ್ಧತೆ, ಸಾರ್ವತ್ರಿಕತೆ ಇತ್ಯಾದಿಗಳು ಒಗಟಿನ ಲಕ್ಷಣಗಳು ಎನ್ನಬಹುದು. ಅದರಲ್ಲಿ ಎರಡು ವಸ್ತುಗಳ ತರ್ಕಬದ್ಧವಾದ ಸಮೀಕರಣವಿರುತ್ತದೆ. ಒಗಟುಗಳು ಬುದ್ಧಿಶಕ್ತಿಯ ಪರೀಕ್ಷೆಗೊಂದು ಒಳ್ಳೆಯ ಒರೆಗಲ್ಲು. ಪ್ರಾಚೀನ ಕಾಲದ ಜನರು ಬೇರೆ ಬೇರೆ ಸಂದರ್ಭಗಳಲ್ಲಿ ಒಗಟುಗಳನ್ನು ಹೇಳಿ ಬುದ್ಧಿಶಕ್ತಿಯನ್ನು ಪರೀಕ್ಷಿಸುತ್ತಿದ್ದರು. ಅದು ಕೆಲವು ಸಂದರ್ಭಗಳಲ್ಲಿ ಜನರಿಗೆ ಹಾಸ್ಯವನ್ನೂ, ವಿನೋದವನ್ನು ನೀಡುತ್ತಿತ್ತು. ಜನಸಾಮಾನ್ಯರಿಗೆ ಇದು ಮನರಂಜನೆಯನ್ನು ನೀಡುವುದಾಗಿದ್ದರೂ ರಾಜನ ಆಸ್ಥಾನಗಳಲ್ಲಿ ಅವು ವಿದ್ವತ್ ಪರೀಕ್ಷೆಗೂ ಒದಗುತ್ತಿದ್ದವು. ಜನಪದರ ಲೋಕಾನುಭವ, ಸೂಕ್ಷ್ಮ ಸಂವೇದನೆ, ಕಲ್ಪನಾಶಕ್ತಿಗಳು ಉತ್ತಮವಾದ ಒಗಟುಗಳಲ್ಲಿ ಕಂಡುಬರುತ್ತವೆ. ಪಾಂಡಿತ್ಯ ಪ್ರದರ್ಶನ, ಕೀರ್ತಿ ಸಂಪಾದನೆ, ಧನಲಾಭ, ಪ್ರಣಯ ಸಾಫಲ್ಯ ಇತ್ಯಾದಿಗಳಿಗಾಗಿ ಪ್ರಾಚೀನ ಕಾಲದಿಂದಲೂ ಒಗಟುಗಳನ್ನು ಬಳಸುತ್ತಿದ್ದರು. ಕನ್ನಡದಲ್ಲಿ ಒಂಟು, ಒಡಪು, ಒಡಗಥೆ ಮೊದಲಾದ ಹೆಸರುಗಳಿಂದಲೂ ಇದನ್ನು ಕರೆಯಲಾಗುತ್ತದೆ. ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಅಲ್ಲಲ್ಲಿ ಮುಂಡಿಗೆ ಮತ್ತು ಮುಡಿಗೆ ಎಂಬ ಪದಗಳೂ ಕಾಣಿಸಿಕೊಳ್ಳುತ್ತವೆ. ಒಗಟು ಮತ್ತು ಒಗಡು ಬೇರೆ ಬೇರೆ ಎಂಬ ಅಭಿಪ್ರಾಯವೂ ಇದೆ. ಒಗಟು ಪದಕ್ಕೆ 'ಸವಾಲು ಹಾಕು' 'ಎಸೆ' ಎಂಬ ಅರ್ಥಗಳಲ್ಲಿ ಅರ್ಥವಿವರಣೆಯನ್ನು ನೀಡಲಾಗಿದೆ. ಒಗಟುಗಳಂತೆ ಒಡಪುಗಳಲ್ಲಿ ಸಮಸ್ಯೆಗಳಾಗಲೀ, ಗೂಢತೆಗಳಾಗಲೀ ಇಲ್ಲದಿರುವುದು ಮಾತ್ರವಲ್ಲ ಅವು ಸಾರ್ವತ್ರಿಕವಾಗಿ ಬಳಕೆಯಾಗದೆ, ಉತ್ತರ ಕರ್ನಾಟಕದ ಮದುವೆ ಮುಂತಾದ ಮಂಗಳ ಸಂದರ್ಭಗಳಲ್ಲಿ ಮಾತ್ರ ಬಳಕೆಯಾಗುತ್ತವೆ ಅನ್ನುವ ಕಾರಣದಿಂದ ಒಗಟು ಮತ್ತು ಒಡಪು ಒಂದೇ ಅರ್ಥದ ಪದಗಳಲ್ಲ ಎಂಬುದಾಗಿ ಪ್ರತಿಪಾದಿಸಲಾಗಿದೆ. ಒಡಪುಗಳ

ಮುಖ್ಯ ಲಕ್ಷಣ ಕೇಳುವವರಿಗೆ ಸವಾಲೊಡ್ಡುವುದಲ್ಲ ಬದಲಾಗಿ ಮಾತಿನ ಬೆಡಗಿನಿಂದ ಅವರನ್ನು ರಂಜಿಸುವುದು. ಮಕ್ಕಳು ಒಗಟುಗಳನ್ನು ಹೇಳುವುದರಲ್ಲಿ ಬಹಳಷ್ಟು ಆಸಕ್ತಿಯನ್ನು ತಳೆಯುತ್ತಾರೆ. ಇದು ಮಕ್ಕಳ ಎಳೆಯ ಮನಸ್ಸಿಗೆ ಆಕರ್ಷಣೀಯವಾಗಿ ತೋರದಿರಲಾರದು. ಅವರೊಂದಿಗೆ ಮುದುಕರೂ ಇದನ್ನು ಇಷ್ಟಪಡುತ್ತಾರೆ. ಸಾಮಾನ್ಯವಾಗಿ ರಾತ್ರೆ ನಿದ್ರಿಸುವುದಕ್ಕಿಂತ ಮೊದಲು ಒಗಟುಗಳನ್ನು ಹೇಳುವುದರಲ್ಲಿ ಜನರು ಆಸಕ್ತಿಯನ್ನು ತೋರಿಸುತ್ತಾರೆ. ವಿಶೇಷ ಸಂದರ್ಭಗಳಲ್ಲಿ ಬೇರೆ ಬೇರೆ ಮಕ್ಕಳು ಜೊತೆಗೂಡಿದಾಗಲೂ ಒಗಟುಗಳನ್ನು ಹೇಳಿ ಸಂತೋಷಗೊಳ್ಳುವುದಿದೆ.

## ಒಗಟುಗಳತ್ತ ಒಂದು ನೋಟ

1. ನೀರಿನಲ್ಲಿ ಹುಟ್ಟಿ
   ನೀರಿನಲ್ಲಿ ಬೆಳೆದು
   ನೀರು ಕಂಡರೆ
   ಹರಿದೋಡುವುದು (ಉತ್ತರ : ಉಪ್ಪು)
   –ಇದೇ ಮಾದರಿಯಲ್ಲಿ ಬೇರೆ
   ಉತ್ತರವಿರುವ ಇನ್ನೊಂದು ಒಗಟನ್ನು ಕೆಳಗೆ ಕೊಡಲಾಗಿದೆ

2. ನೀರಿನಲ್ಲಿ ಹುಟ್ಟುತ್ತದೆ
   ನೀರಿನಲ್ಲಿ ಬೆಳೆಯುತ್ತದೆ
   ನೀರಲ್ಲಿ ಕ್ಷಣಕ್ಕೆ ಸಾಯುತ್ತದೆ (ಉತ್ತರ : ನೀರಿನ ಗುಳ್ಳೆ)

3. ತಾಯಿ ಪಾತಾಳಕ್ಕೆ
   ತಂದೆ ಆಕಾಶಕ್ಕೆ
   ಮಗ ವ್ಯಾಪಾರಕ್ಕೆ
   ತೊಟ್ಟಿಲಿನ ಶಿಶು ದೇವರಿಗೆ

   (ಉತ್ತರ: ಅಡಕೆ ಮರ. ಅದರ ಬೇರು, ತುದಿ, ಕಾಯಿ, ಸಿಂಗಾರವನ್ನು ಉದ್ದೇಶಿಸಿ ಈ ಒಗಟನ್ನು ಸೃಷ್ಟಿಸಲಾಗಿದೆ. ಅಡಕೆ ಮರಕ್ಕೆ ಅದರ ಬೇರೆ ಬೇರೆ ಭಾಗಗಳಿಗೆ ಸಂಬಂಧಿಸಿದಂತೆ ಇನ್ನೂ ಅನೇಕ ಒಗಟುಗಳು ಬೇರೆ ಬೇರೆ ಪ್ರದೇಶಗಳಲ್ಲಿ ಬಳಕೆಯಲ್ಲಿದೆ).

4. ಜುಟ್ಟುಂಟು ಪೂಜಾರಿಯಲ್ಲ
   ಮೂರು ಕಣ್ಣುಂಟು ಮುಕ್ಕಣ್ಣನಲ್ಲ
   ನೀರುಂಟು ನದಿಯಲ್ಲ
   (ಉತ್ತರ: ತೆಂಗಿನಕಾಯಿ)

5. A ಇವನು B ಯ ತಂದೆ ಆದ್ರೆ B ಯು Aಯ ಮಗನಲ್ಲ. ಹೇಗೆ? (ಉತ್ತರ : B ಯು Aಯ ಮಗಳು)

## ಉಗಮ

ಮಾನವ ಕುಲದೊಂದಿಗೆ ಒಗಟು ಹುಟ್ಟಿರಬಹುದೆಂದು ಹೇಳಬಹುದು. ಮಾತಿನ ಸಂಪ್ರದಾಯದಲ್ಲಿ ಒಗಟೇ ಎಲ್ಲಕ್ಕಿಂತ ಮೊದಲಿನದೆಂಬ ಅಭಿಪ್ರಾಯವೂ ಉಂಟು. ಆದಿಮಾನವ ಪ್ರಕೃತಿಯ ವಸ್ತುಗಳಲ್ಲಿ ಗುರುತಿಸಿದ ಸಾದೃಶ್ಯವೇ ಒಗಟುಗಳ ನಿರ್ಮಾಣಕ್ಕೆ ತಳಹದಿ. ಅವನು ಸಾದೃಶ್ಯಜ್ಞಾನದಿಂದುಂಟಾದ ವಿಸ್ಮಯದಲ್ಲೇ ನಿಲ್ಲದೆ ಅದನ್ನು ಹಾಸ್ಯ, ಮನೋರಂಜನೆ ಮತ್ತು ಬುದ್ಧಿಶಕ್ತಿಯ ಪರೀಕ್ಷೆಗಾಗಿ ಬಳಸಿಕೊಳ್ಳಲು ಮಾಡಿದ ಪ್ರಯತ್ನವೆ ಒಗಟಿನ ರೂಪ ತಳೆಯಿತು.

## ವರ್ಗೀಕರಣ

ಒಗಟುಗಳಲ್ಲಿ ಹಲವು ಬಗೆಗಳಿವೆ. ಕೆಲವು ಪದ್ಯರೂಪದಲ್ಲಿದ್ದರೆ ಮತ್ತೆ ಕೆಲವು ಲಯಬದ್ಧ ಗದ್ಯದಲ್ಲಿರುತ್ತದೆ. ಪದ್ಯರೂಪದ ಒಗಟು ಪ್ರಾಸಾನುಪ್ರಾಸಗಳಿಂದ ನಿಯೋಜಿತವಾಗಿದ್ದು ಛಂದೋಬದ್ಧ ಅಭಿವ್ಯಕ್ತಿಯಾಗಿರುತ್ತದೆ. ಒಗಟಿನ ಸೌಂದರ್ಯಕ್ಕೆ ಕಾರಣಭೂತವಾದದ್ದು ಅದರಲ್ಲಿನ ಲಯಬದ್ಧತೆ. ಒಗಟುಗಳನ್ನು ಸ್ಥೂಲವಾಗಿ ಜನಪದ ಒಗಟುಗಳು ಮತ್ತು ಸಾಹಿತ್ಯಿಕ ಒಗಟುಗಳು ಎಂದು ಎರಡು ವಿಭಾಗಗಳಾಗಿ ವಿಂಗಡಿಸಬಹುದು. ಜನಸಾಮಾನ್ಯರ ಬಾಯಿಂದ ಬಾಯಿಗೆ ಹರಿದು ಬಂದಿರುವ ಒಗಟುಗಳು ಜನಪದ ಒಗಟುಗಳು. ಇವೇ ಉಳಿದ ವರ್ಗಕ್ಕೆಲ್ಲಾ ಮೂಲ ಹಾಗೂ ಪುರಾತನ. ಬಹುಮಟ್ಟಿಗೆ ಕೃತಕವೆನಿಸಿ, ಸಾಹಿತ್ಯ ಪ್ರವಾಹದ ಮೂಲಕ ಹರಿದು ಬಂದಿರುವಂಥವು ಸಾಹಿತ್ಯಿಕ ಒಗಟುಗಳು.

## ಆಧುನಿಕರಲ್ಲಿ ಒಗಟು

ಆಧುನಿಕ ಕಾಲದಲ್ಲೂ ಹೊಸ ಹೊಸ ಒಗಟುಗಳು ಹುಟ್ಟಿಕೊಂಡಿವೆ. ಈ ರಚನೆಗಳೂ ಕೂಡಾ ಸ್ವಾರಸ್ಯಕರವಾಗಿಯೂ ಮನೋಜ್ಞವಾಗಿಯೂ ಕಂಡುಬರುತ್ತವೆ. ಹೊಸ ಸಾಂಕೇತಿಕ ಪದಗಳು, ಶಾಸ್ತ್ರಕ್ಕೆ ಸಂಬಂಧಿಸಿದ ಪದಗಳು, ಜೀವನದ ಕಡೆಗಿನ ದೃಷ್ಟಿಕೋನ. ಹೊಸಗನ್ನಡ ಭಾಷೆ ಇವುಗಳೆಲ್ಲಾ ಆಧುನಿಕರ ಒಗಟುಗಳಲ್ಲಿ ಕಂಡುಬರುತ್ತದೆ.

ಮೊಗ್ಗಾಗಿ ಅರಳುವುದು ಪುಷ್ಪ ತಾನಲ್ಲ
ಸೂರ್ಯ ಕಿರಣಕ್ಕೂ ಅದು ಬಾಡುವುದಿಲ್ಲ

ಈ ಒಗಟಿನ ಉತ್ತರ ಕೊಡೆ. ಮಡಚಿಟ್ಟು ಮೊಗ್ಗಾಗಿದ್ದ ಕೊಡೆ ಬಿಡಿಸಿದಾಗ ಹೂವಾಗಿ ಅರಳುತ್ತದೆ. ಹೂವಾಗಿ ಅರಳುವ ಗುಣ ಕೊಡೆಗೂ ಹೂವಿಗೂ ಸಮಾನವಾದ ಗುಣ. ಅದು ಪುಷ್ಪ ತಾನಲ್ಲವಾದುದರಿಂದ ಸೂರ್ಯ ಕಿರಣಕ್ಕೆ ಬಾಡುವುದಿಲ್ಲ. ಕೊಡೆ ಎನ್ನುವ ಉತ್ತರವನ್ನು ಸೂಚ್ಯವಾಗಿ ಅದು ಒದಗಿಸುವುದು. ಆಧುನಿಕ ಒಗಟುಗಳಿಗೆ ಉದಾ–

- ಚಿಕ್ಕ ಮುಳ್ಳು ಮೆಲ್ಲ ಮೆಲ್ಲ
  ದೊಡ್ಡ ಮುಳ್ಳು ಬೇಗ ಬೇಗ (ಉತ್ತರ : ಗಡಿಯಾರದ ಮುಳ್ಳುಗಳು)
- ಮೂಗಿರುವ ಸುಂದರಿ ಹುಡುಗಿ
  ಮೂಗು ಹಿಡಿದರೆ ಹಾಡುವುದು (ಉತ್ತರ: ರೇಡಿಯೋ)

## ಹೆಚ್ಚಿನ ಓದಿಗೆ

1. ಕನ್ನಡ ವಿಷಯ ವಿಶ್ವಕೋಶ – ಪ್ರಧಾನ ಸಂಪಾದಕರು : ಡಾ.ಹಾ. ಮಾ ನಾಯಕ
2. ಕನ್ನಡಂಗಳ ಒಗಟುಗಳು – ಸಂಪಾದಕರು : ಪ್ರೊ. ಬೋಳಾರ ಶಿವರಾಮ ಶೆಟ್ಟಿ

## ಚಟುವಟಿಕೆಗಳು

- ಒಗಟುಗಳಲ್ಲಿನ ಸಾಹಿತ್ಯಿಕ ಅಂಶಗಳು, ಉಪಮೆ, ಭಾಷಾ ವಿಶೇಷತೆ, ಬುದ್ಧಿ ಚಮತ್ಕೃತಿಗಳ ಕುರಿತು ಪ್ರಬಂಧ ಬರೆಯುವುದು.
- ಹೊಸ ಮತ್ತು ಹಳೆಯ ಒಗಟುಗಳನ್ನು ಸಂಗ್ರಹಿಸಿ ಹೋಲಿಸಿ ಟಿಪ್ಪಣಿ ತಯಾರಿಸುವುದು.
- ಒಗಟು ಹೇಳುವ ಪಂದ್ಯ ನಡೆಸುವುದು.
- ನಮ್ಮ ಪ್ರದೇಶದಲ್ಲಿ ಬಳಕೆಯಲ್ಲಿರುವ ಒಗಟುಗಳನ್ನು ಹಿರಿಯರಿಂದ ಕೇಳಿ ಸಂಗ್ರಹಿಸುವುದು.

* * *

ಘಟಕ – 2

# ಭಾಷಾ ಕಲಿಕೆಯ ಆರಂಭ

ತಾಯಿಯ ಗರ್ಭಾಶಯದಲ್ಲೇ ಹಲವು ರೀತಿಯ ಶಬ್ದಗಳಿಗೆ ಪ್ರತಿಕ್ರಿಯೆ ನೀಡುತ್ತಾ ಭೂಮಿಯಲ್ಲಿ ಜನ್ಮ ತಾಳಿದೊಡನೆ ಪಂಚೇಂದ್ರಿಯಗಳ ಮೂಲಕ ಸಂವೇದನೆ (Sensation) ಯನ್ನು ನಡೆಸುತ್ತಾ ಮಗು ಪ್ರಪಂಚವನ್ನು ತಿಳಿಯುವುದಲ್ಲವೇ? ತಾಯಿಯನ್ನು ಮಗು ಗುರುತಿಸುವುದು ಹೇಗಾಗಿರಬಹುದು? ತಾಯಿ ಮತ್ತು ಮಗು ತಮ್ಮೊಳಗಿನ ಆಶಯ ವಿನಿಮಯ ಹೇಗಾಗಿರಬಹುದು? ಮಗುವಿನ ಅಳುವನ್ನು ಆಶಯವಿನಿಮಯದ ಸಾಧನವಾಗಿ ಲೆಕ್ಕಹಾಕಲು ಸಾಧ್ಯವೇ? ಮಗು ಮಾತನಾಡಲು ತೊಡಗುವುದು ಯಾವಾಗ? ಶಿಶು ಭಾಷಾ ಕಲಿಕಾ ಚಿಂತನೆಗೆ ಸಂಬಂಧಪಟ್ಟು ಮೊದಲಿಗೆ ನಮ್ಮ ಮನಸ್ಸಿನಲ್ಲಿ ಮೂಡಿ ಬರುವುದು ಇಂತಹ ಕೆಲವು ಪ್ರಶ್ನೆಗಳಾಗಿವೆ.

ಮಗುವಿನ ನಗು, ಮಗು ಹೊರಡಿಸುವ ಕೂಗು (Cooing) ಹಲವು ರೀತಿಯ ಶಬ್ದಗಳು (ತೊದಲ್ನುಡಿ/babling) ಇತ್ಯಾದಿಗಳನ್ನು ಭಾಷೆಯ ಕಡೆಗಿರುವ ವಿವಿಧ ಹಂತಗಳಾಗಿ ಭಾಷಾ ಶಾಸ್ತ್ರಜ್ಞರು ಲೆಕ್ಕ ಹಾಕುವರು.

ವಿವಿಧ ವಯಸ್ಸಿನ ಮಕ್ಕಳನ್ನು ನಿರೀಕ್ಷಿಸಿ ಭಾಷಾ ರೀತಿಗಳನ್ನು ವಿಶೇಷತೆಗಳನ್ನು ಕಂಡುಹಿಡಿದು ನಿರೀಕ್ಷಣೆಗಳನ್ನು ದಾಖಲಿಸುವುದು.

**ಓದುವ ಚರ್ಚೆ ಮಾಡುವ**

ಭಾಷೆ ಎಂಬುದು ಮಾನವರಿಗೆ ಲಭಿಸಿದ ಒಂದು ವರವಾಗಿದೆ. ಆಶಯ ವಿನಿಮಯಕ್ಕಾಗಿ ಭಾಷೆಯನ್ನು ಉಪಯೋಗಿಸುವ ಏಕಮೇವ ಜೀವಿಯೂ ಮಾನವನೇ ಆಗಿದ್ದಾನೆ. ಮಾನವನಲ್ಲಿ ಭಾಷಾರ್ಜನೆ ಆರಂಭವಾಗುವ ಹಂತ ಯಾವುದು ? ಜನ್ಮ ತಾಳಿದ ಬಳಿಕವೆಂದೂ ಗರ್ಭಸ್ಥ ಶಿಶುವಾಗಿರುವ ಸಮಯದಿಂದಲೇ ಎಂದೂ ಭಿನ್ನ ಅಭಿಪ್ರಾಯಗಳು ಈಗಲೂ ಪ್ರಚಲಿತದಲ್ಲಿವೆ.

ಜನಿಸಿದ ಆರು ತಿಂಗಳಲ್ಲಿ ಮಗು ಚಲನೆಗಳ ಮೂಲಕ, ಶಬ್ದಗಳ ಮೂಲಕ, ಪ್ರತಿಕ್ರಿಯೆಗಳ ಮೂಲಕ ತನ್ನ ಆಶಯಗಳನ್ನು ಪ್ರಕಟಿಸುವುದು. ಈ ಹಂತವನ್ನು ಕೂಗುವ ಹಂತ ಎಂದು ಹೇಳಬಹುದು. ಆರು ತಿಂಗಳ ಬಳಿಕ ಹೆಚ್ಚು ಸ್ಪಷ್ಟವಾಗಿ ಆಶಯ ಸಂವೇದನೆಯನ್ನು ಆರಂಭಿಸುವುದು. ಈ ಹಂತವನ್ನು ತೊದಲ್ನುಡಿ ಹಂತ ಎಂದು ಹೇಳುವರು.

ಸಾಧಾರಣ ಒಂದೂವರೆ ವರ್ಷ ಪ್ರಾಯವಾಗುವಾಗ ಮಗು ಒಂದು ಸ್ವಿಚ್ ಓನ್ ಮಾಡಿದ ಹಾಗೆ ಭಾಷೆಯ ಪದಗಳನ್ನು ಉಪಯೋಗಿಸಿ ಆಶಯವಿನಿಮಯ ನಡೆಸಲು ಆರಂಭಿಸುವುದು. ಒಂಟಿ ಪದಗಳಿಂದ ಆರಂಭಿಸಿ ಕ್ರಮೇಣ ದ್ವಿಪದಗಳನ್ನುಪಯೋಗಿಸಲಾರಂಭಿಸುವುದು. ಕ್ರಮೇಣ ಮಗುವಿನ ಭಾಷಾಪ್ರಯೋಗದಲ್ಲುಂಟಾಗುವ ಬದಲಾವಣೆ ಅಪಾರವಾದುದು. ನಾಲ್ಕು ವರ್ಷ ಪ್ರಾಯವಾಗುವಾಗ ಭಾಷೆಯ ವ್ಯಾಕರಣದ ಪ್ರಾಥಮಿಕ ಅಂಶಗಳನ್ನು ಸೇರಿಸಿಕೊಂಡು ಭಾಷೆಯನ್ನು ಬಳಸಲು ಮಗು ಕಲಿಯುವುದು. ಸಂಕೀರ್ಣವಾದ ಭಾಷಾಂಶಗಳನ್ನು ಮಕ್ಕಳು ಇಷ್ಟು ಚಿಕ್ಕ ವಯಸ್ಸಿನಲ್ಲಿ ಹೇಗೆ ಕರಗತ ಮಾಡಿಕೊಳ್ಳುವರು ಎಂಬುದು ಇಂದಿಗೂ ಅದ್ಭುತ ವಿಷಯವಾಗಿಯೇ ಉಳಿದಿದೆ. ಭಾಷೆಯನ್ನು

ಸ್ವಾಯತ್ತಗೊಳಿಸುವ ಸಾಮರ್ಥ್ಯ ಜನ್ಮಸಿದ್ಧವಾಗಿದೆಯೆಂದೂ ಅನುಕೂಲ ಸಂದರ್ಭಗಳಲ್ಲಿ ಮಕ್ಕಳಿಗೆ ಭಾಷೆಯನ್ನು ಸ್ವಾಯತ್ತಗೊಳಿಸಲು ಸಾಧ್ಯವೆಂದೂ ಚೋಂಸ್ಕಿಯವರಂತಹ ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಮಕ್ಕಳು ಭಾಷೆಯನ್ನು ಸ್ವಾಯತ್ತಗೊಳಿಸುವ ರೀತಿಯನ್ನು ಮೌಲ್ಯಮಾಪನ ಮಾಡುವಾಗ ಎರಡು ವಿಚಾರಗಳು ಸ್ಪಷ್ಟವಾಗುವುದು.

- ಮಕ್ಕಳು ಭಾಷೆಯನ್ನು ಸ್ವಾಯತ್ತಗೊಳಿಸುವುದು ಅನುಕರಣೆಯ ಮೂಲಕವಲ್ಲ.
- ಮಕ್ಕಳ ಭಾಷಾಭಿವ್ಯಕ್ತಿಗಿಂತಲೂ ಅವರ ಭಾಷಾಗ್ರಹಣ ಸಾಮರ್ಥ್ಯ ಹೆಚ್ಚು ಬೆಳೆದಿರುತ್ತದೆ.

- ಈ ಹಿಂದೆ ಕಂಡುಕೊಂಡ ಆಶಯಗಳನ್ನು ಕೂಡಾ ಸೇರಿಸಿಕೊಂಡು ಅದರ ಆಧಾರದಲ್ಲಿ ಮಗುವಿನ ಭಾಷೆಯ ಕುರಿತು ವಿಶ್ಲೇಷಣೆ ಮಾಡಿರಿ.
- ಶಿಶುವಿನ ಭಾಷಾ ವಿಕಸನದ ಹಂತಗಳನ್ನು ಪರಿಗಣಿಸಿಕೊಂಡು ಮಾತುಗಾರಿಕೆಯ ವಿಶೇಷತೆಗಳ ಹಾಗೂ ಭಾಷಾ ಬೆಳವಣಿಗೆಯ ಕುರಿತು ವಿಶ್ಲೇಷಣಾ ಟಿಪ್ಪಣಿ ತಯಾರಿಸಿರಿ.

**ಪಟ್ಟಿ 1**

1. ಶೈಶವಾಸ್ಥೆಯ ಪ್ರತಿಕ್ರಿಯೆಗಳೂ ಚೇಷ್ಟೆಗಳೂ
2. ತೊದಲ್ನುಡಿ ಹಂತ (babbling Stage)
3. ಸರಳ ಪದಗಳನ್ನುಪಯೋಗಿಸುವ ಹಂತ (beginning of vocabulary)
4. ಏಕಪದವಾಕ್ಯ ಹಂತ
5. ಪದಗಳನ್ನು ಜೋಡಿಸಿ ಆಶಯ ಪೂರ್ತಿಗೊಳಿಸುವ ಹಂತ (Combination of words to Sentences)
6. ಮಾತುಗಾರಿಕೆಯ ಕಲೆಯಲ್ಲಿ ಸಂಪೂರ್ಣ ಸ್ವಾಧೀನ ಗಳಿಸುವ ಹಂತ

ಆಧಾರ : ವಿದ್ಯಾಭ್ಯಾಸ ಮನಶಾಸ್ತ್ರವುಂ ಶಿಶುವಿಕಾಸವುಂ
ಡಾ.ಕೆ.ಜಿ. ರಾಮಚಂದ್ರ ಪಣಿಕ್ಕರ್, ಪಿ.ಕೆ. ಶಂಕರನಾರಾಯಣನ್

**ಪಟ್ಟಿ 2**

| ಭಾಷಾ ಹಂತ | ಆರಂಭಿಸುವ ಪ್ರಾಯ |
|---|---|
| ಅಳುವುದು | ಜನನ |
| ಕೂಗುವುದು | 6 ವಾರಗಳು |
| ಅಸ್ಪಷ್ಟ ಶಬ್ದವುಂಟುಮಾಡುವುದು | 6 ತಿಂಗಳು |
| ಸ್ವರ ವ್ಯತ್ಯಾಸಗಳು | 8 ತಿಂಗಳು |
| ಒಂಟಿ ಪದ ಪ್ರಯೋಗಗಳು | 1 ವರ್ಷ |
| ಎರಡು ಪದಗಳುಳ್ಳ ಪ್ರಯೋಗಗಳು | 18 ತಿಂಗಳು |
| ಪದಗಳ ಪ್ರತ್ಯಯಗಳು | 2 ವರ್ಷ |
| ಪ್ರಶ್ನೆಗಳು, ನಿಷೇಧ ವಾಕ್ಯಗಳು | 2½ ವರ್ಷ |
| ಅಪೂರ್ವ ಹಾಗೂ ಸಂಕೀರ್ಣವಾದ ರಚನೆಗಳು | 5 ವರ್ಷ |
| ಪಕ್ವತೆ ಬಂದ ಮಾತುಗಾರಿಕೆ | 10 ವರ್ಷ |

ವಿದ್ಯಾಭ್ಯಾಸ ಪರಿವರ್ತನತ್ತಿನ್ ಒರಾಮುಖಂ – ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್

ಪಟ್ಟಿಯನ್ನು ಪರಿಶೀಲಿಸಿ ಉದಾಹರಣೆಗಳನ್ನು ಕಂಡುಹಿಡಿದು ವಿಶ್ಲೇಷಣೆ ನಡೆಸಿ ಶಿಶುಭಾಷಾ ವಿಕಾಸಕ್ಕೆ ಸಂಬಂಧಿಸಿದ ಚರ್ಚೆಗಳಲ್ಲಿ ಸ್ಪಷ್ಟತೆ ಮೂಡಿಸಬೇಕು.

ಭಾಷಾ ಶಾಸ್ತ್ರಜ್ಞರು ಭಾಷಾ ವಿಕಾಸಕ್ಕೆ ಸಂಬಂಧಿಸಿದಂತೆ ಪ್ರಧಾನವಾಗಿ ಎರಡು ದೃಷ್ಟಿಕೋನಗಳನ್ನು ಮಂಡಿಸುವರು.

1. ಅನುಕರಣೆಯ ಮೂಲಕ ಮಗು ಭಾಷೆಯನ್ನು ಕಲಿಯುವುದು.
2. ಭಾಷೆಯನ್ನು ಮಗು ಸ್ವಾಭಾವಿಕವಾಗಿ ಸ್ವಾಯತ್ತಗೊಳಿಸುವುದು.

ವರ್ತನಾವಾದ, ರಚನಾವಾದ, ಅನುಭವಜ್ಞಾನವಾದದ ಆಧಾರದಲ್ಲಿ ಸ್ಕಿನ್ನರ್, ಸೋಸೂರ್, ಲೆವಿಸ್ಟ್ರೋಸ್ ಮುಂತಾದವರು ಅನುಕರಣೆಯ ಮೂಲಕ, ಭಾಷೆಯ ರಚನಾ ವಿಶ್ಲೇಷಣೆಯ ಮೂಲಕ ಭಾಷೆಯನ್ನು ಕಲಿಯುವರೆಂದು ಹೇಳುವಾಗ ಜ್ಞಾನ ನಿರ್ಮಾಣವಾದ ಮನೋವಿಜ್ಞಾನದ ಆಧಾರದಲ್ಲಿ ನೋಂಚೋಂಸ್ಕಿ, ವೈಗೋಟ್‌ಸ್ಕಿ ಮುಂತಾದವರು ಭಾಷೆಯನ್ನು ಸ್ವಾಯತ್ತಗೊಳಿಸುವುದರ ಕುರಿತು ಹೇಳುವರು.

ಇವರ ಪ್ರಧಾನ ಆಶಯಗಳನ್ನು ಕಂಡುಹಿಡಿದು ಸಂವಾದ ಚರ್ಚೆಯ ಮೂಲಕ ವರದಿ ತಯಾರಿಸೋಣ.

**ಸ್ಕಿನ್ನರ್ ಅವರ ಆಶಯಗಳು**

- ಹಿರಿಯರ ಭಾಷಾ ಪ್ರಯೋಗವನ್ನು ಅನುಕರಣೆ ಮಾಡಿ ಮಗು ಭಾಷೆ ಕಲಿಯುವುದು.
- 

**ಚೋಂಸ್ಕಿಯ ಆಶಯಗಳು**

- ಸರ್ವಭಾಷಾ ವ್ಯಾಕರಣ
- 

**ವೈಗೋಟ್‌ಸ್ಕಿಯ ಆಶಯಗಳು**

- ಚಿಂತನೆ ಹಾಗೂ ಭಾಷೆ ತಮ್ಮೊಳಗಿನ ಸಂಬಂಧ
- 

## ಉಚ್ಚಾರಣೆ ಹಾಗೂ ಮಾತುಗಾರಿಕಾ ವೈಕಲ್ಯ – ಚರ್ಚಾ ಸೂಚಕಗಳು

- ಮಗುವಿನ ಸಂಭಾಷಣೆಯಲ್ಲಿ ಅನುಭವವಾಗುವ ವೈವಿಧ್ಯಗಳು ಯಾವುವು?
- ಪ್ರಾದೇಶಿಕ ಭಾಷೆ/ಮಾನಸಿಕ ಭಾಷೆ ಇವುಗಳ ಕುರಿತಾದ ದೃಷ್ಟಿಕೋನ ಏನಾಗಿರಬೇಕು?
- ಮಕ್ಕಳಲ್ಲಿ ಸಾಮಾನ್ಯವಾಗಿ ಕಂಡುಬರುವ ಮಾತುಗಾರಿಕೆಯ ವೈಕಲ್ಯಗಳು ಯಾವುವು?
- ಇವು ಭಾಷಾ ತರಗತಿಗಳ ಮೇಲೆ ಹೇಗೆ ಪ್ರಭಾವ ಬೀರುವುದು?

ಮಾತೃಭಾಷಾ ಕಲಿಕೆಯಲ್ಲಿ ಉಚ್ಚಾರಣೆಗೆ ಹೆಚ್ಚಿನ ಪ್ರಾಧಾನ್ಯವಿದೆ. ಪ್ರತ್ಯೇಕವಾಗಿ ಹೇಳಬೇಕೆಂದಿದ್ದರೆ ಕನ್ನಡದ ಹಾಗಿರುವ ಅಕ್ಷರೋಚ್ಚಾರ–ಭಾಷೆಯಲ್ಲಿ ಸರಿಯಾದ ಉಚ್ಚಾರಣೆಯು ತಪ್ಪಿಲ್ಲದ ಓದಿಗೆ ಸಹಾಯಕವಾಗುವುದು. ಅದರೊಂದಿಗೆ ತಪ್ಪಿಲ್ಲದೆ ಬರೆಯಲೂ ಸರಿಯಾದ ಉಚ್ಚಾರಣೆಯು ಸಹಾಯಕವಾಗುವುದು. ಉಚ್ಚಾರಣಾ ವೈಕಲ್ಯ ಬರವಣಿಗೆಯನ್ನೂ ಬಾಧಿಸುವುದು.

## ಉಚ್ಚಾರಣಾ ಅವಯವಗಳು

ಭಾಷಾ ಶಬ್ದಗಳ ಉತ್ಪಾದನೆಗಾಗಿ ಇತರ ಜೀವಿಗಳಿಗಿಂತ ಭಿನ್ನವಾಗಿ ಪ್ರತ್ಯೇಕ ಅವಯವಗಳೇನೂ ಮಾನವನಿಗಿಲ್ಲ. ಉಸಿರಾಟದ ಇಂದ್ರಿಯಗಳ ಹಾಗೂ ಹಲ್ಲು, ನಾಲಗೆ ಮಂತಾದ ಜೀರ್ಣಾಂಗ ವ್ಯೂಹದ ಕೆಲವು ಭಾಗಗಳ ಸಹಾಯದೊಂದಿಗೆ ಮಾನವನಿಗೆ ನಾನಾ ವಿಧದ ಮಾತುಗಾರಿಕೆಯ ಶಬ್ದಗಳನ್ನು ಉಚ್ಚರಿಸಲು ಸಾಧ್ಯವಾಗುವುದು. ಶ್ವಾಸೋಚ್ಛ್ವಾಸ ಚಟುವಟಿಕೆಯಲ್ಲಿ ವ್ಯತ್ಯಾಸವನ್ನುಂಟುಮಾಡಿದಾಗ ಉಚ್ಚಾರಣೆ ಸಾಧ್ಯವಾಗುವುದು.

ಭಾಷಾ ಶಬ್ದೋತ್ಪಾದನೆಯಲ್ಲಿ ಒಳಗೊಂಡ ಅವಯವಗಳನ್ನೇ ಚಲನೆಯ ಸ್ವಾತಂತ್ರ್ಯವಿರುವವುಗಳು ಮತ್ತು ಚಲನೆಯ ಸ್ವಾತಂತ್ರ್ಯವಿಲ್ಲದವುಗಳು/ಕಡಿಮೆ ಇರುವವುಗಳು ಎಂದು ಎರಡಾಗಿ ವರ್ಗೀಕರಿಸಬಹುದು.

1. ಚಲಕರಣ (ಕರಣ)
2. ಸ್ಥಾಯಿಕರಣ (ಸ್ಥಾನ)

**ಚಲಕರಣ :** ಉಚ್ಚಾರಣಾ ಅವಯವಗಳಲ್ಲಿ ತಾರತಮ್ಯೇನ ಸ್ವಾತಂತ್ರ್ಯ ಹೆಚ್ಚಿರುವವುಗಳು ಚಲಕರಣಗಳು ಅಥವಾ ಕರಣ (Articulator). ಉದಾ: ನಾಲಗೆ, ಕೆಳತುಟಿ.

**ಸ್ಥಾಯಿಕರಣ :** ಉಚ್ಚಾರಣಾ ಅವಯವಗಳಲ್ಲಿ ತಾರತಮ್ಯೇನ ಚಲನ ಸ್ವಾತಂತ್ರ್ಯ ಕಡಿಮೆಯಿರುವವುಗಳು ಸ್ಥಾಯಿಕರಣಗಳು ಅಥವಾ ಉಚ್ಚಾರಣಾ ಸ್ಥಾನಗಳು (Point of Articulation). ಉದಾ: ಹಲ್ಲು, ಕಠಿಣ ತಾಲು(Hard Palate) ಮೇಲ್ತುಟಿ ಮೊದಲಾದುವು.

## ಉಚ್ಚಾರಣಾ ಅವಯವಗಳೂ ಉಚ್ಚಾರಣಾ ಸ್ಥಾನಗಳು

ಶಬ್ದದ ಸ್ವತಂತ್ರ ಸಂಚಾರಕ್ಕೆ ಆಂಶಿಕವಾಗಿ ಅಥವಾ ಪೂರ್ಣವಾಗಿ ತಡೆಯನ್ನುಂಟುಮಾಡಿ, ಅಥವಾ ಹಾದುಹೋಗುವ ಭಾಗಗಳ ಆಕಾರದಲ್ಲಿ ವ್ಯತ್ಯಾಸವನ್ನುಂಟುಮಾಡಿ ವಿವಿಧ ಭಾಷಾ ಶಬ್ದಗಳನ್ನು ಹೊರಡಿಸಲಾಗುವುದು. ವಿವಿಧ ಬಾಷಾ ಶಬ್ದಗಳ ಉತ್ಪಾದನಾ ಪ್ರಕ್ರಿಯೆಯ ಕುರಿತು ತಿಳುವಳಿಕೆ ಲಭಿಸಲು ಅದರಲ್ಲಿ ಪಾಲ್ಗೊಳ್ಳುವ ಅವಯವಗಳ ಕುರಿತೂ ತಿಳಿದಿರಬೇಕು.

ಮೇಲು ದಂತ ಸಾಲು, ವಸಡು (Alveolum), ಕಠಿಣ ತಾಲು (Hard Palate) ಮೃದು ತಾಲು (Soft Palate) ಇತ್ಯಾದಿಗಳು ಉಚ್ಚಾರಣಾ ಸ್ಥಾನಗಳಾಗಿವೆ. ಕೆಳತುಟಿ, ಜಿಹ್ವಾಗ್ರ, ಉಪಾಗ್ರ, ಮಧ್ಯ, ಜಿಹ್ವಾಮೂಲ ಇತ್ಯಾದಿಗಳು ಕರಣಗಳಾಗಿವೆ (Articulators)



1. ದಂತ 2. ದಂತಮೂಲ, ಹಲ್ಲಿನ ಏಣು 3. ತುಟಿಗಳು
4. ನಾಸಾಕುಹರ 5. ನಾಲಿಗೆ 6. ಜಿಹ್ವಾಗ್ರ
8. ಜಿಹ್ವಾಮೂಲ 9. ಮೃದುತಾಲು 10. ಕಠಿಣತಾಲು
11. ಒಳನಾಲಿಗೆ 12. ಕಂಠನಾಳ ಶೀರ್ಷ
13. ಧ್ವನಿ ತಂತುಗಳು 14. ಶ್ವಾಸನಾಳ

ಶಬ್ದವನ್ನು ಹೊರಡಿಸಲು ಸಹಾಯ ಮಾಡುವ ಅವಯವಗಳ ಕುರಿತೂ ಅವುಗಳ ಚಟುವಟಿಕೆಯ ಕುರಿತೂ ಅಧ್ಯಾಪಕರಿಗೂ ಮಕ್ಕಳಿಗೂ ಸಾಮಾನ್ಯ ತಿಳುವಳಿಕೆ ಇರಬೇಕು. ಮನಸ್ಸಿನಲ್ಲಿ ರೂಪುಗೊಳ್ಳುವ ಅಥವಾ ಕೇಳುವ ಆಶಯಗಳನ್ನು ಶಬ್ದರೂಪದಲ್ಲಿ ಆವಿಷ್ಕರಿಸುವ ಕೆಲಸವನ್ನು ಉಚ್ಚಾರಣೆಯ ಮೂಲಕ ಮಾಡಲಾಗುವುದು. ಉಸಿರಾಟದ ವೇಗವನ್ನು ನಿಯಂತ್ರಿಸಿ ಉಚ್ಚಾರಣೆಯ ಅವಯವಗಳನ್ನು ಸೂಕ್ತ ರೀತಿಯಲ್ಲಿ ಚಲಿಸುವಂತೆ ಮಾಡಿ ನಾವು ಪ್ರತಿಯೊಂದು ಅಕ್ಷರವನ್ನು ಉಚ್ಚರಿಸುತ್ತೇವೆ. ಆದುದರಿಂದ ಉಚ್ಚಾರಣೆಯ ಅವಯವಗಳ ಚಲನೆಯ ಕುರಿತು ಸ್ಪಷ್ಟವಾದ ತಿಳುವಳಿಕೆ ಸರಿಯಾದ ಉಚ್ಚಾರಣೆಗೆ ಅನಿವಾರ್ಯವಾಗಿದೆ.

ಆಹಾರಕ್ಕೂ ಶ್ವಾಸೋಚ್ಛ್ವಾಸಕ್ಕೂ ಉಪಯೋಗಿಸುವ ಅವಯವಗಳೇ ಉಚ್ಚಾರಣೆಗೂ ಸಹಾಯ ಮಾಡುವುದು. ಇದರಲ್ಲಿ ಶ್ವಾಸೋಚ್ಛ್ವಾಸಕ್ಕೆ ಸಂಬಂಧಿಸಿದ ಅವಯವಗಳು ಪ್ರಮುಖವಾಗಿವೆ. ಉಚ್ಛ್ವಾಸಗಾಳಿಯ ಪ್ರವಾಹದಿಂದಾಗಿ ಹೆಚ್ಚಿನ ಶಬ್ದಗಳ ಉಚ್ಚಾರಣೆ ಉಂಟಾಗುವುದು.

ಕಂಠ್ಯ, ಓಷ್ಠ್ಯ, ದಂತ್ಯ, ಮೂರ್ಧನ್ಯ, ತಾಲವ್ಯ, ವರ್ತ್ಸ್ಯ ಮೊದಲಾದ ಅಂಗಗಳು ಮತ್ತು ಅವುಗಳ ಭಾಗಗಳು ಉಚ್ಚಾರಣೆಗೆ ಸಹಾಯಕವಾದ ವಾಗೀಂದ್ರಿಯಗಳಾಗಿವೆ. ಇವುಗಳ ಸ್ಥಾನದಲ್ಲಿ ನಾಲಿಗೆ ಸ್ಪರ್ಶಿಸುವಾಗ ಉಂಟಾಗುವ ಧ್ವನಿಗಳೇ ವ್ಯಂಜನಗಳಾಗಿವೆ. ಮೂಗು, ಕಿವಿ, ಶ್ವಾಸಕೋಶ. ಮೊದಲಾದವುಗಳೂ ಉಚ್ಚಾರಣೆಗೆ ಸಹಾಯಮಾಡುತ್ತವೆ.

ಭಾಷಾ ಶಬ್ದೋಚ್ಚಾರಣೆಗೆ ಸಹಾಯಮಾಡುವ ಅವಯವಗಳಲ್ಲಿ ಚಲನ ಸ್ವಾತಂತ್ರ್ಯ ಇರುವವುಗಳೂ ಇಲ್ಲದವುಗಳೂ ಇವೆ. ನಾಲಗೆಗೆ ಚಲನ ಸ್ವಾತಂತ್ರ್ಯವಿರುವಾಗ ಹಲ್ಲುಗಳಿಗೆ ಚಲನ ಸ್ವಾತಂತ್ರ್ಯವಿಲ್ಲ. ಶಬ್ದವನ್ನುಂಟುಮಾಡಲು ಉಚ್ಚಾರಣೆಯ ಅವಯವಗಳು ಸ್ಪರ್ಶಿಸುವ ಭಾಗವನ್ನು ಉಚ್ಚಾರಣಾ ಸ್ಥಾನ ಎಂದು ಹೇಳುವರು. ಶಬ್ದೋಚ್ಚಾರಣೆಗೆ ಉಚ್ಚಾರಣೆಯ ಅವಯವಗಳೂ ಉಚ್ಚಾರಣೆಯ ಸ್ಥಾನದ್ದೂ ಒಟ್ಟಾಗಿರುವ ಚಟುವಟಿಕೆಯ ಅಗತ್ಯವಿದೆ. ಶಬ್ದಗಳನ್ನು ಉಚ್ಚಾರಣಾ ಅವಯವಗಳ ಉಚ್ಚಾರಣಾ ಸ್ಥಾನದ ಹಾಗೂ ಉಚ್ಚಾರಣಾ ರೀತಿಯ ಆಧಾರದಲ್ಲಿ ಓಷ್ಟ್ಯ, ದಂತ್ಯ, ವರ್ತ್ಸ್ಯ, ಮೂರ್ಧನ್ಯ, ಕಂಠ್ಯ, ತಾಲವ್ಯ ಎಂಬ ಹಾಗೆ ವರ್ಗೀಕರಿಸಬಹುದು.

## ಉಚ್ಚಾರಣಾ ವೈಕಲ್ಯಗಳು

ಭಾಷಾ ಕಲಿಕೆಯಲ್ಲಿ ಉಚ್ಚಾರಣೆಯು ಅಧಿಕ ಪ್ರಾಧಾನ್ಯವುಳ್ಳದ್ದಾಗಿದೆ. ಆದರೆ ತರಗತಿಗಳಲ್ಲಿ ಹಲವು ರೀತಿಯ ಉಚ್ಚಾರಣಾ ವೈಕಲ್ಯಗಳು ಕಂಡುಬರುವುದು. ಮಾನಸಿಕವೂ ಶಾರೀರಿಕವೂ ಆದ ದೌರ್ಬಲ್ಯಗಳು ಉಚ್ಚಾರಣಾ ವೈಕಲ್ಯದ ಪ್ರಧಾನ ಕಾರಣಗಳಾಗಿವೆ. ಮಾನಸಿಕ ವೈಕಲ್ಯಗಳು, ಶಾರೀರಿಕ ನ್ಯೂನತೆಗಳು, ಮಾದರಿಯಾಗಿ ಸ್ವೀಕರಿಸಬಹುದಾದ ಉಚ್ಚಾರಣೆಯ ಅಭಾವ, ಅಗತ್ಯವಿಲ್ಲದ ಒತ್ತು, ಉಚ್ಚಾರಣೆಯಲ್ಲಿ ಸಾದೃಶ್ಯವಿರುವ ಅಕ್ಷರಗಳು ಇತ್ಯಾದಿಗಳು ಉಚ್ಚಾರಣಾ ವೈಕಲ್ಯಕ್ಕೆ ಕಾರಣವಾಗುತ್ತದೆ. ತೊದಲ್ನುಡಿ, ಅಸ್ಪಷ್ಟ ಮಾತುಗಾರಿಕೆ, ಉಗ್ಗು ಇತ್ಯಾದಿಗಳು ಇದರಲ್ಲಿ ಒಳಗೊಳ್ಳುವುವು.

ಕಾಸರಗೋಡಿನಲ್ಲಿ ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ, ಇತರ ಹೊರನಾಡ ಕನ್ನಡ ಪ್ರದೇಶಗಳಲ್ಲಿ ಸಂಚರಿಸುವಾಗ ಕೇಳಲು ಸಾಧ್ಯವಾಗುವ ಕನ್ನಡ ಹಲವು ರೀತಿಯದ್ದಾಗಿರುವುದು. ಪ್ರತಿಯೊಂದು ಪ್ರದೇಶಕ್ಕೂ ಅವರದ್ದಾದ ಭಾಷಾ ಶೈಲಿಯೂ ಭಾಷಾಭೇದವೂ ಇದೆ. ಒಂದು ಪ್ರದೇಶದಲ್ಲಿ ಉಪಯೋಗಿಸುವ ಕನ್ನಡ ಇತರ ಭಾಗದವರಿಗೆ ಅರ್ಥವಾಗಬೇಕೆಂದಿಲ್ಲ.

ಏನ್ ಸಾರ್? ಹೇಗಿದ್ದೀರಾ? ಮೈಸೂರಿನವರ ಈ ಮಾತನ್ನು ನಿಮ್ಮ ಪ್ರದೇಶದ ಭಾಷೆಗೆ ಬದಲಾಯಿಸಿ ನೋಡಿರಿ. ವ್ಯತ್ಯಾಸಗಳು ಯಾವುವು?

ಕೇರಳ ಹಾಗೂ ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಕನ್ನಡ ಭಾಷೆಯಲ್ಲಿ ಕಂಡುಬರುವ ಪದ/ವಾಕ್ಯ ವ್ಯತ್ಯಾಸಗಳನ್ನು ಅನ್ವೇಷಿಸಿ ಬರೆಯಿರಿ.

ಮಗು ತನ್ನ ಮನೆಯಲ್ಲೂ ಊರಿನಲ್ಲೂ ಆಡುವ ಭಾಷೆಯಲ್ಲಿ ಮಾತನಾಡುವುದು. ಅದರಲ್ಲಿ ಮಾತನಾಡಲಿರುವ ಸಾಮರ್ಥ್ಯ ಅವಳಿಗಿದೆ. ಅವಳನ್ನು ಒಳಗೊಂಡ ಭಾಷಾ ಸಮಾಜದಿಂದ ಲಭಿಸುವ ಅನುಭವಗಳು ಅವಳ ಭಾಷಾ ಸಾಮರ್ಥ್ಯದ ಮೇಲೆ ಪ್ರಭಾವ ಬೀರುವುದು. ಪ್ರಾರಂಭ ಹಂತಗಳಲ್ಲಿ ಮಗು ಭಯರಹಿತವಾಗಿ ಸಂಕೋಚವಿಲ್ಲದೆ ಭಾಷೆಯನ್ನು ಪ್ರಯೋಗಿಸಬೇಕಾದರೆ ಅವಳ ಭಾಷೆಯಲ್ಲೇ ಮಾತನಾಡಲು ಅನುಮತಿ ನೀಡಬೇಕು. ಇದರಲ್ಲಿ ಧಾರಾಳ ಪ್ರಾದೇಶಿಕ ಬೇಧಗಳು ಬಂದು ಸೇರಲು ಸಾಧ್ಯವಿದೆ. ಅದು ಸ್ವಾಭಾವಿಕ. ಅವುಗಳನ್ನು ಆಗಲೇ ತಿದ್ದಿ ಮಾನಕ ಭಾಷೆ ಮಾತನಾಡಲು ಒತ್ತಾಯಿಸುವುದು ಮಗುವಿನ ಆತ್ಮವಿಶ್ವಾಸ ಹಾಗೂ ಭಾಷಾ ಕಲಿಕೆಯನ್ನು ಬಾಧಿಸುವ ಸಾಧ್ಯತೆಗಳಿವೆ. ಭಾಷಾ ಪ್ರಯೋಗದಲ್ಲಿ ಆತ್ಮವಿಶ್ವಾಸ ಮೂಡಿದರೆ ಕ್ರಮೇಣ ಮಾನಕ ಭಾಷೆಯ ಪರಿಚಯ ಹೊಂದಲೂ ಅಗತ್ಯಾನುಸಾರ ಪ್ರಯೋಗಿಸಲೂ ಅವಕಾಶ ನೀಡಬಹುದು.

ಭಾಷಾ ಭೇದಗಳೊಂದಿಗೆ ಪ್ರಗತಿಪರ ನಿಲುವನ್ನು ಸ್ವೀಕರಿಸಬೇಕು. ಪ್ರಾದೇಶಿಕ ಜನವಿಭಾಗಗಳ ಸಾಂಸ್ಕೃತಿಕ ಹಾಗೂ ಭಾಷಿಕ ವಿಶೇಷತೆಗಳನ್ನು ಅಂಗೀಕರಿಸಬೇಕಾಗಿದೆ. ಯಾವುದಾದರೂ ಒಂದು ಜನವಿಭಾಗದ ಭಾಷೆ ಉತ್ಕೃಷ್ಟವೆಂದೂ ಇನ್ನೊಂದು ಕಡೆಯ ನಿಕೃಷ್ಟವೆಂದು ತೀರ್ಮಾನಿಸುವುದು ಪ್ರಜಾಪ್ರಭುತ್ವ ನೀತಿಗೆ ಹೊಂದಿಕೊಳ್ಳುವುದಿಲ್ಲ. ಭಾಷೆಯ ಜೀವಂತ ಸ್ವರೂಪವೆಂಬುದು ಪ್ರಾದೇಶಿಕತೆ ಆಗಿದೆ. ಇದನ್ನು ಅಂಗೀಕರಿಸುವುದು ಎಂದಲ್ಲ. ವಿದೇಶ ಭಾಷೆಗೆ ಉನ್ನತ ಪದವಿ ನೀಡಿ ಮಾತೃಭಾಷೆಯನ್ನು ಕೀಳಾಗಿ ಕಾಣುವುದೂ, ಮಾನಕಭಾಷೆಗೆ ಉತ್ಕೃಷ್ಟಸ್ಥಾನವನ್ನು ನೀಡಿ ಭಾಷಾ ಭೇದಗಳನ್ನು ಅಂಗೀಕರಿಸದಿರುವುದೂ ಒಂದೇ ಮನೋಭಾವದ ಎರಡು ಮುಖಗಳಾಗಿವೆ. ಪ್ರಾದೇಶಿಕ ಸ್ವಂತಿಕೆ ಪ್ರತಿಫಲಿಸುವ ಆಡುಭಾಷಾ ಭೇದಗಳು ನಮ್ಮ ಭಾಷೆಯ ಸಂಪತ್ತಾಗಿದೆ ಎಂದು ತಿಳಿಯಬೇಕು. ಆದುದರಿಂದ ಮಾನಕ ಭಾಷೆಯಲ್ಲಿರುವ ಭಾಷಾ ಕಲಿಕಾ ಸಾಮಗ್ರಿಗಳನ್ನು ಪರಿಚಯಿಸಿಕೊಳ್ಳುವ. ಮಗುವಿಗೆ ಪ್ರಾದೇಶಿಕ ವ್ಯವಹಾರ ಭಾಷೆಯ ಜೀವಂತಿಕೆ, ಶಕ್ತಿ ಹಾಗೂ ಸೌಂದರ್ಯವನ್ನು ತಿಳಿಯುವುದಕ್ಕಿರುವ ಅವಕಾಶ ಲಭಿಸಬೇಕು. ಜಾನಪದ ಹಾಡುಗಳು, ಕಥೆಗಳು, ನಾಟಕಗಳು, ಕಾದಂಬರಿಗಳು ಮೊದಲಾದ ಸಾಹಿತ್ಯ ಕೃತಿಗಳೊಂದಿಗೆ ವ್ಯವಹರಿಸುವುದರ ಮೂಲಕ ಇದು ಸಾಧ್ಯವಾಗುವುದು. ಸೃಜನಾತ್ಮಕ ರಚನೆಯಲ್ಲಿ ಆಶಯದ ಅಭಿವ್ಯಕ್ತಿಯಲ್ಲಿ ತನ್ನದ್ದಾದ ಶೈಲಿ ರೂಪುಗೊಳಿಸಲೂ ಇದು ಸಹಾಯಕವಾಗುವುದು. ಉಚ್ಛಾರಣಾ ವೈಕಲ್ಯಗಳು ಭಾಷಾ ತರಗತಿಗಳ ಮೇಲೆ ಹೇಗೆ ಪ್ರಭಾವ ಬೀರುವುದು? ಇವುಗಳನ್ನು ಪರಿಹರಿಸಲು ಅಧ್ಯಾಪಕನೆಂಬ ನೆಲೆಯಲ್ಲಿ ಮಾಡಬಹುದಾದ ಚಟುವಟಿಕೆಗಳು ಯಾವುವು? ಸಹಾಯಕ ಗ್ರಂಥಗಳನ್ನು ಓದಿ ಟಿಪ್ಪಣಿ ತಯಾರಿಸಿರಿ. ಮಕ್ಕಳ ಭಾಷೆಯನ್ನು ನಿರೀಕ್ಷಣೆ ಮಾಡಿ ಪದಕೋಶ ತಯಾರಿಸಬಹುದು.

## ಭಾಷಾ ಸಿದ್ಧಾಂತದೆಡೆಗೆ

### ಬೌದ್ಧಿಕ ಸಿದ್ಧಾಂತಗಳು (Cognitive Theories)

ಭಾಷಾಕಲಿಕೆಯು ಬೌದ್ಧಿಕ ಸಿದ್ಧಾಂತದ ಮುಖ್ಯವಿಷಯಗಳಲ್ಲೊಂದಾಗಿದೆ. ಎಲ್.ಎಸ್. ವೈಗೋಟ್‌ಸ್ಕಿ, ಪಿಯಾಷೆ, ಬ್ರೂನರ್, ಚೋಂಸ್ಕಿ ಮೊದಲಾದ ರಚನಾವಾದಿಗಳೆಲ್ಲರೂ ಭಾಷಾ ಕಲಿಕೆಯ ಕುರಿತು ಅವರದ್ದಾದ ದೃಷ್ಟಿಕೋನಗಳನ್ನು ಮುಂದಿರಿಸಿದ್ದಾರೆ. ಇದರಲ್ಲಿ ಪ್ರಸ್ತುತವಾದ ಕೆಲವೊಂದು ಆಶಯಗಳನ್ನು ಕೆಳಗೆ ನೀಡಲಾಗಿದೆ.

### 1. ಎಲ್.ಎಸ್. ವೈಗೋಟ್‌ಸ್ಕಿ

ವೈಗೋಟ್‌ಸ್ಕಿಯ Thought and Language ಎಂಬ ಪುಸ್ತಕದಲ್ಲಿಯ ಚಿಂತನೆ ಮತ್ತು ಭಾಷೆಯ ಕುರಿತಾದ ಚರ್ಚೆಯನ್ನು ಮಗುವಿನ ಜನನದಿಂದ ಶೈಶವ ಹಂತದ ವರೆಗಿನ ಬೆಳವಣಿಗೆಯನ್ನು ಕೇಂದ್ರೀಕರಿಸಿ ಮಂಡಿಸಲಾಗಿದೆ. ಮಗುವಿನ ಅಳು(Crying) ಕೂಗು (Cooing) ಚಿಂತನೆಯೊಂದಿಗೆ ಸಂಬಂಧವಿಲ್ಲದ ಭಾಷೆಯಾಗಿದೆ (Non-cognitive Language). ಇಂತಹ ಚಿಂತನಾರಹಿತ ಶಬ್ದಗಳು ತಂದೆತಾಯಿ ಹಾಗೂ ಮಗುವಿನ ಮಧ್ಯೆ ಇರುವ ಸಂಬಂಧವನ್ನು ದೃಢಪಡಿಸುವ ಸಾಮಾಜಿಕ ಧರ್ಮವನ್ನು

ನಿರ್ವಹಿಸುವುದು. ಇದರೊಂದಿಗೆ ಭಾಷೆಯೊಂದಿಗೆ ಸಂಬಂಧವಿಲ್ಲದ ಚಿಂತನೆಗಳಿವೆ. ಕಡ್ಡಿಗಳನ್ನುಪಯೋಗಿಸಿ ಒಂದು ಆಟಿಕೆಯನ್ನುಂಟುಮಾಡುವಂತಹ ನರಸ್ನಾಯುಸಂಬಂಧೀ ಚಟುವಟಿಕೆಗಳು ಇದಕ್ಕೆ ಉದಾಹರಣೆಯಾಗಿದೆ. ಮೊದಲ ಮಾತನ್ನು ಸ್ವಾಯತ್ತಗೊಳಿಸುವ ವೇಳೆಯಲ್ಲಿ ಸ್ವತಂತ್ರವಾದ ಈ ವಿಕಾಸ ಹಂತಗಳ ಸಮನ್ವಯವು ನಡೆಯುವುದು. ಅದು ಭಾಷಾ ವಿಕಾಸದ ಸ್ಫೋಟನಾತ್ಮಕ ಬೆಳವಣಿಗೆಯ ಕಡೆ ಕೊಂಡೊಯ್ಯುವುದು. ಮಗುವಿಗೆ ತಾನು ಕಲಿಯುವ ಪ್ರತಿಯೊಂದು ಮಾತಿನ ಅರ್ಥವನ್ನು ತಿಳಿಯುವ ಆಸೆಯಿದೆ. ತಾನು ಕಲಿಯುವ ಪ್ರತಿಯೊಂದು ಅನುಭವದ (ಉದಾ: ಮೃಗಾಲಯ ಸಂದರ್ಶನ), ತಾನು ಕಾಣುವ ಪ್ರತಿಯೊಂದು ವಸ್ತುವಿನ (ಉದಾ: ಚಂದ್ರ) ಹೆಸರೇನೆಂದು ಮಗು ಅನ್ವೇಷಿಸುವನು. ಹೀಗೆ ಸ್ವಾಯತ್ತಗೊಳಿಸುವ ಪ್ರತಿಯೊಂದು ಎಳೆಯೂ ಸ್ವಾಯತ್ತಗೊಳಿಸುವಿಕೆಗೆ ಸಹಾಯಕವಾಗುವುದು. ಚಿಂತನೆ ಹಾಗೂ ಭಾಷೆಯ ಸಮನ್ವಯವನ್ನು ಸೂಚಿಸಲು ವೈಗೋಟ್‌ಸ್ಕಿ ಕೆಳಗಿನ ಚಿತ್ರವನ್ನು ಉಪಯೋಗಿಸಿದನು.




ಭಾಷೆ ಚಿಂತನೆಯನ್ನು ರೂಪುಗೊಳಿಸುವುದರಲ್ಲಿ ಕಂಡೀಶನಿಯನ್ ಪ್ರಕ್ರಿಯೆಗಿಂತಲೂ ಪ್ರಬಲವಾಗಿದೆ ಚಿಂತನೆಯನ್ನು ರೂಪಿಸುವುದು ಭಾಷೆಯನ್ನು ಪೂರಣಗೊಳಿಸುವ ಸಂಸ್ಕೃತಿಯೆಂದು ಆತ ಅಭಿಪ್ರಾಯಪಟ್ಟ.

**ಪಿಯಾಷೆಯೂ ವರ್ತನಾವಾದಿಗಳೂ**

ಭಾಷಾ ಕಲಿಕೆಯ ಕುರಿತಾದ ಪಿಯಾಷೆಯ ಊಹೆಗಳು ಬೌದ್ಧಿಕ ಸಿದ್ಧಾಂತ ಆಧಾರಿತವಾಗಿದ್ದರೂ ನಿಗದಿತವಾದ ರಚನೆಯಿಂದೊಡಗೂಡಿದ ಭಾಷಾ ಘಟಕವು ಮಗುವಿನ ಮನಸ್ಸಿನಲ್ಲುಂಟಾಗುವುದು ಎಂಬುದನ್ನು ಆತ ಅಂಗೀಕರಿಸಲಿಲ್ಲ. ಈ ವಿಚಾರದಲ್ಲಿ ಪಿಯಾಷೆ ಹಾಗೂ ವ್ಯವಹಾರವಾದಿಗಳು ಸಮಾನರೆಂದು ಕೆಲವು ಸಂಶೋಧನೆಗಳು ಬೊಟ್ಟು ಮಾಡಿ ತೋರಿಸುವುದು.

ಪಿಯಾಷೆ ಹಾಗು ವ್ಯವಹಾರವಾದಿಗಳು ಮಗುವಿನ ಮನಸ್ಸಿಗೆ ನೈಸರ್ಗಿಕ ರಚನೆಯನ್ನೋ ಮನಸ್ಸಿನ ಪ್ರತ್ಯೇಕ ವಲಯಗಳಲ್ಲಿ ಆಧಾರಿತವಾದ ತಿಳುವಳಿಕೆಯನ್ನೋ ಕಲ್ಪಿಸಿ ನೀಡುವುದಿಲ್ಲ. ಸಾರ್ವಜನಿಕ ವಲಯದ ಕಲಿಕಾಪ್ರಕ್ರಿಯೆಗಳು ಭಾಷೆಯ ಪರ ಹಾಗು ಪರವಲ್ಲದ ಎಲ್ಲಾ ರೀತಿಯ ಚಿಂತನೆಗಳಲ್ಲೂ ಪ್ರಯೋಗಿಸಲ್ಪಡುವುದು ಎಂದು ತಿಳಿಯಲಾಗಿದೆ. ಶಿಶುವಿನ ಆರಂಭಿಕ ಹಂತದ ಮನಸ್ಸಿನ ಕುರಿತು ಪಿಯಾಷೆ ಹಾಗೂ ವ್ಯವಹಾರವಾದಿಗಳು ಅನೇಕ ವಿಷಯಗಳಲ್ಲಿ ಸಹಮತ ಹೊಂದಿದ್ದಾರೆ. ಶಿಶುವನ್ನು ಜನ್ಮಸಿದ್ಧ ಅರಿವನ್ನು ಹೊಂದದ ಖಾಲಿಸ್ಲೇಟ್ ಎಂಬ ನೆಲೆಯಲ್ಲಿ ವ್ಯವಹಾರವಾದಿಗಳು ಕಾಣುವರು. ಬೇರ್ಪಡಿಸಲಾಗದ ಸಂಕೀರ್ಣವಾಗಿರುವ ಒಳಗ (Input) ನ್ನು ಹೊಂದಿದ ನೆಲೆಯಲ್ಲಿ ಪಿಯಾಷೆ ಮಗುವನ್ನು ಕಾಣುವರು. ಎರಡು ದೃಷ್ಟಿಕೋನಗಳೂ ಸಾಮಾನ್ಯ ಒಂದೇ ಆಗಿವೆ.

ಕಾರ್ಮಿಲಾಫ್–ಸ್ಮಿತ್ (karmiloff-Smith 1992)

## 2. ಜೀನ್ ಪಿಯಾಷೆ (Jean Piaget)

ಪಿಯಾಷ್ ಭಾಷೆ ಮತ್ತು ಚಿಂತನೆಯನ್ನು ಜೋಡಿಸಿ ಚಿಂತನೆಯ ಮೂಲಕ ಮಕ್ಕಳು ಬೆಳೆಯುವರೆಂದೂ ಆ ಬಳಿಕ ಭಾಷೆ ಬರುವುದೆಂದು ಹೇಳಿರುವರು. ಚಿಂತನೆಗೆ ಪ್ರತೀಕರೂಪವನ್ನು ಭಾಷೆ ನೀಡುವುದು. ಶರೀರದ ಬೆಳವಣಿಗೆಯು ಯಾವ ಗಾತ್ರ ಆಕೃತಿಯ ದಿರಿಸುಗಳು ಬೇಕೆಂಬುದನ್ನು ನಿಶ್ಚಯಿಸುವುದು. ಅದೇ ರೀತಿಯಲ್ಲಿ ಚಿಂತನೆಯು ಯಾವ ರೀತಿಯ ಭಾಷೆ ಮಗುವಿಗೆ ಬೇಕೆಂಬುದನ್ನು ನಿಶ್ಚಯಿಸುವುದೆಂದು ಪಿಯಾಷೆ ವಾದಿಸುವರು.

## 3. ಜೆರೋಂ ಎಸ್. ಬ್ರೂನರ್ (Jerome Saymour Bruner)

ವಾಚಿಕೇತರ ಆಶಯ ವಿನಿಮಯದಲ್ಲಿ ನಡೆಯುವ ಯಥಾರ್ಥ ಪ್ರಕ್ರಿಯೆಗಳು ಯಾವುದೆಲ್ಲ ಎಂದು ಕಂಡುಹಿಡಿಯಲು ಬ್ರೂನರ್ ಪ್ರಯತ್ನಿಸಿದನು. 'ಬೊಟ್ಟು ಮಾಡಿ ತೋರಿಸುವುದು' ಎಂಬುದು ತಂದೆ ತಾಯಂದಿರ ಗಮನ ಸೆಳೆಯಲು ಮಗು ಅವಲಂಬಿಸುವ ಒಂದು ರೀತಿಯಾಗಿದೆ.

ಉದಾಹರಣೆಗೆ ಮಗು ಟಿ.ವಿಯನ್ನು ಬೊಟ್ಟು ಮಾಡಿ ತೋರಿಸುತ್ತದೆ ಎಂದು ಭಾವಿಸಿರಿ. ಆಗ ತಾಯಿ ಮಗುವಿನೊಂದಿಗೆ ಒಂದು ಸಂಭಾಷಣೆಯಲ್ಲಿ ತೊಡಗಿ ಟಿ.ವಿ. ಕಾರ್ಯವೆಸಗುವಂತೆ ಮಾಡಿ ಮಗುವಿಗೆ ತೋರಿಸುವಳು. ಮಗುವಿನ ದೃಷ್ಟಿಪ್ರಯೋಗ ಇದಕ್ಕಿಂತಲೂ ನಿಗೂಢವಾದ ಇನ್ನೊಂದು ರೀತಿಯಾಗಿದೆ. ಮಗು ಆಟಿಕೆಯ ಮೇಲೆ ತನ್ನ ದೃಷ್ಟಿ ಹಾಕುವುದು. ಮಗುವಿನ ನೋಟವನ್ನು ತಾಯಿಯೂ ಹಿಂಬಾಲಿಸುವಳು. ಕೊನೆಗೆ ಇಬ್ಬರೂ ಒಟ್ಟಿಗೆ ಆಟಿಕೆಯಲ್ಲಿ ನೋಟ ದೃಢಪಡಿಸುವರು. ಮಗುವಿನ ಅಗತ್ಯವೇನೆಂದು ತಿಳಿದುಕೊಳ್ಳುವ ತಾಯಿ ಮಗುವಿಗೆ ಆಟಿಕೆ ತೆಗೆದು ನೀಡುವರು.

ಎಲ್ಲಾ ಆಶಯವಿನಿಮಯ ಸಂದರ್ಭಗಳಲ್ಲೂ ಮಗುವು ಸ್ವಾರ್ಥವನ್ನಿಟ್ಟುಕೊಂಡು ಭಾಗವಹಿಸುತ್ತದೆ ಎಂಬುದು ಇದರ ಅರ್ಥವಲ್ಲ. ಕೆಲವೊಮ್ಮೆ ತಾಯಿ ಮತ್ತು ಮಗು ಪರಸ್ಪರ ಮಂದಹಾಸವನ್ನು ಮಾತ್ರ ಬೀರಲೂಬಹುದು. ಈ ರೀತಿಯಲ್ಲಿ ಮೊದಲ ಶಬ್ದವನ್ನು ಸ್ವಾಯತ್ತಗೊಳಿಸುವುದಕ್ಕಿಂತ ಮುಂಚಿತವಾಗಿಯೇ ಮಗು ಆಶಯವಿನಿಮಯ ನಡೆಸಲು ಕಲಿಯುತ್ತದೆ. ಬಳಿಕ ತಾಯಿ ಮತ್ತು ಮಗು ಒಬ್ಬರು ಮತ್ತೊಬ್ಬರು ಎಂಬ ಹಾಗೆ ಮುಂದಾಳ್ತನ ವಹಿಸುವುದರ ಆಧಾರದಲ್ಲಿ ವಾಚಿಕವಾದ ಆಶಯವಿನಿಮಯ ನಡೆಯುವುದು. ತಾಯಿಯೊಂದಿಗಿನ ವ್ಯವಹರಿಸುವಿಕೆಯ ಅಪ್ಯಾಯತೆಯನ್ನು ಅನುಭವಿಸದ ಮಗುವಿನ ಮುಂದಿನ ಭಾಷಾ ಸಾಮರ್ಥ್ಯದಲ್ಲಿ ಅಲ್ಪ ಕುಂದು ಕಾಣಲು ಸಾಧ್ಯವಿದೆ. ಈ ವಿಚಾರವನ್ನು ಬೌಲ್ಬೀಯು (J. Bowlby 1953) ಅವರೂ ಬೊಟ್ಟು ಮಾಡಿ ಹೇಳಿದ್ದಾರೆ.

## 4. ನೋಂ ಚೊಂಸ್ಕಿ (Noam Chomsky)

ಭಾಷಾ ಕಲಿಕೆಯ ಕುರಿತು ಬೌದ್ಧಿಕವಾದಿಯಾದ ಚೋಂಸ್ಕಿಯೂ ನವೀನ ಆಶಯಗಳನ್ನು ಮುಂದಿರಿಸಿದ್ದಾರೆ. 1957ರಲ್ಲಿ ಚೋಂಸ್ಕಿಯನ್ ಮಾದರಿಯ ಭಾಷಾಶಾಸ್ತ್ರ ಜನ್ಮ ತಾಳಿದ ಮೇಲೆ ಜನ್ಮಸಿದ್ಧವಾದ ಸರ್ವವ್ಯಾಕರಣವೆಂಬ ಆಶಯದ ಆಧಾರದಲ್ಲಿ ಅನೇಕ ಅಧ್ಯಯನಗಳು ನಡೆದಿವೆ. ಕಳೆದ ದಶಕಗಳಲ್ಲಿ ಮೂಡಿಬಂದ ಮುಖ್ಯ ಆಶಯಗಳನ್ನು ಕೆಳಗೆ ಕಾಣಿಸಿದ ರೀತಿಯಲ್ಲಿ ಕ್ರೋಢೀಕರಿಸಬಹುದು.

- ಮಾನವ ಮನಸ್ಸಿಗೆ ಜನ್ಮಸಿದ್ಧವಾದ ಸರ್ವಭಾಷಾ ವ್ಯಾಕರಣ (UG) ಇದೆ.
- ಭಾಷೆಯ ಕುರಿತು ತನಗಿರುವ ಜನ್ಮಸಿದ್ಧವಾದ ತಿಳುವಳಿಕೆ ಏನೆಂದು ಯಾರಿಗೂ ತಿಳಿದಿಲ್ಲ.
- ಸರ್ವಭಾಷಾ ವ್ಯಾಕರಣವು ಕೆಲವೊಂದು ಉಪಘಟಕಗಳನ್ನು ಒಳಗೊಂಡಿದೆ. ಪ್ರತಿಯೊಂದು ಘಟಕವೂ ಭಾಷೆಯ ಒಂದು ಗುಂಪು ಸ್ವಭಾವಗಳಿಗೆ ಸಂಬಂಧಪಟ್ಟದ್ದಾಗಿದೆ.

- ಭಾಷೆಗಳ ಸಾಮಾನ್ಯ ಸ್ವಭಾವಗಳಿಂದ ಕೆಲವು ಆಯ್ಕೆಗಳನ್ನು ನಡೆಸುವುದನ್ನು ಭಾಷಾ ಕಲಿಕೆಯೆಂದು ಗುರುತಿಸಬಹುದು. ಅಥವಾ ಜನ್ಮಸಿದ್ಧವಾದ ಭಾಷಾ ಘಟಕದ ಹಲವು ರೀತಿಯ ಸ್ಪಷ್ಟೀಕರಣ (Specifications) ಗಳೇ ಪ್ರತ್ಯೇಕ ಭಾಷಾ ವ್ಯಾಕರಣಗಳಾಗಿವೆ.
- ಮನಸ್ಸಿನ ಭಾಷಾ ಘಟಕವು ಒಂದು ಪ್ರಜನನ ಪ್ರಕ್ರಿಯೆಯಾಗಿದೆ (Generative Process)

**ಜ್ಞಾನ ನಿರ್ಮಾಣ ವಾದ (Constructivism)**

ಜ್ಞಾನ ನಿರ್ಮಾಣ ವಾದವು ಬೌದ್ಧಿಕ ಸಿದ್ಧಾಂತದ ಆಧಾರದಲ್ಲಿ ರೂಪುಗೊಂಡ ಚಿಂತನಾಲಹರಿಯಾಗಿದೆ. ಈ ಸಮೀಪನವು ಮಗುವು ಸ್ವತಃ ಅರಿವನ್ನು ಸೃಷ್ಟಿಸುವುದು ಎಂಬ ದೃಷ್ಟಿಕೋನವನ್ನು ಮುಂದಿರಿಸುವುದು. ಪೂರ್ವ ಜ್ಞಾನ ಹಾಗೂ ಹಿಂದಿನ ಅನುಭವಗಳೊದಿಗೆ ಸಂಬಂಧಿಸಿ ಆಶಯಗಳನ್ನು ಪರಿಶೀಲಿಸಿ ಹೊಸ ಸಂದರ್ಭಗಳಲ್ಲಿ ಪ್ರಯೋಗಿಸಿ ಅರಿವನ್ನು ಉತ್ಪಾದಿಸುವರು. ಅದನ್ನು ಸ್ವತಃ ವೈಜ್ಞಾನಿಕ ರಚನೆಗೆ ಸ್ವಾಯತ್ತಗೊಳಿಸುವರು. ವಿಮರ್ಶನಾತ್ಮಕ ಚಿಂತನೆ ಹಾಗೂ ಸಮಸ್ಯಾಪರಿಹಾರ ಪ್ರಯತ್ನಗಳಲ್ಲಿ ಸಕ್ರಿಯ ಭಾಗವಹಿಸುವಿಕೆ ಅಗತ್ಯ. ಮಗುವಿಗೆ ಸಂಬಂಧಿಸಿದಂತೆ ಯೋಗ್ಯ ಹಾಗೂ ಸ್ವಯಂ ಪ್ರಚೋದಿತ ಕಲಿಕಾ ಚಟುವಟಿಕೆಗಳಿಗೆ ಜ್ಞಾನ ನಿರ್ಮಾಣವಾದ ಸಮೀಪನ ಪ್ರಾಧಾನ್ಯ ನೀಡುವುದು.

**ಸಾಮಾಜಿಕ ಜ್ಞಾನ ನಿರ್ಮಾಣವಾದ (Social Constructvism)**

ಸಾಮಾಜಿಕ ಜ್ಞಾನ ನಿರ್ಮಾಣವಾದವು ಜ್ಞಾನ ನಿರ್ಮಾಣವಾದದ ಒಂದು ಉಪ ವಿಭಾಗವಾಗಿದೆ. ಭಾಷೆಯನ್ನು ಪರಿಪಕ್ವಗೊಳಿಸುವುದರಲ್ಲಿ ಸಾಮಾಜಿಕ ಪರಿಸರದ ಪ್ರಾಧಾನ್ಯವನ್ನು ಇಲ್ಲಿ ಒತ್ತಿ ಹೇಳುವರು.

ಮಕ್ಕಳು ಅವರ ಸಮವಯಸ್ಕರೊಂದಿಗೆ ಹಾಗೂ ಹಿರಿಯರೊಂದಿಗೆ ನಡೆಸುವ ವ್ಯವಹಾರಗಳು ಭಾಷಾ ವಿಕಾಸಕ್ಕೆ ಕಾರಣವಾಗುವುದು. ಸಂವಾದಾತ್ಮಕವಾದ ಗುಂಪು ಕಲಿಕೆಯ ಪ್ರಾಧಾನ್ಯವನ್ನು ಪ್ರಪಂಚದಾದ್ಯಂತ ಅಂಗೀಕರಿಸಲಾಗಿದೆ. ಇದು ಸಾಮಾಜಿಕ ಜ್ಞಾನ ನಿರ್ಮಾಣವಾದದ ಹೆಚ್ಚಿನ ಪ್ರಾಧಾನ್ಯವನ್ನು ವೇದ್ಯವಾಗಿಸುವುದು.

**ಭಾಷಾ ಕಲಿಕೆಗೆ ಸಂಬಂಧಿಸಿದ ಕೆಲವು ವಿವಾದಗಳು**

1. ಮೆದುಳಿನಲ್ಲಿ ಭಾಷಾ ಘಟಕ ಎಂದು ಬೇರ್ಪಡಿಸಬಹುದಾದ ಒಂದು ಘಟಕವಿದೆಯೇ ಎಂಬುದು ಒಂದು ಚರ್ಚಾವಿಷಯವಾಗಿದೆ. ಭಾಷಾ ಘಟಕವು ಸಂವೇದನೆ, ಪೇಶಿನಿಯಂತ್ರಣ, ಯುಕ್ತಿಚಿಂತನೆ ಹಾಗೂ ಇನ್ನಿತರ ರಚನಾ ವ್ಯವಸ್ಥೆಗಳಿಗೆ ಸಂಬಂಧಪಡದ ಕೆಲವು ತತ್ವಗಳಿಂದೊಡಗೂಡಿದ ಒಂದಾಗಿದೆ ಎಂದೂ ಇದರ ಸಹಾಯದಿಂದ ಭಾಷೆಯನ್ನು ಕಲಿಯಲಾಗುವುದು ಎಂಬುದೂ ಚೋಂಸ್ಕಿ, ಫೋಡನ್ ಮುಂತಾದ ಅನೇಕ ಭಾಷಾಶಾಸ್ತ್ರಜ್ಞರ ವಾದವಾಗಿದೆ. ಆದರೆ ಹೇಗೆ ಆಶಯವಿನಿಮಯ ನಡೆಸಬೇಕೆಂಬ ಸಮಸ್ಯೆಯಿಂದ ಭಾಷೆಯುಂಟಾಗುವುದು. ಆದುದರಿಂದ ಭಾಷಾ ಕಲಿಕೆಯು ಸಾಮಾನ್ಯ ಬುದ್ಧಿಯ ಸಹಾಯದೊಂದಿಗೆ ಸಮಸ್ಯೆಗಳನ್ನು ಪರಿಹರಿಸುವುದಕ್ಕಿಂತ ಭಿನ್ನವಲ್ಲ ಎಂದೂ ಪುಟ್ನಂ (H. Putnam-1971)) ಬೈಯ್ಟ್ (E-Bates-1989) ಮೊದಲಾದವರ ಅಭಿಪ್ರಾಯವಾಗಿದೆ.
2. ಇನ್ನೊಂದು ತರ್ಕ ಭಾಷೆ ಮತ್ತು ಚಿಂತನೆ ತಮ್ಮೊಳಗಿರುವ ಸಂಬಂಧದ ಕುರಿತಾಗಿದೆ. ಆಶಯ ವಿನಿಮಯಕ್ಕೆ ಕೆಲವು ಸಂಜ್ಞೆಗಳು (Labels) ಅಗತ್ಯವಿದೆ. ಚಿಂತನೆಯಲ್ಲಿ (Cognition) ಸಂಜ್ಞೆಗಳನ್ನು ಅಂಟಿಸಿ ಬಿಡುವುದೇ ಭಾಷಾ ಕಲಿಕೆಯೆಂಬ ವಾದವನ್ನು ಫೋಡೋನ್, ಪಿಯಾಷೆ ಮೊದಲಾದವರು ಮಂಡಿಸಿದ್ದಾರೆ. ವೋರ್ಫ್ ಚಿಂತನೆ ಹಾಗೂ ಭಾಷೆಯನ್ನು ಇನ್ನೊಂದು ರೀತಿಯಲ್ಲಿ ವಿಶ್ಲೇಷಣೆ ಮಾಡಿದ್ದಾರೆ. ಪ್ರಪಂಚವನ್ನು ತಿಳಿಯಲು ಅನಿವಾರ್ಯವಾದ ಸಂಬಂಧಗಳು (relations) ವಿಭಾಗಗಳು (Categories) ಅಗತ್ಯವಿದೆ. ಇವುಗಳೆಲ್ಲವೂ ಭಾಷೆಯಿಂದ ಲಭಿಸುವುದು. ಆದುದರಿಂದಲೇ

ವಿವಿಧ ಭಾಷೆಗಳನ್ನು ಆಡುವವರು ಪ್ರಪಂಚವನ್ನು ವಿವಿಧ ರೀತಿಯಲ್ಲಿ ದರ್ಶಿಸುವರು. (ವೋರ್ಫ್). 'ಭಾಷಾ ಕಲಿಕೆಯೆಂಬುದು ಮಾತನಾಡಲು ಕಲಿಯುವುದು ಮಾತ್ರವಲ್ಲ, ಚಿಂತನೆಯ ಕಲಿಕೆಯೂ ಆಗಿದೆ ' ಎಂದು ವೋರ್ಫ್ ವಾದಿಸುತ್ತಾರೆ.

ಆಧುನಿಕ ಬೌದ್ಧಿಕ ಮನೋವಿಜ್ಞಾನಿಗಳು ವೋರ್ಷಿನ ಈ ಊಹೆಯನ್ನು ತಿರಸ್ಕರಿಸುತ್ತಾರೆ. ಮಾತನಾಡಲು ಆರಂಭಿಸುವುದಕ್ಕಿಂತ ಮೊದಲೇ ಮಕ್ಕಳು ಯೋಚಿಸಲು ಆರಂಭಿಸುವರು. ಮಾತಿನ ಮೂಲಕವಲ್ಲ, ಬಿಂಬ (ಮನೋಚಿತ್ರ) ಗಳ ಮೂಲಕ ಅಮೂರ್ತವಾದ ಯುಕ್ತಿಪೂರ್ವ ಹೇಳಿಕೆ ಪ್ರತಿಹೇಳಿಕೆ (Logical Prepositions) ಮೂಲಕ ನಾವು ಆಲೋಚಿಸುತ್ತೇವೆಯೆಂದು ಪಿಂಕರ್ (Steves Pinker) ಬೊಟ್ಟು ಮಾಡುವರು.

3. ಇನ್ನೊಂದು ತರ್ಕವಿಚಾರ ಮಾನವನ ಅನನ್ಯತೆ (Uniqueness) ಯ ಕುರಿತಾಗಿದೆ ಸೀಮಿತ ಸಂಖ್ಯೆಯ ಚಿಹ್ನೆಗಳನ್ನುಪಯೋಗಿಸಿ ಮೃಗಗಳೊಂದಿಗೆ ಹಾಗೂ ಸ್ವವರ್ಗದವರೊಂದಿಗೆ ಆಶಯವಿನಿಮಯ ನಡೆಸುವರಲ್ಲವೇ? ಆದುದರಿಂದ ಅವರಲ್ಲೂ 'ಭಾಷಾಘಟಕ' ವಿರುವುದೆಂದು ಹೇಳಬಹುದಲ್ಲವೇ? ಈ ಒಂದು ಚಿಂತನೆಯು ಕೆಲವರನ್ನು ಪರಿಣಾಮ ಸಿದ್ಧಾಂತದ ಆಧಾರದಲ್ಲಿ ಮಾನವನಿಗೆ ಸಮೀಪದಲ್ಲಿ ನಿಲ್ಲುವ ಚಿಂಪಾಂಜಿಗೆ ಭಾಷೆ 'ಕಲಿಸು'ವ ಉದ್ಯಮದೆಡೆಗೆ ಮುನ್ನಡೆಸಿತು. ಅವರ ಪ್ರಯತ್ನದಲ್ಲಿ ಜಯಶಾಲಿಗಳಾದುದಕ್ಕೆ ದಾಖಲೆಗಳಿಲ್ಲ. ಒಂದು ವೇಳೆ ಚಿಂಪಾಂಜಿಗೆ ಭಾಷೆ ಕಲಿಸಲು ಸಾಧ್ಯವಾಯಿತು ಎಂದೇ ಭಾವಿಸೋಣ. ಮಾನವ ಶಿಶುವಿಗೆ ಯಾರೂ ಆ ರೀತಿಯಲ್ಲಿ ಭಾಷೆ 'ಕಲಿಸು'ವುದಿಲ್ಲವಲ್ಲವೇ?

4. ಭಾಷಾ ಕಲಿಕೆಯಲ್ಲಿ ಜನ್ಮಸಿದ್ಧಿ ಹಾಗೂ ಪರಿಸರ ಇವುಗಳಲ್ಲಿ ಯಾವುದಕ್ಕೆ ಹೆಚ್ಚಿನ ಪ್ರಾಧಾನ್ಯವೆಂದು ಕೆಲವರು ಪ್ರಶ್ನಿಸುವರು. ಮಾನವರು ಮಾತ್ರವೇ 'ಭಾಷೆ' ಮಾತನಾಡುವರು. ಆದುದರಿಂದ ಭಾಷೆ 'ಜನ್ಮಸಿದ್ಧ'ವಾಗಿದೆ. ಅದೇ ಸಮಯದಲ್ಲಿ ಪರಿಸರ (Environment) ನ ಪ್ರಾಧಾನ್ಯವನ್ನು ಕೀಳಂದಾಜಿಸಲೂ ಸಾಧ್ಯವಿಲ್ಲ. ಆದುದರಿಂದ ಭಾಷಾ ಕಲಿಕೆಯ ಮೇಲೆ ಪ್ರಭಾವ ಬೀರುವುದು ವಂಶಪಾರಂಪರ್ಯವೇ ಅಥವಾ ಪರಿಸರವೇ?

ಇದರಲ್ಲಿ ಯಾವುದು ಹೆಚ್ಚು ಪ್ರಧಾನ? ಮುಂತಾದ ಪ್ರಶ್ನೆಗಳು ಅಪ್ರಸ್ತುತವೆಂದು ಸ್ಟೀವನ್ ಪಿಂಕರ್ ಅಭಿಪ್ರಾಯಪಡುವನು.

**ಚಟುವಟಿಕೆಗಳು**

1. ಭಾಷಾ ಸ್ವಾಯತ್ತಗೊಳಿಸುವಿಕೆಯ ಪ್ರಕ್ರಿಯೆ ಏನೆಂದು ಸ್ಪಷ್ಟಪಡಿಸಿರಿ.
2. ಭಾಷಾ ಸ್ವಾಯತ್ತಗೊಳಿಸುವಿಕೆಯ ಮೂಲಕ ಭಾಷಾ ಕಲಿಕೆ ನಡೆಯುವುದೆಂದು ಉದಾಹರಣೆ ಸಹಿತ ಸ್ಪಷ್ಟಪಡಿಸಿರಿ.
3. ಮಗು ಅತಿ ಹೆಚ್ಚು ಪ್ರೀತಿಸುವ ಆಟಿಕೆಯು ಕೈಯಿಂದ ಬಿದ್ದು ತುಂಡಾಯಿತು. ಈ ಅನುಭವವನ್ನು ಭಾಷಾ ಸ್ವಾಯತ್ತಗೊಳಿಸುವಿಕೆಗೆ ಸಂಬಂಧಿಸಿದಂತೆ – ಮಗು ಭಾಷೆ ಉತ್ಪಾದಿಸುವನು ಎಂಬ ಹೇಳಿಕೆಗೆ ಸಂಬಂಧಿಸಿದಂತೆ ಹೇಗೆ ವಿಶದೀಕರಿಸಬಹುದು?

   ಉದಾ : ಅಯ್ಯೋ ...ಅಮ್ಮಾ... ನನ್ನ ಆಟಿಕೆ ಎಲ್ಲಾ ತುಂಡಾಗಿ ಹೋಯಿತು.

   - ನನ್ನ ಆಟಿಕೆ ಹೋಯಿತು....
   -
   -
   -

4. ಮನೆಭಾಷೆ ಹಾಗೂ ಪ್ರಾದೇಶಿಕ ಭಾಷೆಗಳು ಹೇಗೆ ಭಾಷಾ ಸ್ವಾಯತ್ತಗೊಳಿಸುವಿಕೆಯ ಮೇಲೆ ಪ್ರಭಾವ ಬೀರುವುದೆಂದು ಉದಾಹರಣೆ ಸಹಿತ ಸ್ಪಷ್ಟಪಡಿಸಿರಿ.

5. ಮಕ್ಕಳು ಉಚ್ಚಾರಣಾ ತಪ್ಪುಗಳನ್ನು ಮಾಡಲು ಕಾರಣವೇನು? ಅದನ್ನು ಪರಿಹರಿಸಲಿರುವ ಮಾರ್ಗಗಳು ಯಾವುವು?
6. ಉಚ್ಚಾರಣಾ ಅವಯವಗಳು ಮತ್ತು ಅವುಗಳ ಸ್ಥಾನಗಳ ಕುರಿತು ಅಧ್ಯಾಪಕ ವಿದ್ಯಾರ್ಥಿ ಕಲಿಯುವುದರಿಂದ ಇರುವ ಪ್ರಯೋಜನಗಳು ಯಾವುವು? ಅವುಗಳನ್ನು ಪ್ರಾಥಮಿಕ ತರಗತಿಗಳಲ್ಲಿ ಯಾವ ರೀತಿಯಲ್ಲಿ ಉಪಯೋಗಪಡಿಸಲು ಸಾಧ್ಯವಾಗುವುದು?
7. ಭಾಷಾ ಕಲಿಕೆಗೆ ಸಂಬಂಧಿಸಿ ಸ್ಕಿನ್ನರ್, ಚೋಂಸ್ಕಿ, ವೈಗೋಟ್‌ಸ್ಕಿ ಎಂಬಿವರ ದೃಷ್ಟಿಕೋನಗಳ ಪವರ್‌ಪೋಯಿಂಟ್ ಪ್ರಸೆಂಟೇಶನ್ ತಯಾರಿಸಿರಿ.
8. ಭಾಷೆಯ ಸ್ವಾಯತ್ತಗೊಳಿಸುವಿಕೆಯಲ್ಲಿ ಮನೆಭಾಷೆಯೂ ಪ್ರಾದೇಶಿಕಭಾಷೆಯೂ ಮೊದಲ ಹಂತದಲ್ಲಿ ಪ್ರಭಾವ ಬೀರುವುದು. ಮಕ್ಕಳ ಮನೆಭಾಷೆ ಮತ್ತು ಪ್ರಾದೇಶಿಕ ಭಾಷೆಯನ್ನು ಪರಿಶೀಲಿಸಿ ಪ್ರಾದೇಶಿಕ ಪದಕೋಶ ತಯಾರಿಸಿರಿ.

## ಹೆಚ್ಚಿನ ಓದಿಗೆ...

### ವರ್ತನಾವಾದ (Behaviourism)

ಇಪ್ಪತ್ತನೇ ಶತಮಾನದಲ್ಲಿ ಮೊದಲ ಹಂತದಲ್ಲಿ ವರ್ತನಾವಾದವು ಆವಿರ್ಭಾವಗೊಂಡಿತು. ಮನೋವಿಜ್ಞಾನದಲ್ಲಿ ವರ್ತನಾವಾದ ಪಂಥವು ರಷ್ಯನ್ ಮನೋವಿಜ್ಞಾನಿಯಾದ ಪಾವ್ಲೋವ್ ನಾಯಿಯ ಮೇಲೆ ನಡೆಸಿದ ಅಧ್ಯಯನಗಳ ಮೂಲಕ ಹೆಚ್ಚು ಬಲಗೊಂಡಿತು (1902). ಬಳಿಕ ವಾಟ್ಸನ್, ತೋಂಡೇಕ್, ಗತ್ರಿ, ಹಲ್ ಮೊದಲಾದವರು ಈ ಶಾಖೆಯನ್ನು ಇನ್ನಷ್ಟು ಬಲಗೊಳಿಸಿದರು. ಸ್ಕಿನ್ನರ್ ಅವರು ವರ್ತನಾವಾದಕ್ಕೆ ಅತಿಹೆಚ್ಚು ಕೊಡುಗೆಯನ್ನು ನೀಡಿದರು. ಜೀವವಿರುವ ವಸ್ತುಗಳು ಏನೆಲ್ಲಾ ಮಾಡುವವೆಂದೂ ಏನೆಲ್ಲಾ ಮಾಡುವುದಿಲ್ಲವೆಂಬುದರ ಆಧಾರದಲ್ಲಿ ವರ್ತನಾವಾದದ ಕುರಿತಾದ ಅಧ್ಯಯನಗಳು ನಡೆಯಬೇಕೆಂದು ಸ್ಕಿನ್ನರ್ ಅವರ ನಂಬಿಕೆಯಾಗಿತ್ತು.

ವರ್ತನೆಯನ್ನು ಹೇಗೆ ನಿರೀಕ್ಷಣೆ ಮಾಡಬಹುದೆಂದೂ ನಿಯಂತ್ರಣ ವಿಧೇಯವಾಗಿಸಬಹುದೆಂದೂ ಸ್ಕಿನ್ನರ್ ತಿಳಿಸುವರು. ಅನುಕೂಲಕರ ಸಬಲೀಕರಣದ ಮೂಲಕ ಮನುಷ್ಯನ ವರ್ತನೆಯನ್ನು ವೇಗದಲ್ಲಿ ರೂಪುಗೊಳಿಸಬಹುದೆಂದೂ ಅವರು ವಾದ ಮಂಡಿಸಿದರು. ಆತನ ಪ್ರಸಿದ್ಧವಾದ beyond freedom and dignity(1971) ಎಂಬ ಪುಸ್ತಕದಲ್ಲಿ ಸ್ವಾತಂತ್ರ್ಯ, ಅಂತಸ್ತು ಮೊದಲಾದ ಆಶಯಗಳು ಆಧುನಿಕ ಸಮಾಜದಲ್ಲಿ ಉಪಯೋಗಶೂನ್ಯವೆಂದು ಅವರು ಹೇಳುವರು ಕಾರಣ ಆತನ ಅಭಿಪ್ರಾಯದಲ್ಲಿ ಒಂದು ಪ್ರತ್ಯೇಕ ಸಂದರ್ಭದಲ್ಲಿ ವ್ಯಕ್ತಿ ಏನು ಮಾಡುವನು ಎಂಬುದು ಅವನಿಗೆ ಭೂತಕಾಲದಲ್ಲಿ ಏನು ಸಂಭವಿಸಿತು ಎಂಬುದನ್ನು ಅವಲಂಬಿಸಿರುವುದು ಉತ್ತಮ ವ್ಯಕ್ತಿಗಳನ್ನು ಸೃಷ್ಟಿಸಲು ಅವರ ವರ್ತನೆಯನ್ನು ನಿಯಂತ್ರಿಸುವುದು ಹೇಗೆಂಬುದನ್ನು ತಿಳಿದಿರಬೇಕು.

### ವರ್ತನಾವಾದದ ಮುಖ್ಯ ಆಶಯಗಳು

- ಮನುಷ್ಯನ ವರ್ತನೆಯು ಪ್ರೇರಣೆ(Stimulus) ಮತ್ತು ಪ್ರತಿಕ್ರಿಯೆ (response)ಗಳನ್ನೊಳಗೊಂಡ ಚಟುವಟಿಕೆಗಳಾಗಿವೆ.
- ವರ್ತನೆಯನ್ನು ಬದಲಾಯಿಸಲು ಸಾಧ್ಯ
- ಪ್ರಾಣಿಗಳ ವರ್ತನೆಯ ಕುರಿತಾದ ಕಲಿಕೆ ಮಾನವನ ವರ್ತನೆಯ ಕುರಿತಾದ ಅಧ್ಯಯನಕ್ಕೆ ಸಹಾಯಕವಾಗುವುದು.
- ಎರಡು ರೀತಿಯ ಪ್ರತಿಕ್ರಿಯೆಗಳಿವೆ. ಒಂದು ಪ್ರೇರಣೆಯ ಮೂಲಕ ಸಂಜಾತವಾಗುವ ಪ್ರತಿಕ್ರಿಯೆ (elicited response) ಇನ್ನೊಂದು ಪ್ರೇರಣೆಯ ಸಹಾಯವಿಲ್ಲದೆ ಪ್ರತಿಕ್ರಿಯೆ (emitted response)
- ಎರಡು ರೀತಿಯ ಹದಗೊಳಿಸುವಿಕೆಗಳು ಇವೆ. ಪ್ರತಿಕ್ರಿಯೆ ಆಧಾರಿತ ಹದಗೊಳಿಸುವಿಕೆ ಮತ್ತು ಸಾಧನ ಆಧಾರಿತ ಹದಗೊಳಿಸುವಿಕೆ. ಒಂದು ಹೊಸ ಪ್ರೇರಣೆಯ ಮೂಲಕ ಹಳೆಯ ಪ್ರತಿಕ್ರಿಯೆಯನ್ನು ಉತ್ತೇಜಿಸುವ ಕಲಿಕೆಯನ್ನು ಪ್ರತಿಕ್ರಿಯೆ ಆಧಾರಿತ ಹದಗೊಳಿಸುವಿಕೆ ಎಂದು ಹೇಳುವರು.

ಪಾವ್ಲೋವ್ ಈ ಆಶಯವನ್ನು ಕೊಡುಗೆಯಾಗಿ ನೀಡಿದವರು. ಬೇಟೆಗಾರನ ವಾಸನೆ ಬಡಿದ ಒಡನೆ ಹಕ್ಕಿ ಹಾರುವುದು. ಇದಕ್ಕೆ ಒಂದು ಉದಾಹರಣೆಯಾಗಿದೆ.

ಅಗತ್ಯವನ್ನು ತೃಪ್ತಿಗೊಳಿಸುವುದರ ಮೂಲಕ ಗಳಿಸುವ ಪ್ರತಿಕ್ರಿಯೆ ಎಂಬ ನಿಟ್ಟಿನಲ್ಲಿ ಕಲಿಕೆಯನ್ನು ನೋಡುವುದು ಸಾಧನ ಆಧಾರಿತ ಪ್ರತಿಕ್ರಿಯೆಯನ್ನು ಸೂಚಿಸುವುದು.

ನಾವು ಬಯಸುವ ವರ್ತನೆಯ ಸಮೀಪವಿರುವ ವರ್ತನೆಯನ್ನು ಬಹುಮಾನ ನೀಡಿ ಪ್ರೋತ್ಸಾಹಿಸುವುದು ಈ ರೀತಿಯ ಕಲಿಕೆ ರೂಪಿಸುವುದಕ್ಕೆ ಒಂದು ಉದಾಹರಣೆಯಾಗಿದೆ ಈ ಆಶಯವನ್ನು ಸ್ಕಿನ್ನರ್ ಮುಂದಿರಿಸಿದರು. ಅನುಕೂಲಕರ ಹಾಗೂ ಪ್ರತಿಕೂಲಕರ ಸಬಲೀಕರಣಗಳಿವೆ. ಆ ಮೂಲಕ ವರ್ತನೆಯನ್ನು ಸ್ಥಾಯಿಯಾಗಿಸಲೂ ಅಲ್ಲದವುಗಳನ್ನು ಹೋಗಲಾಡಿಸಲೂ ಸಾಧ್ಯವಾಗುವುದು, ಬಾಯಾರಿಕೆಯಾಗುವಾಗ ಟ್ಯಾಪನ್ನು ಎಡಕ್ಕೆ ತಿರುಗಿಸಿ ನೀರು ತೆಗೆಯುವುದು ಈ ರೀತಿಯ ಕಲಿಕೆಗೆ ಉದಾಹರಣೆಯಾಗಿದೆ. ಟ್ಯಾಪನ್ನು ಎಡಭಾಗಕ್ಕೆ ತಿರುಗಿಸಿದಾಗ ನೀರು ಲಭಿಸುವುದಿಲ್ಲವಾದರೆ ನಾವು ಬಲಭಾಗಕ್ಕೆ ತಿರುಗಿಸಿ ನೋಡುತ್ತೇವೆ.

- ವರ್ತನಾವಾದವನ್ನು ಬದಲಾಯಿಸಲು ಕೆಲವು ಕ್ರಮಗಳಿವೆ.
  - ವರ್ತನೆಯ ಗುರಿಯನ್ನು ತೀರ್ಮಾನಿಸುವುದು.
  - ಸೂಕ್ತ ಸಬಲೀಕರಣಗಳು ಯಾವುದೆಲ್ಲ ಎಂದು ತೀರ್ಮಾನಿಸಿವುದು.
  - ವರ್ತನೆಯನ್ನು ಬದಲಾಯಿಸಲಿರುವ ಕ್ರಮಗಳನ್ನು ಆಯ್ಕೆ ಮಾಡುವುದು.
  - ಕ್ರಮಗಳನ್ನು ಕಾರ್ಯಗತಗೊಳಿಸುವುದು ಫಲಿತಾಂಶವನ್ನು ದಾಖಲಿಸುವುದು.
  - ಪ್ರಗತಿಯನ್ನು ದಾಖಲಿಸಿ ಅಗತ್ಯ ಬದಲಾವಣೆಗಳನ್ನು ಉಂಟುಮಾಡುವುದು.

**ರಚನಾವಾದ**

ವರ್ತನಾವಾದ ಪ್ರಬಲಗೊಂಡ ಕಾಲಘಟ್ಟದಲ್ಲಿ ಭಾಷೆಯ ಕುರಿತು ಅನೇಕ ಕಂಡುಹಿಡಿಯುವಿಕೆಗಳೊಂದಿಗೆ ನಸೂರ್, ಲೆವಿಸ್ಟ್ರೋಸ್ ಮೊದಲಾದ ಭಾಷಾ ಶಾಸ್ತ್ರಜ್ಞರ ಬೆಂಬಲದೊಂದಿಗೆ ಬ್ಲೂಂಫೀಲ್ಡ್ ಹಾಗೂ ಅನುಯಾಯಿಗಳು ರಂಗಪ್ರವೇಶಿಸಿದರು. ಯಾವುದೇ ವಾಕ್ಯವನ್ನು ಹಂತಹಂತವಾಗಿ ವಿಶ್ಲೇಷಣೆ ಮಾಡಿ ಅದರ ಏಕಕಗಳಾದ 'ಸ್ಕೀಮಾ'ದಲ್ಲಿ ತಲಪಬಹುದೆಂಬ ಬ್ಲೂಂಫೀಲ್ಡ್ ಅವರ ಸಂಶೋಧನೆ ಆ ಕಾಲದಲ್ಲಿ ವಿಸ್ಮಯವನ್ನು ಉಂಟುಮಾಡಿತ್ತು. ಭಾಷೆಯ ರಚನೆಯನ್ನು ಬಯಲುಗೊಳಿಸುವ ಈ ವಿಶ್ಲೇಷಣಾ ರೀತಿಯಿಂದ ರಚನಾವಾದ ಎಂಬ ಹೆಸರಿನಲ್ಲಿ ತಿಳಿಯಲ್ಪಡುವ ಚಿಂತನಾಲಹರಿ ವಿಕಾಸಗೊಂಡಿತು. ಭಾಷಾಕಲಿಕೆಯ ಕುರಿತು ವರ್ತನಾವಾದಿಗಳು ಮುಂದಿರಿಸಿದ ಆಶಯಗಳನ್ನು ಅದೇ ರೀತಿಯಲ್ಲಿ ಸ್ವೀಕರಿಸುವ ಕೆಲಸವನ್ನು ಬ್ಲೂಂಫೀಲ್ಡ್ ಮತ್ತು ಅವರ ಹಿಂಬಾಲಕರು ಮಾಡಿದರು. 1930–50ರ ಕಾಲಘಟ್ಟದಲ್ಲಿ ಅಮೇರಿಕನ್ ಬೌದ್ಧಿಕವಲಯವನ್ನು ಪೂರ್ಣವಾಗಿ ತನ್ನ ಅಂಕೆಗೆ ತರಲು ರಚನಾವಾದಕ್ಕೆ ಸಾಧ್ಯವಾಯಿತು.

ಮನೋವಿಜ್ಞಾನ, ಸಾಹಿತ್ಯ, ಸಮಾಜಶಾಸ್ತ್ರ, ಭೌತಿಕವಾದ ಮೊದಲಾದ ವಿವಿಧ ಜ್ಞಾನಶಾಖೆಗಳ ಮೇಲೆ ಪ್ರಭಾವ ಬೀರಲು ಸಾಧ್ಯವಾದುದು ಈ ಚಿಂತನಾಲಹರಿಗೆ ಲಭಿಸಿದ ಅಂಗೀಕಾರವನ್ನು ತಿಳಿಸುವುದು. ಯಾವುದನ್ನು ವಿಶ್ಲೇಷಿಸಿ ಅದರ ಘಟಕಗಳಲ್ಲಿ ತಲುಪಬಹುದೆಂಬ ರಚನಾವಾದದ ಜಾಡು ಹಿಡಿದು ಸಮಾಜದ ರಚನೆ, ಮನಸ್ಸಿನ ರಚನೆ ಮೊದಲಾದ ಅನ್ವೇಷಣೆಗಳಲ್ಲೆಲ್ಲಾ ದಾರ್ಶನಿಕರು ವ್ಯವಹರಿಸಿದರು. ರಚನಾವಾದಿಗಳು ತಮ್ಮ ಬೌದ್ಧಿಕವಾದ ಹಿರಿಮೆಯ ಕುರಿತು ಸೀಮಾತೀತ ಆತ್ಮವಿಶ್ವಾಸವುಳ್ಳವರಾಗಿದ್ದರು. ಆದುದರಿಂದಲೇ ಭಾಷೆಯ ಕುರಿತಾಗಿ ತಾವು ಎತ್ತುವ ವಾದ ದುರ್ಬಲವಾದುದೆಂದು ತಿಳಿದುಕೊಳ್ಳಲು ಅವರಿಗೆ ಸಾಧ್ಯವಾಗಲಿಲ್ಲ. ಪ್ರಾಣಿಗಳ ಮೇಲಿನ ವರ್ತನಾ ವ್ಯತಿಯಾನಗಳ ಕುರಿತಾಗಿ ನಡೆಸಿದ ಅಧ್ಯಯನಗಳು ತಮ್ಮ ವಾದಗತಿಗಳನ್ನು ರೂಪಿಸಿದವು ಎಂಬುದರಿಂದ ಅವುಗಳಲ್ಲಿ ಏನಾದರೂ ನ್ಯೂನತೆಯಿರುವುದಾಗಿ ವರ್ತನಾವಾದಿಗಳಿಗೂ ತೋಚಲಿಲ್ಲ.

### ವರ್ತನಾಸಿದ್ಧಾಂತ ಪ್ರಶ್ನಿಸಲ್ಪಡುತ್ತಿದೆ

ಮಾನವನನ್ನು ಯಾಂತ್ರಿಕವಾಗಿ ವರ್ತನೆಗಳನ್ನು ಪ್ರಕಟಪಡಿಸುವ ಒಂದು ಜೀವಿಯೆಂಬ ನೆಲೆಯಲ್ಲಿ ವರ್ತನಾವಾದವು ಕಾಣುವುದು. ಅದಲ್ಲದೆ ಲಕ್ಷ್ಯಪ್ರಜ್ಞೆ ಹಾಗೂ ಇಚ್ಛಾಶಕ್ತಿಯಿರುವ ಜೀವಿ ಎಂಬ ನೆಲೆಯಲ್ಲಿಲ್ಲ. ಇದು ಮಾನವನ ವರ್ತನೆಯನ್ನು ಸಾಕಷ್ಟು ಸರಳಗೊಳಿಸುವುದೆಂಬುದು ವರ್ತನಾವಾದ ಎದುರಿಸಿದ ಕಟು ವಿಮರ್ಶೆಯಾಗಿದೆ. ಜ್ಞಾನನಿರ್ಮಾಣವಾದಿಗಳ ರಂಗಪ್ರವೇಶದೊಂದಿಗೆ ವರ್ತನಾವಾದ ಮತ್ತು ಅದರ ಆಧಾರದಲ್ಲಿ ಕಟ್ಟಿ ಬೆಳೆಸಿದ ರಚನಾವಾದವು ಮಂಕಾಗಿ ಹೋಯಿತು. 1957ರಲ್ಲಿ ಚೋಂಸ್ಕಿ (Non-Chomsky) ಹೊರತಂದ Syntatic Structures ಎಂಬ ಗ್ರಂಥ ಇದಕ್ಕೆ ನಿಮಿತ್ತವಾಗಿ ಪರಿಣಮಿಸಿತು. ಭಾಷೆಯನ್ನು ವಿಶ್ಲೇಷಣೆ ಮಾಡಲು ರಚನಾವಾದಿಗಳು ಮುಂದಿರಿಸಿದ ಅವೈಜ್ಞಾನಿಕತೆಯನ್ನು ಸಾಕ್ಷ್ಯಗಳ ಆಧಾರದಲ್ಲಿ ಚೋಂಸ್ಕಿ ಬೊಟ್ಟು ಮಾಡಿ ತೋರಿಸಿದನು. ಅದರೊಂದಿಗೆ ಭಾಷಾ ಕಲಿಕೆಗೆ ಸಂಬಂಧಿಸಿ ವರ್ತನಾವಾದಿಗಳಿಗೆ ವಿವರಿಸಲು ಸಾಧ್ಯವಾಗದ ಅನೇಕ ಅಂಶಗಳಿವೆಯೆಂದು ಆತ ವಾದವನ್ನೂ ಮಂಡಿಸಿದನು.

ಭಾಷೆ ಕಲಿಯುವುದೆಂಬುದು ಮಗುವಿನ ಜನ್ಮಸಿದ್ಧವಾದ ಸಾಮರ್ಥ್ಯವೆಂಬ ಆಧಾರದಲ್ಲಿ ಆತ ತನ್ನ ಸಿದ್ಧಾಂತಕ್ಕೆ ರೂಪಕಲ್ಪನೆ ನೀಡಿದನು. ಬಳಿಕ 1959ರಲ್ಲಿ ಸ್ಕಿನ್ನರ್‌ನ Verbal behaviour ಎಂಬ ಕೃತಿಯ ಕುರಿತಾದ ವಿಮರ್ಶಾತ್ಮಕ ಪ್ರಬಂಧವನ್ನು ಆತ ಹೊರತಂದನು. ಚೋಂಸ್ಕಿಯ ಸಿದ್ಧಾಂತವು ಭಾಷೆಯ ಕುರಿತು ಮತ್ತು ಭಾಷಾ ಕಲಿಕೆಯ ಕುರಿತು ಆ ಬಳಿಕ ನಡೆದ ಅನೇಕ ಸಂಶೋಧನೆಗಳಿಗೆ ಹಾಗೂ ಸಂವಾದಗಳಿಗೆ ಹಾದಿಮಾಡಿಕೊಟ್ಟಿತೆಂದು ನಿಸ್ಸಂಶಯವಾಗಿ ಹೇಳಬಹುದು.

### ವರ್ತನಾವಾದದ ಇತಿಮಿತಿ

ಕಲಿಕೆಯ ಕುರಿತು, ವಿಶೇಷವಾಗಿ ಭಾಷಾ ಕಲಿಕೆಯ ಕುರಿತು ವರ್ತನಾವಾದಿಗಳು ಮುಂದಿಟ್ಟ ಆಶಯಗಳು ಮಾನವ ಮನಸ್ಸಿನ ನೈಸರ್ಗಿಕ ಸಿದ್ದಿಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲವಾದುದರಿಂದ ಅವುಗಳೊಂದಿಗೆ ಹೊಂದಿಕೊಳ್ಳಲು ಬೌದ್ಧಿಕವಾದಿಗಳಿಗೆ ಸಾಧ್ಯವಾಗಲಿಲ್ಲ.

ಭಾಷೆಯ ಹಾಗೂ ಭಾಷಾ ಕಲಿಕೆಯ ಕುರಿತು ಕೆಳಗೆ ನೀಡಿದ ವಿಶೇಷತೆಗಳನ್ನು ವಿವರಿಸಲು ವರ್ತನಾವಾದಕ್ಕೆ ಸಾಧ್ಯವಿಲ್ಲವೆಂದು ಅವರು ಬೊಟ್ಟು ಮಾಡಿದರು.

1. ಭಾಷೆ ಎಂಬುದು ಮಾನವನಿಗೆ ಮಾತ್ರ ಇರುವ ಸಾಮರ್ಥ್ಯವಾಗಿದೆ. ಭಾಷಾ ವ್ಯವಸ್ಥೆ (Language System) ಇತರ ಜೀವಿಗಳಿಗೆ ಲಭಿಸುವಂತಹದ್ದಲ್ಲ.
2. ಹೊಸ ಸಾಹಿತ್ಯಗಳ ಮೂಲಕ ಅಪಾರವಾದ ಸಂಖ್ಯೆಯ ಹೊಸ ವಾಕ್ಯಗಳನ್ನು ಸೃಷ್ಟಿಸಲೂ ಅರ್ಥೈಸಿಕೊಳ್ಳಲೂ ಮಗುವಿಗೆ ಸಾಧ್ಯವಾಗುವುದು. ಅನುಕರಣೆಯ ಮೂಲಕ ಹಾಗೂ ಸಬಲೀಕರಣದ ಮೂಲಕ ಈ ಹೊಸ ವಾಕ್ಯಗಳನ್ನು ಕಲಿಯುವುದೆಂದು ಭಾವಿಸಲು ಸಾಧ್ಯವಿಲ್ಲ. ಭಾಷೆ ಸೃಷ್ಟಿಪರವೆಂಬುದು ಅದರ ಸಹಜ ಸ್ವಭಾವವಾಗಿದೆ.
3. ಎರಡು ವರ್ಷ ಪೂರ್ತಿಯಾಗುವುದಕ್ಕಿಂತ ಮೊದಲು ಮಗು ಭಾಷೆ ಕಲಿಯಲು ಆರಂಭಿಸುವುದು. ಐದು ವರ್ಷ ಪ್ರಾಯವಾಗುವಾಗ ಭಾಷಾಕಲಿಕೆ ಹೆಚ್ಚುಕಡಿಮೆ ಪೂರ್ಣವಾಗುವುದು. ಅವಳ ಭಾಷಾ ಸಮಾಜದೊಂದಿಗೆ ಆಶಯವಿನಿಮಯ ನಡೆಸಲು ಅವಳಿಗೆ ಸಾಧ್ಯವಾಗುವುದು. ಎಲ್ಲಾ ಭಾಷೆಗಳು ಬಹಳ ಸಂಕೀರ್ಣವಾದ ವ್ಯವಸ್ಥೆಗಳಾಗಿವೆಯೆಂದು ನಮಗೆ ತಿಳಿದಿದೆ. ವರ್ಷಗಟ್ಟಲೆ ಸಂಶೋಧನೆಗಳ ಬಳಿಕವೂ ಒಂದು ಭಾಷೆಯ ಕುರಿತಾಗಿಯೂ ಹುಳುಕುಗಳಿಲ್ಲದ ಸಿದ್ಧಾಂತವನ್ನು ವಿಕಾಸಗೊಳಿಸಲು ಬುದ್ಧಿಶಾಲಿಗಳಾದ ಭಾಷಾ ಶಾಸ್ತ್ರಜ್ಞರಿಗೆ ಸಾಧ್ಯವಾಗಿಲ್ಲ. 3+2 =5 ಎಂದು ಅಥವಾ 3x2=6 ಎಂಬ ಸರಳವಾದ ಗಣಿತಶಾಸ್ತ್ರದ ಸಮಸ್ಯೆಯನ್ನು ನಿರ್ಧರಿಸಲು ಸಾಧ್ಯವಾಗದ ಮಗುವು ಇಷ್ಟು ಅಲ್ಪ ಸಮಯದೊಳಗೆ ಸಂಕೀರ್ಣವಾದ ಭಾಷಾ ವ್ಯವಸ್ಥೆಯನ್ನು ಸ್ವಾಯತ್ತಗೊಳಿಸುವುದು.

4. ಮಗು ಪರಿಚಯ ಹೊಂದುವ ಭಾಷೆ ಹಲವು ಸಂದರ್ಭಗಳಲ್ಲಿ ಅಪೂರ್ಣವೂ ಕ್ರಮರಹಿತವೂ ಆಗಿರುವುದು. ಅವಳ ಸಮಾಜದ ಸದಸ್ಯರು ಮಿಕ್ಕ ಸಂದರ್ಭಗಳಲ್ಲೂ ಆಶಯ ವಿನಿಮಯಕ್ಕೆ ಪೂರ್ಣ ವಾಕ್ಯಗಳನ್ನುಪಯೋಗಿಸುವುದಿಲ್ಲ. ಆದರೆ ಇದು ಮಗುವಿನ ಭಾಷಾ ಸಾಮರ್ಥ್ಯದ ಮೇಲೆ ಪರಿಣಾಮ ಬೀರುವುದಿಲ್ಲ. ಒಂದು ನಿಶ್ಚಿತ ಸಮಯದೊಳಗೆ ಅವಳ ಭಾಷಾವ್ಯವಸ್ಥೆ ಶ್ರೀಮಂತವಾಗುವುದು. ಭಾಷೆಯ ಕುರಿತಾದ ನಮ್ಮ ತಿಳುವಳಿಕೆ ಸಂಕೀರ್ಣವೂ ಅಮೂರ್ತವೂ ಆಗಿದೆ. ನಮಗೆ ಲಭಿಸುವ ಭಾಷಾಪರವಾದ ಅನುಭವ ಸೀಮಿತವಾಗಿದೆ. ಈ ರೀತಿಯ ಶುಷ್ಕ ಮಾಹಿತಿಯ ಆಧಾರದಲ್ಲಿ ಸಂಕೀರ್ಣವಾದ ಒಂದು ತಿಳುವಳಿಕೆಯನ್ನು ಸೃಷ್ಟಿಸಲು ಸಾಧ್ಯವಿಲ್ಲ. ಆದುದರಿಂದ ಭಾಷೆಯ ಕುರಿತಾದ ನಮ್ಮ ತಿಳುವಳಿಕೆ ನಮಗೆ ಸಾಕ್ಷ್ಯಾಧಾರಗಳು ಲಭಿಸದ ಬಾಹ್ಯ ಮೂಲದಿಂದ ಲಭಿಸುವುದಾಗಿದೆ. ಇದು ಪೂರ್ವಜನ್ಮ ಸ್ಮರಣೆಯಿಂದ ಲಭಿಸುವುದು ಎಂಬ ವಿವರಣೆಯನ್ನು ಪ್ಲೇಟೋ ನೀಡಿದರು. ಮನಸ್ಸಿನ ನೈಸರ್ಗಿಕ ಸ್ವಭಾವಗಳಿಂದ ಎಂದು ಚೋಂಸ್ಕಿ ತಿಳಿಸಿದರು.

– ವಿ. ಕುಕ್ಕಿ (V. Cook -1998)

5. ಮಾತನ್ನಾಡಲು ಸಾಧ್ಯವಾಗುವ ಪ್ರಾಯದಲ್ಲಿ ಅಂದರೆ 12–18 ತಿಂಗಳಿನಲ್ಲಿ ಪ್ರಪಂಚದ ಯಾವುದೇ ಮಾನವ ಶಿಶುವು ಭಾಷೆ ಕಲಿಯಲಾರಂಭಿಸುವುದು. ಸುನಿಶ್ಚಿತ ಹಂತಗಳ ಮೂಲಕ ಭಾಷೆ ಮುಂದುವರಿಯುವುದು. 2ರಿಂದ 5 ವರ್ಷ ಪ್ರಾಯದ ಮಧ್ಯೆ ಭಾಷೆ ಕಲಿಯಲಿರುವ ಸಾಮರ್ಥ್ಯ ತೀವ್ರವಾಗುವುದು. ಎರಡು ಮತ್ತು ಹನ್ನೆರಡು ವರ್ಷಗಳ ಮಧ್ಯೆ ಮಗುವಿನ ಮೆದುಳು ಪಕ್ವವಾಗುವುದು ಎಂಬುವುದು ಗಮನಾರ್ಹವಾಗಿದೆ.

6. ಭಾಷೆಗೆ ಕೆಲವು ಸಾರ್ವಕಾಲಿಕ ಸ್ವಭಾವಗಳಿವೆ. ಲೋಕದ ಭಾಷೆಗಳೆಲ್ಲಾ ರಚನಾಪರವಾದ ಪರಸ್ಪರ ಸಾದೃಶ್ಯವುಳ್ಳವುಗಳಾಗಿವೆ. ಯಾವುದಾದರೂ ಬಾಹ್ಯಲಕ್ಷಣಗಳ ವಿಚಾರದಲ್ಲಿ ಮಾತ್ರ ಎರಡು ಭಾಷೆಗಳೊಳಗೆ ವ್ಯತ್ಯಾಸಗಳಿರುವುದು. ಈ ವ್ಯತ್ಯಾಸಗಳನ್ನು ಹೆಚ್ಚು ಕಡಿಮೆ ಪ್ರವಚಿಸಲು ಸಾಧ್ಯ.

ಮೇಲೆ ಹೇಳಿದ ವಿಚಾರಗಳು ಭಾಷೆ ಕಲಿಯುವುದಕ್ಕೆ ಸಹಾಯಕವಾದ ಒಂದು ಘಟಕ ಮನುಷ್ಯನ ಮೆದುಳಿನಲ್ಲಿ ಇದೆ ಎಂಬುದರ ಕಡೆಗೆ ಬೊಟ್ಟು ಮಾಡುವುದು. ಮಗುವಿನ ಮನಸ್ಸು ಶೂನ್ಯ ಸ್ಲೇಟ್ (tabularsa) ನ ಹಾಗೆ ಎಂದೂ ಸಮಾಜದಿಂದ ಲಭಿಸುವ ಅರಿವು ಇದರಲ್ಲಿ ತುಂಬಲ್ಪಡುವುದು ಎಂಬ ಜೋನ್ ಲೋಕಿನ (John lock) ವಾದ ಖಂಡಿತ ಸರಿಯಲ್ಲ. ಚೋಂಸ್ಕಿ ಆವಿಷ್ಕರಿಸಿದ ಭಾಷಾ ಸಿದ್ಧಾಂತದ ಆರಂಭ ಘಟ್ಟದಲ್ಲಿ ಮನಸ್ಸಿನ ಭಾಷಾ ಘಟಕವನ್ನು ಭಾಷಾ ಸ್ವಾಯತ್ತಗೊಳಿಸುವ ವ್ಯವಸ್ಥೆ (Language Acquisision device) ಎಂದು ಕರೆದನು.

## ಭಾಷೆ – ಜೀವಶಾಸ್ತ್ರ ಪರವಾಗಿ ಕ್ರಮಬದ್ಧಗೊಳಿಸಿದ ವ್ಯವಸ್ಥೆ

ಮಾನವನ ಮನಸ್ಸಿನಲ್ಲಿ ಅಥವಾ ಮೆದುಳಿನಲ್ಲಿ ಭಾಷೆಗೆ ಬೇಕಾಗಿ ಒಂದು ಘಟಕವಿದೆ ಎಂಬುದು ಚೋಂಸ್ಕಿಯನ್ ಮಾದರಿಯ (Transformational Generative Grammar) ರೂಪುಗೊಂಡ ಬಳಿಕ ಮುಂದಿಟ್ಟ ಆಶಯವಾಗಿದೆ. ಈ ರೀತಿಯಲ್ಲಿ ಭಾಷೆ ಜೀವಶಾಸ್ತ್ರಪರವಾಗಿ ಕ್ರಮಬದ್ಧಗೊಳಿಸಲ್ಪಟ್ಟಿದೆಂಬ ವಾದವನ್ನು ಸಮರ್ಥಿಸುವ ಇತರ ಕೆಲವು ವಿಚಾರಗಳನ್ನು ನಾವು ಪರಿಶೀಲಿಸೋಣ.

(ಆಧಾರ: Jean Athkinson)

- ಜನ್ಮತಾಳಿದಲ್ಲಿಂದ ತಂದೆತಾಯಂದಿರು ಮಕ್ಕಳ ಅಗತ್ಯಗಳನ್ನು ನೆರವೇರಿಸಿ ಅವರನ್ನು ಪರಿಪಾಲಿಸುವರು. ಆದುದರಿಂದ ಜೀವನ ನಿರ್ವಹಣೆಗಾಗಿ ಆಶಯವಿನಿಮಯ ನಡೆಸಬೇಕಾದ ತೀವ್ರ ಅಗತ್ಯ ಮಗುವಿಗೆ ಚಿಕ್ಕಂದಿನಲ್ಲಿ ಬರುವುದಿಲ್ಲ. ಆದರೂ ಮಕ್ಕಳಲ್ಲಿ ಬೇಗನೆ ಭಾಷಾ ವಿಕಾಸ ನಡೆಯುವುದು, ಆಂತರಿಕವಾದ ಭಾಷಾ ವ್ಯವಸ್ಥೆ ಇಲ್ಲದಿದ್ದರೆ ಸ್ವಂತ ವಿಚಾರವನ್ನು

ಮಕ್ಕಳು ನೋಡಲೇ ಬೇಕಾದ ಅನಿವಾರ್ಯತೆ ಬರುವ ಪ್ರಾಯ ಹಾಗೂ ಸಂದರ್ಭದಲ್ಲಿ ಮಾತ್ರ ಭಾಷಾ ಕಲಿಕೆ ಸಾಧ್ಯವಾಗುವುದು.

- ಪ್ರಪಂಚದ ವಿವಿಧ ಭಾಗಗಳಲ್ಲಿರುವ ವಿಭಿನ್ನ ಸಂಸ್ಕೃತಿಗಳಲ್ಲಿ ಬೆಳೆಯುವವರಾದರೂ ಭಾಷಾ ಕಲಿಕೆಯ ವಿಚಾರದಲ್ಲಿ ಮಕ್ಕಳು ಸಮಾನತೆ ಪಾಲಿಸುವರು. ಇದು ಸಮಾನವಾದ ಆಂತರಿಕ ವ್ಯವಸ್ಥೆಯ ಸಾನ್ನಿಧ್ಯವನ್ನು ಸ್ಪಷ್ಟಪಡಿಸುವುದು.
- ನಾಳೆಯಿಂದ ನಾನು ಭಾಷೆ ಮಾತನಾಡಲಾರಂಭಿಸುವೆನು ಎಂದು ಯಾವುದೇ ಮಗುವು ತೀರ್ಮಾನಿಸುವುದಿಲ್ಲ. ಆ ರೀತಿಯ ತೀರ್ಮಾನವಿಲ್ಲದೆ ಭಾಷಾ ಕಲಿಕೆ ನಡೆಯುವುದು.
- ಜೀವನ ಸಂದರ್ಭಗಳಲ್ಲಿ ಪ್ರತ್ಯೇಕ ಬದಲಾವಣೆಗಳೊಂದೂ ಇಲ್ಲದಿರುವಾಗಲೂ ಭಾಷಾ ಕಲಿಕೆಯು ನಡೆಯುವುದು. ಯಾವುದಾದರೂ ಪ್ರತ್ಯೇಕ ಘಟನೆ ಹಾಗೂ ಸಂದರ್ಭದ ವ್ಯತಿಯಾನಗಳು ಮಗುವನ್ನು ಭಾಷಾ ಕಲಿಕೆಯ ಕಡೆಗೆ ಮುನ್ನಡೆಸುವುದಿಲ್ಲ. ಆಂತರಿಕವಾದ ಒಂದು ಗಡಿಯಾರ ಮಗುವಿನ ಒಳಗೆ ಕಾರ್ಯವೆಸಗುತ್ತಿದೆ ಎಂದು ಭಾಸವಾಗುವ ತೆರದಲ್ಲಿ ಐದು ಅಥವಾ ಆರು ತಿಂಗಳು ಪೂರೈಸುವ ಮುಂಚಿತವಾಗಿ ಮಗು ಮಾತನಾಡಲು ಬೇಕಾದ ಕೆಲವೊಂದು ಶಬ್ದಗಳನ್ನು ಹೊರಡಿಸಲು ಆರಂಭಿಸುವುದು.
- ಹದಿನೆಂಟು ತಿಂಗಳುಗಳ ವರೆಗೆ ಮಗು ಕೆಲವೇ ಪದಗಳನ್ನು ಉಚ್ಚರಿಸುವುದು. ಹದಿನೆಂಟು ತಿಂಗಳುಗಳ ಬಳಿಕ ಮಗುವಿನ ಭಾಷಾ ಪ್ರಕಟಣೆಯಲ್ಲಿ ಅಚ್ಚರಿ ಹುಟ್ಟುವಂತೆ ವಿಕಾಸವನ್ನು ಕಾಣಬಹುದು. ಮೆದುಳಿನ ಬೆಳವಣಿಗೆಗೆ ಸಂಬಂಧಿಸಿ ಒಂದು 'ಸ್ವಿಚ್' ಕಾರ್ಯವೆಸಗಲು ಆರಂಭವಾಗುವುದಕ್ಕೆ ಅವಳು ಕಾದುಕುಳಿತಿದ್ದಳು ಎಂಬಂತೆ ಭಾಸವಾಗುವುದು.

## ಸಹಾಯಕ ಗ್ರಂಥಗಳು


1. ಪ್ರಿಸ್ಕೂಲ್ ವಿದ್ಯಾಭ್ಯಾಸಂ (ಒನ್ನಾಂ ಭಾಗಂ) – ಎಂ.ಕೆ. ಶಿವಶಂಕರನ್ ನಾಯರ್ ವಿದ್ಯಾರ್ಥಿ ಮಿತ್ರಂ ಬುಕ್ ಹೌಸ್, ಜೂನ್ 1990
2. ವಿದ್ಯಾಭ್ಯಾಸ ಮನಃಶಾಸ್ತ್ರವುಂ ಶಿಶುವಿಕಾಸವುಂ (ಒನ್ನಾಂ ಭಾಗಂ) – ಡಾ ಕೆ.ಜಿ. ರಾಮಚಂದ್ರ ಪಣಿಕ್ಕರ್, ಪಿ.ಕೆ. ಶಂಕರನಾರಾಯಣನ್ ವಿದ್ಯಾರ್ಥಿಮಿತ್ರಂ ಬುಕ್ ಡಿಪೋ – ಜೂನ್ 1994
3. ಆಧುನಿಕ ಭಾಷಾಶಾಸ್ತ್ರಂ – ಕೆ.ಎಂ. ಪ್ರಭಾಕರವಾರ್ಯರ್, ಶಾಂತಾ ಅಗಸ್ಟಿನ್ ಕೇರಳ ಭಾಷಾ ಇನ್ಸ್‌ಟಿಟ್ಯೂಟ್
4. ಭಾಷಾ ಶಾಸ್ತ್ರ ವಿವೇಕಂ – ಡಾ.ಕೆ.ಎಂ. ಪ್ರಭಾಕರ ವಾರ್ಯರ್ ವಳ್ಳತ್ತೋಳ್ ವಿದ್ಯಾಪೀಠಂ 2013
5. The Language and Mental Development of Children - A.F. Watts, George G. Harraphco 1944.
6. ಭಾಷಾ ವಿಜ್ಞಾನದ ಮೂಲತತ್ವಗಳು – ಡಾ.ಎಂ. ಚಿದಾನಂದ ಮೂರ್ತಿ
7. ಭಾಷೆ ಮತ್ತು ಭಾಷಾ ವಿಜ್ಞಾನ – ಡಾ.ಕೆ. ಕೆಂಪೇ ಗೌಡ
8. ಆಧುನಿಕ ಭಾಷಾ ವಿಜ್ಞಾನ – ಜೆ.ಎಸ್. ಕುಳ್ಳಿ


* * *

## ಘಟಕ – 3

# ಮಾತುಗಾರಿಕೆಯ ಕೌಶಲ್ಯ ಮತ್ತು ವಾಚನಾ ಕೌಶಲ್ಯ

ಭಾಷಾ ಕಲಿಕೆಯ ಮೂಲಭೂತ ಕೌಶಲ್ಯಗಳಲ್ಲಿ ಮಾತುಗಾರಿಕೆ, ವಾಚನ ಮತ್ತು ಲೇಖನವು ಹೆಚ್ಚು ಪ್ರಾಧಾನ್ಯವುಳ್ಳದ್ದಾಗಿವೆ. ಮಾತುಗಾರಿಕೆಯ ಬೆಳವಣಿಗೆಯು ಮಾನಸಿಕ ವಿಕಾಸದೊಂದಿಗೆ ಹೆಚ್ಚಿನ ಸಂಬಂಧವನ್ನು ಹೊಂದಿದೆ. ಭಾಷೆಯ ಲಿಖಿತ ರೂಪದಲ್ಲಿರುವ ಅರ್ಥವನ್ನು ಗ್ರಹಿಸುವುದು ವಾಚನದ ಉದ್ದೇಶವಾಗಿದೆ. ಭಾಷಾ ಕಲಿಕೆಯ ಪ್ರಾಥಮಿಕ ಹಂತದಲ್ಲಿ ತನ್ನ ಮುಂದೆ ತಲುಪುವ ಮಗುವಿನ ಇಂತಹ ನೈಪುಣ್ಯಗಳನ್ನು ಬೆಳೆಸುವುದಕ್ಕಾಗಿ ಅಧ್ಯಾಪಕ ವಿದ್ಯಾರ್ಥಿಗಳು ಈ ಎಲ್ಲಾ ವಿಚಾರಗಳ ಕುರಿತಾದ ತಿಳುವಳಿಕೆಯನ್ನು ಗಳಿಸಬೇಕಾಗಿದೆ. ಮಕ್ಕಳಿಗೆ ಮಾತುಗಾರಿಕೆಗಾಗಿ ಇರುವ ಪ್ರತ್ಯೇಕ ಸಂದರ್ಭಗಳನ್ನು ಒದಗಿಸಬೇಕು. ಅದೇ ರೀತಿಯಲ್ಲಿ ಅನಾಯಾಸವಾಗಿ ಮಾತುಗಾರಿಕೆಯಲ್ಲಿ ತೊಡಗಿಸಿಕೊಳ್ಳಲು ಪ್ರೇರೇಪಿಸುವುದಕ್ಕಾಗಿ ಚಿತ್ರವಾಚನವೇ ಮೊದಲಾದ ಸೌಲಭ್ಯಗಳನ್ನು ಪರಿಚಯಿಸಬೇಕು. ಬರವಣಿಗೆಯ ಚಿತ್ರ ರೂಪವು ಮನಸ್ಸಿನಲ್ಲಿ ನಾಟುವುದೇ ವಾಚನದ ಮೊದಲ ಪಾಠವಾಗಿದೆ. ಅದಕ್ಕಿರುವ ಪ್ರಧಾನ ಮಾಧ್ಯಮವಾದ ಗ್ರಾಫಿಕ್ ರೀಡಿಂಗಿನ ಕುರಿತೂ ತಿಳಿಯಬೇಕು. ಅಕ್ಷರೋಚ್ಚಾರಣ ಭಾಷೆಯಾದ ಕನ್ನಡಕ್ಕೆ ಪ್ರತ್ಯೇಕವಾದ ಬರವಣಿಗೆಯ ರೀತಿಗಳಿವೆಯೆಂದೂ ಮಾತುಗಾರಿಕೆಯ ರೀತಿಗಳು ಬರವಣಿಗೆಯ ಮೇಲೆ ಪ್ರಭಾವ ಬೀರುವುದೆಂದೂ ತಿಳಿದುಕೊಳ್ಳಬೇಕು. ಅದಕ್ಕಾಗಿ ಆಸಕ್ತಿದಾಯಕವಾದ ಅನೇಕ ಚಟುವಟಿಕೆಗಳ ಮೂಲಕ, ತಂತ್ರಗಳ ಮೂಲಕ, ನಿರೀಕ್ಷಣೆಗಳ ಮೂಲಕ, ಅನ್ವೇಷಣೆಗಳ ಮೂಲಕ ಗುರಿಯನ್ನು ತಲುಪಲು ಈ ಘಟಕವು ಸಹಾಯ ಮಾಡುತ್ತದೆ.

**ಭಾಷಾ ಕಲಿಕೆ**

"ಭಾಷೆಯನ್ನು ಆರ್ಜಿಸಲು ಮತ್ತು ಆಶಯ ವಿನಿಮಯ ನಡೆಸಲು ಬೇಕಾದ ಜನ್ಮಸಿದ್ಧವಾದ ಸಾಮರ್ಥ್ಯವು ಮನುಷ್ಯನಿಗಿದೆ. ಶೈಶವದಲ್ಲಿ ಯಾವ ರೀತಿಯಲ್ಲಿ ಮಾತೃಭಾಷಾ ಸಾಮರ್ಥ್ಯವನ್ನು ಗಳಿಸುತ್ತೇವೆಯೋ ಆ ರೀತಿಗಳ ಪ್ರತ್ಯೇಕತೆ ಗಳನ್ನು ಸೇರಿಸಿಕೊಂಡು ಭಾಷಾ ಕಲಿಕಾನುಭವಗಳನ್ನು ರೂಪಿಸಬೇಕು. ಜನ್ಮಸಿದ್ಧವಾದ ಚಿಂತನಾ ಸಾಮರ್ಥ್ಯಗಳನ್ನು ಮತ್ತು ಭಾಷಾ ಕಲಿಕಾ ಸಾಮರ್ಥ್ಯಗಳನ್ನು ಉಪಯೋಗಿಸಿ ಪ್ರತಿ ಮಗುವೂ ಕಲಿಯುತ್ತದೆ. ಆಶಯ ಸ್ವೀಕಾರಕ್ಕೆ ಶ್ರವಣ ಕೌಶಲ್ಯವನ್ನೂ, ಆಶಯ ಪ್ರಸಾರಕ್ಕೆ ಮಾತುಗಾರಿಕೆಯ ಕೌಶಲ್ಯವನ್ನೂ ಉಪಯೋಗಿಸಲಾಗುತ್ತದೆ. ವಾಚನ ಮತ್ತು ಲೇಖನವು ಸಮಾನವಾದ ಇತರ ಎರಡು ಕೌಶಲ್ಯಗಳಾಗಿವೆ. ಈ ಕೌಶಲ್ಯಗಳನ್ನೂ ಪ್ರಯೋಗದ ಮೂಲಕವೇ ಗಳಿಸಲಾಗುತ್ತದೆ. ಒಂದನೇ ತರಗತಿಯಲ್ಲಿ ಮಕ್ಕಳಿಗೆ ಇಷ್ಟವಾದ ಕಥಾಪಾತ್ರಗಳು ಬರುವ ಕಥೆಗಳನ್ನು ಪಾಠಭಾಗಗಳಾಗಿ ಸೇರಿಸಲಾಗಿದೆ. ಎರಡನೇ ತರಗತಿಯಲ್ಲಿ ಕಥೆಗಳಿಗೂ, ಕವಿತೆಗಳಿಗೂ ಹೊರತಾಗಿ ವಿವರಣೆಯ ಪಾಠಗಳು, ಸಂಭಾಷಣೆಯ ಪಾಠಗಳು, ಸರಳ ವೈಜ್ಞಾನಿಕ ಲೇಖನಗಳು ಎಂಬ ರೀತಿಯಲ್ಲಿ ಪಾಠ ಬೆಳವಣಿಗೆಯನ್ನು ನೀಡಲಾಗುತ್ತದೆ."

Standard 1, HB 2013

- ಒಂದು ಮತ್ತು ಎರಡನೇ ತರಗತಿಗಳ ಅಧ್ಯಾಪಕ ಕೈಪಿಡಿಯಲ್ಲಿ ನೀಡಲಾದ ಈ ವಿವರಗಳು ಮುಂದಿರಿಸುವ ಆಶಯಗಳು ಯಾವುವು?

ಭಾಷೆಯ ಸ್ವಾಭಾವಿಕ ರೂಪವು ಮೌಖಿಕ ಮಾತುಗಳಾಗಿವೆ. ಫಲಪ್ರದವಾದ ಆಶಯ ಸ್ವೀಕರಣೆ, ಆಶಯ ಪ್ರಕಟಣೆ ಎಂಬಿವುಗಳಿಗೆ ಭಾಷೆಯು ಅಗತ್ಯವಾಗಿ ಬೇಕು. ಮಾನವನು ಭಾಷೆಯನ್ನು ಉಪಯೋಗಿಸಲು ಪ್ರಾರಂಭಿಸಿ ಸಾವಿರಾರು ವರ್ಷಗಳು ಕಳೆದ ನಂತರ ಲಿಪಿ ರೂಪುಗೊಂಡಿತು. ಪ್ರಪಂಚದಲ್ಲಿ ಅತ್ಯಧಿಕ ಜನರು ಮೌಖಿಕವಾಗಿಯೇ ಆಶಯ ವಿನಿಮಯ ಮಾಡುತ್ತಾರೆ. ಪ್ರಾಚೀನ ಕಾಲದಲ್ಲಿ ಶಿಕ್ಷಣವನ್ನು ಮೌಖಿಕವಾಗಿ ಮಾತುಗಾರಿಕೆಯ ಮೂಲಕವೇ ನೀಡಲಾಗುತ್ತಿತ್ತು.

ಮಾನವ ಶಿಶುವು ಭಾಷಾ ಸಾಮರ್ಥ್ಯವನ್ನು ಗಳಿಸುವ ರೀತಿ ಮತ್ತು ಕ್ರಮ ಯಾವುದು? ಮಕ್ಕಳು ಇತರ ವಿಷಯಗಳನ್ನು ಕಲಿಯುವುದಕ್ಕಿಂತ ವ್ಯತ್ಯಸ್ತವಾಗಿ ಭಾಷೆಯನ್ನು ಕಲಿಯುತ್ತಾರೆಯೇ? ಸಮಾಜದೊಂದಿಗಿನ ಸಂವಹನದ ಮೂಲಕ ಹಿರಿಯರು ಉಪಯೋಗಿಸುವ ಅದೇ ಶಬ್ದಗಳನ್ನೂ ಪದಗಳನ್ನೂ, ವ್ಯಾಕರಣದ ರಚನೆಗಳನ್ನೂ ಮಕ್ಕಳೂ ತಮ್ಮ ಮಾತುಗಾರಿಕೆಯಲ್ಲಿ ಉಪಯೋಗಿಸುವುದರಲ್ಲಿ ಅದ್ಭುತಕರವಾದುದೊಂದೂ ಇಲ್ಲ. ಆದರೆ ಮಾತನಾಡುವವನಿಗೂ ಅದನ್ನು ಕೇಳಿಸಿಕೊಳ್ಳುವ ಶ್ರೋತೃವಿಗೂ ಅನಂತವಾದ ವಾಕ್ಯಗಳನ್ನು ಸೃಷ್ಟಿಸಲೂ ಅದನ್ನು ಅರ್ಥಮಾಡಿಕೊಳ್ಳಲೂ ಸಾಧ್ಯವಿದೆಯಲ್ಲವೇ? ಅನುಕರಣೆಯ ಮೂಲಕವೋ ಅಥವಾ ತರಬೇತಿಯ ಮೂಲಕವೋ ಇದು ಸಾಧ್ಯವಿದೆಯೇ?

ಭಾಷಾ ಕಲಿಕೆಗೆ ಸ್ಪಷ್ಟವಾದ ಕೆಲವು ಮೈಲುಗಲ್ಲುಗಳಿವೆ. ಅವುಗಳು ಬೆಳವಣಿಗೆಯೊಂದಿಗೆ ಸಂಬಂಧ ಹೊಂದಿವೆ. ಯಾವುದೇ ಮಗುವೂ ನಿಶ್ಚಿತವಾದ ಹಂತಗಳನ್ನು ದಾಟಿದ ನಂತರ ಮಾತ್ರ ಭಾಷಾ ಪ್ರಾವೀಣ್ಯವನ್ನು ಗಳಿಸುತ್ತದೆ. ಪ್ರತಿ ಹಂತವನ್ನು ದಾಟುವಾಗಲೂ ಮಕ್ಕಳ ಭಾಷಾ ಕಲಿಕೆಯಲ್ಲಿ ಉನ್ನತಿ ಮತ್ತು ಅವನತಿಗಳು ಉಂಟಾಗುತ್ತವೆ. ಆದರೆ ಹಂತಗಳ ಕ್ರಮಗಳಲ್ಲಿ ಯಾವುದೇ ಬದಲಾವಣೆ ಉಂಟಾಗುವುದಿಲ್ಲ.

- ಭಾಷಾ ಕಲಿಕೆಯ ಈ ಹಂತಗಳನ್ನು ಘಟಕ 2ರಲ್ಲಿ ಕೊಟ್ಟಿರುವ ಪಟ್ಟಿಯ ಆಧಾರದಲ್ಲಿ ಪರಿಶೋಧಿಸಿರಿ.
- ನಿಮ್ಮ ಮನೆಯಲ್ಲಿ ಅಥವಾ ಸಮೀಪದ ಮನೆಗಳಲ್ಲಿರುವ ವಿವಿಧ ಪ್ರಾಯದ ಮಕ್ಕಳ ಸಂಭಾಷಣೆಯ ರೀತಿಗಳನ್ನು ನಿರೀಕ್ಷಿಸಿ ಈ ಹಂತಗಳ ಭಾಷಾ ವಿಶೇಷತೆಗಳನ್ನು ಕಂಡು ಹಿಡಿಯಬಹುದೇ? ಅಳುವುದು, ಕೂಗುವುದು ಮೊದಲಾದವುಗಳನ್ನೆಲ್ಲಾ ಭಾಷೆಯ ಹಂತಗಳಾಗಿ ಪರಿಗಣಿಸಬಹುದೇ? ನಿಮ್ಮ ಅಭಿಪ್ರಾಯವೇನು? ತರಗತಿಯಲ್ಲಿ ಚರ್ಚಿಸಿರಿ.

> ಅಳುವಿನ ಸಂದೇಶವು ಸಾರ್ವಲೌಕಿಕವಾಗಿದೆ. ಇಂಗ್ಲೀಷರಾದ ಹೆತ್ತವರು ತಮ್ಮ ಸ್ವಂತ ಮಗುವಿನ ಅಳುವಿನ ಸಂದೇಶವನ್ನು ಅರ್ಥೈಸಿಕೊಳ್ಳುವ ರೀತಿಯಲ್ಲಿ ಅನಾಯಾಸವಾಗಿ ವಿದೇಶೀ ಮಗುವಿನ ಅಳುವಿನ ಸಂದೇಶವನ್ನು ಅರ್ಥೈಸಿಕೊಳ್ಳುವರೆಂದು ರಿಷ್ಕ್ ನಿರೀಕ್ಷಿಸಿರುತ್ತಾರೆ.
>
> ಕೂಗುವುದು ಧ್ವನಿಪಥವನ್ನು ನಿಯಂತ್ರಿಸಲು ಸಹಾಯಕವಾಗುವುದು. ಕೆರೆಯುವುದು ಮತ್ತು ಗುಳ್ಳೆಗಳನ್ನುಂಟುಮಾಡುವುದು ಮಾತಿನ ಅವಯವಗಳಲ್ಲಿರುವ ಸ್ನಾಯುಗಳ ನಿಯಂತ್ರಣಕ್ಕೆ ಸಹಾಯಕವಾಗುತ್ತದೆ.
>
> – ವಿದ್ಯಾಭ್ಯಾಸ ಪರಿವರ್ತನಿತ್ತೊರು ಆಮುಖಂ – ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್

## ಮಾತಿನ ಕೌಶಲ್ಯ ಎಂಬ ಸಿದ್ಧಿ

18 ತಿಂಗಳುಗಳನ್ನು ದಾಟಿದ ಮಗುವು ಅಸ್ಪಷ್ಟ ಶಬ್ದಗಳ ಜೊತೆಗೆ ವ್ಯತ್ಯಸ್ತ ರಾಗಗಳನ್ನು ಹೊರಡಿಸುತ್ತದೆ. ಒಂದು ಮತ್ತು ಒಂದೂವರೆ ವರ್ಷ ಪ್ರಾಯದೆಡೆಯಲ್ಲಿ ಮಕ್ಕಳು ಸ್ವತಂತ್ರ ಪದಗಳನ್ನು ಉಚ್ಚರಿಸುತ್ತಾರೆ. ಇದೇ ಸಂದರ್ಭದಲ್ಲಿ ಅಸ್ಪಷ್ಟ ಶಬ್ದಗಳನ್ನು ಸೃಷ್ಟಿಸುವ ರೀತಿಯಲ್ಲಿ ಮುಂದುವರಿಯುತ್ತದೆ. ಕ್ರಮೇಣ ಅವರ ಅಸ್ಪಷ್ಟ ಶಬ್ದಗಳು ಯಥಾರ್ಥ ಭಾಷೆಯಾಗಿ ವಿಕಾಸ ಹೊಂದುತ್ತದೆ. ಈ ಹಂತದಲ್ಲಿ ಕನಿಷ್ಠ ಹದಿನೈದು ಸ್ವತಂತ್ರ ಪದಗಳಾದರೂ ಅವರಿಗೆ ತಿಳಿದಿರುತ್ತದೆ. ಇದರಲ್ಲಿ ಜನರ ಮತ್ತು ವಸ್ತುಗಳ ಹೆಸರುಗಳು ಅವರ ಸಂಗ್ರಹದಲ್ಲಿರುತ್ತವೆ. (ಅಮ್ಮ, ಅಪ್ಪ, ಮಾಮ, ಬೆಕ್ಕು, ನಾಯಿ ಇತ್ಯಾದಿ)

ಎರಡು ವರ್ಷವಾಗುವಾಗ ಎರಡು ಪದಗಳನ್ನು ಸೇರಿಸಿ ಇರುವ ಭಾಷಾ ಪ್ರಯೋಗಗಳಿಗೆ ಮಗು ಪ್ರವೇಶಿಸುತ್ತದೆ. ಪದಗಳನ್ನು ಸೇರಿಸಿ ಹೇಳಲು ಪ್ರಾರಂಭಿಸುವ ಹಂತದಿಂದ ಅವರು ಭಾಷಾಪರವಾದ ಸನ್ನದ್ಧತೆಯಲ್ಲಿರುತ್ತಾರೆ. (Language

readiness). ನಂತರ ನಾಟಕೀಯವಾದ ರೀತಿಯಲ್ಲಿ ಅತ್ಯಂತ ವೇಗವಾಗಿ ಮಕ್ಕಳ ಪದ ಸಂಪತ್ತು ವರ್ಧಿಸುತ್ತದೆ. ಒಂದೂವರೆ ವರ್ಷವಾಗುವಾಗ ನೂರಾರು ಪದಗಳು ಮಕ್ಕಳ ನಿಘಂಟುವಿನಲ್ಲಿರುತ್ತವೆ. ಅವುಗಳನ್ನು ಹಲವು ರೀತಿಯಲ್ಲಿ ಜೊತೆಗೊಳಿಸಲೂ ಅವರಿಗೆ ಸಾಧ್ಯವಾಗುತ್ತದೆ. ಯಾವಾಗಲೂ ಅಮ್ಮ ಕೆಲಸಕ್ಕೆ ಹೋಗುವ ಮನೆಯಲ್ಲಿರುವ ಮಗುವು ಒಂದೂವರೆ ವರ್ಷವಾಗುವಾಗ ಅಮ್ಮ ಎಲ್ಲಿ ಹೋದರು ಎಂಬ ಪ್ರಶ್ನೆಗೆ ಅಮ್ಮ ಕೆಲಸಕ್ಕೆ ಹೋದರು ಎಂಬ ವಾಕ್ಯರೂಪದಲ್ಲಿರುವ ಉತ್ತರವನ್ನು ನೀಡುತ್ತದೆಯಲ್ಲವೇ. ಈ 'ಹೋದರು' ಎಂಬ ಕ್ರಿಯಾಪದವನ್ನು ವಿವಿಧ ನಾಮಪದಗಳೊಂದಿಗೆ ಸೇರಿಸಿ ಬೇರೆ ವಾಕ್ಯಗಳನ್ನು ನಿರ್ಮಿಸಲೂ ಮಗುವಿಗೆ ಸಾಧ್ಯವಿದೆ.

ಅಮ್ಮ, ಅಪ್ಪ, ಮಾಮ, ಅಜ್ಜ, ಅಜ್ಜಿ – ಹೋದರು.

ಮೂರುವರೆ ವರ್ಷವಾಗುವಾಗ ಅವರ ಮಾತುಗಾರಿಕೆಯು ಇತರರಿಗೂ ಕೂಡ ಅರ್ಥೈಸಿಕೊಳ್ಳಲು ಸಾಧ್ಯವಾಗುವ ರೀತಿಯಲ್ಲಿರುತ್ತದೆ. ಮಕ್ಕಳು ವ್ಯಾಕರಣಬದ್ಧವಾದ ರಚನೆಗಳನ್ನು ಸೃಷ್ಟಿಸುತ್ತಾರೆ. ಹೀಗೆ ಐದು ವಯಸ್ಸಾದ ಮಗುವು ಮಾತೃಭಾಷೆಯನ್ನು ಸ್ವಾಯತ್ತಗೊಳಿಸಿರುತ್ತದೆ. ಆದರೆ ಭಾಷಾ ಕಲಿಕೆಯು ಅಲ್ಲಿ ಕೊನೆಗೊಂಡಿರುವುದಿಲ್ಲ. 11, 12ನೇ ವರ್ಷದ ವರೆಗೆ ಕಲಿಕಾ ಪ್ರಕ್ರಿಯೆಯು ಮುಂದುವರಿಯುತ್ತದೆ. ಕೌಮಾರ ಪ್ರಾಯಕ್ಕೆ ತಲುಪುವುದರೊಂದಿಗೆ ಮಗುವಿನ ಭಾಷಾ ಕಲಿಕೆಯು ಹೆಚ್ಚು ಕಮ್ಮಿ ಸಂಪೂರ್ಣವಾಗುತ್ತದೆ. ಆದರೆ ಪದಾವಳಿಯನ್ನು ಸ್ವಾಯತ್ತಗೊಳಿಸುವ ಪ್ರಕ್ರಿಯೆಯು ಜೀವನಕಾಲ ಪೂರ್ತಿಯಾಗಿ ಮುಂದುವರಿಯುತ್ತದೆ (John William Affinson-1987)

ಒಂದು ವರ್ಷದಿಂದ ಐದು ವರ್ಷದ ವರೆಗಿನ ಮಕ್ಕಳ ಸಂಭಾಷಣೆಯನ್ನು ನಿರೀಕ್ಷಿಸಿ ಕೆಳಗೆ ಕೊಟ್ಟಿರುವ ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ಪ್ರಾಯ | ಉಚ್ಚರಿಸುವ ಶಬ್ದಗಳು/ಪದಗಳು | ವಾಕ್ಯಗಳು |
|---|---|---|
| ಒಂದು ವರ್ಷ<br>ಎರಡು ವರ್ಷ<br>ಮೂರು ವರ್ಷ<br>ಪೂರ್ವ ಪ್ರಾಥಮಿಕ ಹಂತದ ಮಗು<br>ಒಂದನೇ ತರಗತಿಯ ಮಗು<br>ನಾಲ್ಕನೇ ತರಗತಿಯ ಮಗು | | |

- ಹೀಗೆ ಸ್ವಾಭಾವಿಕವಾಗಿ ಮಗುವು ಭಾಷೆಯನ್ನು ಸ್ವಾಯತ್ತಗೊಳಿಸುವುದೂ, ಸ್ವತಂತ್ರವಾಗಿ ಮಾತುಗಾರಿಕೆಯನ್ನೂ ನಡೆಸುವುದಾದರೆ ಪ್ರಾಥಮಿಕ, ಹಿರಿಯ ಪ್ರಾಥಮಿಕ ತರಗತಿಗಳಲ್ಲಿ ಮಾತುಗಾರಿಕೆಯ ತರಬೇತಿಯನ್ನು ಕೊಡಬೇಕಾದ ಅಗತ್ಯವಿದೆಯೇ?
- ನಿಮ್ಮ ದೃಷ್ಟಿಕೋನಗಳನ್ನು ಹಂಚಿಕೊಳ್ಳಿರಿ.
- ನಿಮ್ಮ ಪರಿಸರದ ಒಬ್ಬ ಕೃಷಿಕಾರ್ಮಿಕ, ಯಾವುದಾದರೂ ಪ್ರತ್ಯೇಕ ರೀತಿಯ ಕೆಲಸವನ್ನು ಮಾಡುವವರು, ಒಬ್ಬ ವ್ಯಾಪಾರಿ, ಒಬ್ಬ ಹಯರ್ ಸೆಕೆಂಡರಿ ವಿದ್ಯಾರ್ಥಿ, ವಿವಿಧ ಪ್ರಾಯದವರು, ವಿವಿಧ ಸಮುದಾಯದವರು ಎಂಬವರೊಂದಿಗೆ ಎಲ್ಲರಿಗೂ ಹೇಳಲು ಸಾಧ್ಯವಾಗುವ ಒಂದು ವಿಷಯದ ಕುರಿತು ಮಾತನಾಡಲು ಹೇಳಿರಿ. ಅದನ್ನು ರೆಕಾರ್ಡ್ ಮಾಡಿರಿ. ನಂತರ ಇದನ್ನು ಪುನಃ ಕೇಳಿಸಿ, ಕೆಳಗೆ ಹೇಳಿರುವ ಸೂಚಕಗಳ ಆಧಾರದಲ್ಲಿ ವಿಶ್ಲೇಷಿಸಿ ಮಾತುಗಾರಿಕೆಯ ವೈವಿಧ್ಯಗಳನ್ನೂ ಮಾತುಗಾರಿಕೆಯ ಮೇಲೆ ಪ್ರಭಾವ ಬೀರುವ ಘಟಕಗಳನ್ನೂ ಕಂಡುಹಿಡಿದು ಪ್ರಸ್ತುತಪಡಿಸಿರಿ.

**ಸೂಚಕಗಳು**

- ವಯಸ್ಸಿನ ವ್ಯತ್ಯಾಸವು ಮಾತುಗಾರಿಕೆಯ ಮೇಲೆ ಪ್ರಭಾವ ಬೀರುತ್ತದೆಯೇ?
- ಕೆಲಸ ಮಾಡುವ ಕ್ಷೇತ್ರ ಮತ್ತು ಮಾತುಗಾರಿಕೆಯ ಮಧ್ಯೆ ಪರಸ್ಪರ ಸಂಬಂಧವಿದೆಯೇ?
- ಶಿಕ್ಷಣ, ಸಾಮಾಜಿಕ ಸ್ಥಿತಿ, ಸಾಂಸ್ಕೃತಿಕ ಪರಿಸರ, ಭೌಗೋಳಿಕ ಸ್ಥಿತಿ ಎಂಬಿವುಗಳು ಮಾತುಗಾರಿಕೆಯ ಮೇಲೆ ಹೇಗೆ ಪ್ರಭಾವ ಬೀರುತ್ತವೆ? ನಿಗಮನಗಳನ್ನು ಗುಂಪು ಚರ್ಚೆ ಮಾಡಿ ಕ್ರೋಡೀಕರಿಸಿ ಮಂಡಿಸಿರಿ.
- ಒಂದೇ ತರಗತಿಯಲ್ಲಿರುವವರಾದರೂ ಅವರಲ್ಲಿ ಕೆಲವು ಮಕ್ಕಳಿಗೆ ವಾಚಿಕವಾದ ಆಶಯ ಪ್ರಕಟಣೆಗಳನ್ನು (ಅನುಭವ ಹಂಚಿಕೊಳ್ಳುವುದು, ಭಾಷಣ, ಪ್ರಶ್ನೆಗಳು, ಉಪನ್ಯಾಸ) ಉತ್ತಮ ರೀತಿಯಲ್ಲಿ ನಡೆಸಲು ಸಾಧ್ಯವಾಗಲೂ, ಇನ್ನು ಕೆಲವರಿಗೆ ಇದರಲ್ಲಿ ಬೇಕಾದಷ್ಟು ಸಾಮರ್ಥ್ಯವನ್ನು ಪ್ರಕಟಿಸಲು ಸಾಧ್ಯವಾಗದೇ ಇರಲೂ ಕಾರಣವೇನು?

ಮನೆಯ ಪರಿಸರವು ಕೆಲವು ಮಕ್ಕಳಿಗೆ ಸ್ವತಂತ್ರವಾಗಿ ಮಾತುಗಾರಿಕೆಯಲ್ಲಿ ತೊಡಗಿಸಿಕೊಳ್ಳಲೂ, ನಿರ್ಭಯವಾಗಿ ಇತರರೊಂದಿಗೆ ಆಶಯವಿನಿಮಯ ನಡೆಸಲೂ ಬೇಕಾದ ಸಂದರ್ಭವನ್ನೊದಗಿಸುತ್ತದೆ. ಆಶಯ ಸ್ವೀಕರಣೆಗೂ, ಆಶಯ ಪ್ರಕಟಣೆಗೂ ಬೇಕಾದಷ್ಟು ಅವಕಾಶಗಳು ಲಭಿಸುವವರಲ್ಲಿ ಮಾತುಗಾರಿಕೆಯ ಕೌಶಲ್ಯವು ಹೆಚ್ಚಾಗಿ ಕಂಡುಬರುತ್ತದೆಯೇ ? ಈ ನಮ್ಮ ತರಗತಿಯ ಮಕ್ಕಳು ಇಂತಹ ವೈವಿಧ್ಯಮಯವಾದ ಅನುಭವ ಸಂಪತ್ತಿನ ಒಡೆಯರಾಗಿರುತ್ತಾರೆ. ಅವರಿಗೆ ಸಾಮಾನ್ಯವಾದ ಅನುಭವಗಳನ್ನು ನೀಡುವುದು ಮತ್ತು ಅವರನ್ನು ಉತ್ತಮ ಮಾತುಗಾರಿಕೆಯ ಕೌಶಲ್ಯವುಳ್ಳವರಾಗಿ ಬದಲಾಯಿಸುವುದು ಮಾತುಗಾರಿಕೆಯ ತರಬೇತಿಯ ಪ್ರಧಾನ ಉದ್ದೇಶವಾಗಿದೆ.

## ಮಾತುಗಾರಿಕೆಯ ಪ್ರಾಧಾನ್ಯ

- ಪ್ರಾಥಮಿಕ ತರಗತಿಗಳಲ್ಲಿ ಭಾಷಾ ಕಲಿಕೆಗೆ ಹೆಚ್ಚಿನ ಸಮಯವನ್ನು ಮೀಸಲಿರಿಸುವುದು ಯಾಕೆ?

ಮಗುವಿಗೆ ಶಾಲೆಗೆ ತಲುಪುವುದಕ್ಕಿಂತ ಮೊದಲೇ ಭಾಷೆ ತಿಳಿದಿರುತ್ತದೆ. ಪ್ರಾಥಮಿಕ ವಿದ್ಯಾಲಯಕ್ಕೆ ತಲುಪುವಾಗ ಮಗುವು ಭಾಷೆಯನ್ನು ಕಲಿಯಲು ಪ್ರಾರಂಭಿಸುವುದಲ್ಲ ಬದಲಾಗಿ ಭಾಷೆಯ ಕಲಿಕೆಯನ್ನು ಮುಂದುವರಿಸುವುದಾಗಿದೆ. ಪರಿಸರಕ್ಕೆ ಸಂಬಂಧಿಸಿದ ಕಾರಣಗಳಿಂದಾಗಿ ಮಕ್ಕಳ ಭಾಷಾ ವಿಕಾಸದಲ್ಲಿ ವ್ಯಕ್ತಿ ಭಿನ್ನತೆಗಳು ಪ್ರಕಟವಾಗುತ್ತವೆಯೆಂದು ಪ್ರಸಿದ್ಧ ಭಾಷಾ ಶಾಸ್ತ್ರಜ್ಞನಾದ ಕೆಯ್ಸ್‌ಡೇ ಅಭಿಪ್ರಾಯಪಡುತ್ತಾನೆ. ಜೀವನ ರೀತಿಗಳೂ ಕೌಟುಂಬಿಕ ವಿಚಾರಗಳೂ ಈ ವ್ಯತ್ಯಾಸಕ್ಕೆ ಕಾರಣವಾಗುತ್ತದೆ. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ಮಕ್ಕಳಲ್ಲೂ ಭಾಷಾ ವಿಕಾಸದಲ್ಲಿ ವ್ಯತ್ಯಾಸವನ್ನು ಕಾಣಬಹುದು. 5–6 ವರ್ಷವಾಗುವಾಗ ಸಂದರ್ಭಕ್ಕೆ ಸೂಕ್ತವಾಗುವ ಪದಗಳನ್ನು ಉಪಯೋಗಿಸಲು ಮಗುವಿಗೆ ಸಾಧ್ಯವಿದೆ. ಮಗುವಿಗೆ ಮೊದಲಿಗೆ ಲಭಿಸುವ ಭಾಷಾ ಸಿದ್ಧಿಯೂ ಇದೇ ಆಗಿದೆ. ಭಾಷಾದಕ್ಷತೆ ಉಂಟಾದರೆ ಮಾತ್ರ ಸಾಲದು. ಭಾಷೆಯನ್ನು ಸರಿಯಾದ ರೀತಿಯಲ್ಲಿ ಪ್ರಯೋಗಿಸಲೂ ಸಾಧ್ಯವಾಗಬೇಕು. ಇದನ್ನು ಭಾಷೆಯ ನಿರ್ವಹಣೆ ಎಂದೂ ಕರೆಯಬಹುದು. ಮಕ್ಕಳಿಗೆ ತಮ್ಮ ಸಮಪ್ರಾಯದವರೊಡನೆ ಭಾಷೆಯ ನಿರ್ವಹಣೆಗೆ ತೊಂದರೆ ಉಂಟಾಗುವುದಿಲ್ಲ. ಆದರೆ ಅಪರಿಚಿತರಾದ ಜನರೊಡನೆಯೂ, ಸಂದರ್ಭಗಳಲ್ಲೂ ಭಾಷೆಯ ನಿರ್ವಹಣೆಯು ತೊಂದರೆಯನ್ನುಂಟುಮಾಡುತ್ತದೆ. ಭಾಷಾದಕ್ಷತೆಯೊಂದಿಗೆ ಮಕ್ಕಳು ಶಾಲೆಗೆ ಬರುವುದಾದರೂ ಅವುಗಳ ಸೂಕ್ತವಾದ ನಿರ್ವಹಣೆಯ ಮೂಲಕ ಹಲವು ಸಂದರ್ಭಗಳಲ್ಲಿ ತಮ್ಮ ಭಾಷಾ ದಕ್ಷತೆಯು ಪ್ರಕಟವಾಗಿದ್ದರೂ ಭಾಷೆಯು ಹೇಗೆ ಕಾರ್ಯನಿರ್ವಹಿಸುತ್ತದೆಯೆಂದು ಸರಿಯಾದ ರೀತಿಯಲ್ಲಿ ಅರ್ಥೈಸಿಕೊಳ್ಳಲು ಅವರಿಗೆ ಈ ಪ್ರಾಯದಲ್ಲಿ ಸಾಧ್ಯವಾಗುವುದಿಲ್ಲ. ಆ ಸಾಮರ್ಥ್ಯವನ್ನು ಗಳಿಸುವುದೇ ಶಾಲೆಯ ಭಾಷಾ ಕಲಿಕೆಯ ಉದ್ದೇಶ.

### ಮಾತುಗಾರಿಕೆಯನ್ನು ಅಭ್ಯಾಸ ಮಾಡುವುದರ ಉದ್ದೇಶಗಳು

- ವಿವಿಧ ರೂಪದಲ್ಲಿರುವ ಮಾತುಗಾರಿಕೆಯ ಅಭ್ಯಾಸಗಳ ಮೂಲಕ ಆಶಯಗಳಿಗೆ ಸ್ಪಷ್ಟತೆಯನ್ನು ನೀಡಿ, ಸರಿಯಾದ ಭಾಷೆಯಲ್ಲಿ ಅವುಗಳನ್ನು ಸಮರ್ಥವಾಗಿ ಪ್ರಕಟಿಸಲು ಮಕ್ಕಳನ್ನು ತರಬೇತುಗೊಳಿಸುವುದು.

- ಭಾಷಾ ಪ್ರಯೋಗಗಳಲ್ಲಿ ಬರುವ ಕೆಲವು ಪರಿಮಿತಿಗಳನ್ನು ಪರಿಹರಿಸುವುದು.
- ಸಂವಾದ ರೂಪದಲ್ಲಿ ಆಶಯ ಸ್ವೀಕಾರ ಮತ್ತು ಆಶಯ ಪ್ರಕಟಣೆಯನ್ನು ಸುಗಮಗೊಳಿಸುವುದು.
- ಮೂಲಭೂತ ಕೌಶಲ್ಯಗಳ ಪರಸ್ಪರ ಸಂಬಂಧವನ್ನು ತಿಳಿಸಿಕೊಡುವುದು.
- ಮಕ್ಕಳ ಭಾಷಾ ಪ್ರಯೋಗಗಳಲ್ಲಿ ಇರುವ ಕೆಟ್ಟ ಹವ್ಯಾಸಗಳನ್ನು ನೀಗಿಸಿ ಉತ್ತಮ ಹವ್ಯಾಸಗಳನ್ನು ಬೆಳೆಸುವುದು.

| |
|---|
| ಕೇಳಿಸುವುದು ಮತ್ತು ಹೇಳುವುದರೊಳಗೆ ಪರಸ್ಪರ ಸಂಬಂಧವಿದೆ. ಹೇಳುವುದು ವಾಚನದ ಮೊದಲ ಹಂತ. ಓದಿ ಪರಿಚಯಿಸಿಕೊಂಡವುಗಳನ್ನು ಬರೆಯುವಾಗ ಸ್ವಾಭಾವಿಕವಾಗಿ ಲಿಪಿ ವ್ಯತ್ಯಾಸವನ್ನು ತಿಳಿದುಕೊಳ್ಳಲಾಗುತ್ತದೆ. |
| ವೇಗದ ಮಾತುಗಾರಿಕೆ, ಮಂದವಾದ ಮಾತುಗಾರಿಕೆ, ಆವರ್ತನೆಯು ಅಗತ್ಯವಿಲ್ಲದೇ ಇರುವಲ್ಲಿ ಎಳೆಯುವಿಕೆ, ಕಡಿಮೆಗೊಳಿಸುವುದು, ಹೂಂಗುಟ್ಟೆಯೂ, ಇತರ ಶಬ್ದವನ್ನೊಳಗೊಂಡ ಸಂಭಾಷಣೆ ಇವುಗಳೆಲ್ಲಾ ಮಾತುಗಾರಿಕೆಗೆ ಹೊಂದುವವುಗಳಲ್ಲ. |

> ಕುಟುಂಬ ಸದಸ್ಯರೊಂದಿಗೂ, ಜೊತೆಗಾರರೊಂದಿಗೂ, ಮನೆಗೆ ಬರುವ ಇತರರೊಂದಿಗೂ ವ್ಯವಹರಿಸುವುದರ ಭಾಗವಾಗಿ ಅವರೊಂದಿಗೆ ಮಾತನಾಡಿ ಮಾತುಗಾರಿಕೆಯ ಹಲವು ನೈಪುಣ್ಯಗಳನ್ನು ಗಳಿಸಿದ ಕಲಿಕಾರ್ಥಿಯು ಶಾಲೆಗೆ ತಲುಪುತ್ತದೆ. ಈ ಮಾತಿನ ನೈಪುಣ್ಯವನ್ನು ವಿಭಿನ್ನ ಸಂದರ್ಭಗಳಲ್ಲಿ (ಔಪಚಾರಿಕ, ಅನೌಪಚಾರಿಕ) ಪ್ರತ್ಯೇಕ ಉದ್ದೇಶಗಳಿಗೆ ಅನುಗುಣವಾದ ರೀತಿಯಲ್ಲಿ ವಿಕಾಸಗೊಳಿಸುವುದು ಪ್ರಾಥಮಿಕ ಹಂತದ ಮಾತುಗಾರಿಕೆಯ ಬೋಧನೆಯ ಗುರಿಯಾಗಿದೆ. ಭಾಷಾ ಭೇದ ಮತ್ತು ಪ್ರಾದೇಶಿಕ ವ್ಯತ್ಯಾಸ ಎಂಬಿವುಗಳ ಪ್ರಭಾವದಿಂದ ಉಂಟಾಗಲು ಸಾಧ್ಯತೆಯಿರುವ ಉಚ್ಚಾರದ ಸಮಸ್ಯೆಗಳನ್ನು ಮಗುವಿನ ಆತ್ಮವಿಶ್ವಾಸಕ್ಕೆ ತೊಂದರೆಯಾಗದ ರೀತಿಯಲ್ಲಿ ತಿದ್ದಬೇಕು. ಇದಕ್ಕಾಗಿ ಹಲವು ರೀತಿಯಲ್ಲಿರುವ ಮಾತುಗಾರಿಕೆಯ ಸಂದರ್ಭಗಳು ಮಗುವಿಗೆ ತರಗತಿಯಲ್ಲಿ ಲಭಿಸಬೇಕು.

**ಮಗುವಿಗೆ ಲಭಿಸಬೇಕಾದ ಮಾತುಗಾರಿಕೆಯ ಸಂದರ್ಭಗಳು**

- ಅನುಭವಗಳನ್ನು ಹಂಚಿಕೊಳ್ಳುವುದು. (ಆಟ, ಪ್ರಯಾಣ, ಆಚರಣೆ, ಓದು)
- ಮಾತುಗಾರಿಕೆಗೆ ಸಾಧ್ಯತೆಯಿರುವ ಆಟಗಳಲ್ಲಿ ತೊಡಗಿಸಿಕೊಳ್ಳುವುದು.
- ಕಥೆ ಹೇಳುವುದು
- ಅಭಿಪ್ರಾಯ ಪ್ರಕಟಣೆಗಳು
- ಪ್ರಶ್ನೆಗಳನ್ನು ಕೇಳಲೂ, ಉತ್ತರಗಳನ್ನು ಹೇಳಲೂ ಸಾಧ್ಯತೆಯಿರುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು.
- ಒಂದು ವಿಷಯದ ಕುರಿತು ಮಾತನಾಡುವುದು.
- ಇಷ್ಟವಿರುವವುಗಳು ಮತ್ತು ಇಷ್ಟವಿಲ್ಲದೇ ಇರುವವುಗಳೂ ಅದರ ಕಾರಣಗಳನ್ನೂ ಹೇಳುವುದು.
- ಒಂದನೇ ಘಟಕದಲ್ಲಿ ಪರಿಚಯಿಸಿಕೊಂಡ ಜನಪದ ಸೊಲ್ಲುಗಳನ್ನು ಹೇಳಿಕೊಂಡು ಆಡುವ ಆಟಗಳು, ಒಗಟುಗಳ ಸ್ಪರ್ಧೆ, ಶ್ರದ್ಧ ಮೊಡ್ಯೂಲಿನಲ್ಲಿ ಸೇರಿಸಿದ ಕಥೆಯಲ್ಲಿ ಸೇರೋಣ ಎಂಬ ಚಟುವಟಿಕೆ (ಉಣ್ಣಿಯೂ ಸೊಳ್ಳೆಯೂ ಎಂಬ ಕಥೆ) ಹೀಗೆ ಭಾಷಣಕ್ಕೆ ಪ್ರಾಧಾನ್ಯವಿರುವ ಚಟುವಟಿಕೆಗಳ ಒಂದು ಸಂಗ್ರಹವನ್ನು ತಯಾರಿಸಬೇಕು. ಈ ರೀತಿಯ ಚಟುವಟಿಕೆಗಳನ್ನು ಶಾಲಾ ತರಗತಿಗಳಲ್ಲಿ ಟ್ರೈ ಔಟ್ ಮಾಡಿ ಅನುಭವಗಳನ್ನು ಹಂಚಿಕೊಳ್ಳಬೇಕು.

**ಮಾತುಗಾರಿಕೆಯ ತರಬೇತಿಗಿರುವ ದಾರಿಗಳು**

ಪ್ರತಿ ಅಧ್ಯಯನ ಹಂತದಲ್ಲೂ ಮಾತುಗಾರಿಕೆಯ ತರಬೇತಿಗೆ ವ್ಯತ್ಯಸ್ತವಾದ ರೀತಿಗಳನ್ನು ಉಪಯೋಗಿಸಬೇಕು. ಮಕ್ಕಳ ಪ್ರಾಯ ಮತ್ತು ಆಸಕ್ತಿಗನುಗುಣವಾದ ವಿಧಾನಗಳನ್ನು ಪ್ರಧಾನವಾಗಿ ಸ್ವೀಕರಿಸಬೇಕು. ಪ್ರಾಥಮಿಕ ಶಾಲೆಗೆ ತಲುಪುವ ಎಲ್ಲಾ ಮಕ್ಕಳ ಭಾಷಾಪರವಾದ ಸಾಮರ್ಥ್ಯವು ಒಂದೇ ರೀತಿಯಲ್ಲಿರುವುದಿಲ್ಲ. ವ್ಯಕ್ತಿ ಭಿನ್ನತೆಗನುಸಾರವಾಗಿ ಭಾಷಾಪರವಾದ ತಿಳುವಳಿಕೆಯಲ್ಲೂ ವ್ಯತ್ಯಾಸವಿರುತ್ತದೆ. ಮಕ್ಕಳ ಭಾಷಾ ಜ್ಞಾನವನ್ನು ಸೂಕ್ಷ್ಮವಾಗಿ ಪರಿಶೋಧಿಸುವುದು ಅಧ್ಯಾಪಕನು ಮಾಡಬೇಕಾದ ಮೊತ್ತಮೊದಲ ಕೆಲಸವಾಗಿರುತ್ತದೆ. ಅದಕ್ಕಾಗಿ ಪ್ರತಿ ಮಗುವಿನೊಡನೆಯೂ ಮಾತನಾಡಬೇಕು. ತೀರಾ ಅನೌಪಚಾರಿಕ ಸಂಭಾಷಣೆಯನ್ನು ಮಾಡಬೇಕು. ಪರಿಚಯವಿಲ್ಲದೇ ಇರುವುದರಿಂದ ಕೆಲವೊಮ್ಮೆ ಮಕ್ಕಳು ಮೊದಲು ಮಾತನಾಡಲು ಸಂಕೋಚಪಡಬಹುದು. ಪ್ರೀತಿಪೂರ್ವಕವಾದ ಮಾತುಗಳಿಂದ ಮೊದಲು ಅವರಲ್ಲಿ ಆತ್ಮೀಯತೆಯನ್ನು ಬೆಳೆಸಿದ ನಂತರ ಮಾಡನಾಡಿರಿ. ಮಕ್ಕಳಿಗೆ ಪರಿಚಿತವಾದ ಮತ್ತು ಇಷ್ಟವಿರುವ ವಿಷಯದ ಕುರಿತು ಅಥವಾ ಯಾವುದಾದರೂ ವಸ್ತುಗಳನ್ನು ತೋರಿಸಿ ಮಾತನಾಡಲು ಹೇಳಬಹುದು. ಮಕ್ಕಳ ಅನುಭವ ಮಂಡಲದ ವ್ಯಾಪ್ತಿ, ಆಸಕ್ತಿಗಳು, ಆಶಯ ಕ್ರಮೀಕರಣದ ಸಾಮರ್ಥ್ಯ, ಮನೆಯ ವಾತಾವರಣ, ವರ್ತನೆ ಇತ್ಯಾದಿಗಳನ್ನೆಲ್ಲಾ ಮಕ್ಕಳ ಸಂಭಾಷಣೆಯ ಮೂಲಕ ಅಧ್ಯಾಪಕನಿಗೆ ಅರ್ಥಮಾಡಿಕೊಳ್ಳಬಹುದು. ಭಾಷಾ ಸಂಬಂಧವಾದ ವೈಕಲ್ಯಗಳನ್ನೂ ಕಂಡುಹಿಡಿಯಲು ಸಾಧ್ಯವಿದೆ. ಆದರೆ ಸಾರ್ವಜನಿಕವಾಗಿ ತಪ್ಪುಗಳನ್ನು ಎತ್ತಿ ತೋರಿಸುವುದು ಅಥವಾ ವಿಮರ್ಶಿಸುವುದನ್ನೂ ಮಾಡಬಾರದು. ಅವರಲ್ಲಿ ಕಂಡುಬರುವ ವ್ಯಾಕರಣ ದೋಷಗಳು ಅಥವಾ ಅಪೂರ್ಣ ವಾಕ್ಯಗಳನ್ನು ಗಮನಿಸಬೇಕಾಗಿಲ್ಲ, ಉಚ್ಚಾರ, ಮಾತುಗಾರಿಕೆಯ ನಿರಂತರತೆ, ವಾಕ್ಯಗಳನ್ನು ಪ್ರಯೋಗಿಸುವುದರಲ್ಲಿ ಇರುವ ಚತುರತೆ ಇತ್ಯಾದಿಗಳನ್ನು ಅಧ್ಯಾಪಕರು ಗಮನಿಸಬೇಕು. ಮಗು ಶಾಲೆಗೆ ತಲುಪುವ ಪ್ರಾರಂಭದ ಕೆಲವು ದಿವಸಗಳನ್ನು ಹೀಗೆ ಸಂಭಾಷಣೆಯ ತರಬೇತಿಗಾಗಿ ಉಪಯೋಗಿಸಬೇಕು. ಅಧ್ಯಾಪಕ ವಿದ್ಯಾರ್ಥಿಗಳಿಗೆ ಕೇಳಲೂ ಅನುಕರಿಸಲೂ ಸಾಧ್ಯವಾಗುವ ರೀತಿಯಲ್ಲಿ ಮಾತನಾಡಬೇಕು. ಅಧ್ಯಾಪಕರ ಭಾಷೆಯ ಶುದ್ಧವೂ, ಸ್ಪಷ್ಟವೂ ಸ್ವಾಭಾವಿಕವೂ ಆಗಿರಬೇಕು. ಪ್ರಾಥಮಿಕ ತರಗತಿಯ ಮಾತುಗಾರಿಕೆಯ ಅಭ್ಯಾಸಕ್ಕೆ ಕಥೆಯ ಪ್ರಸ್ತುತಿಯು ಹೆಚ್ಚು ಸೂಕ್ತವಾದುದಾಗಿದೆ. ಕಥೆಯನ್ನು ಪ್ರಸ್ತುತಪಡಿಸಲು ವಿವಿಧ ರೀತಿಗಳನ್ನು ಅನುಸರಿಸಬಹುದು. ಚಿತ್ರಗಳನ್ನು ಉಪಯೋಗಿಸಿ ಕಥೆ, ಸಂಭಾಷಣೆ, ಸರಳವಾದ ವಿವರಣೆ, ಹಾಡು ಎಂಬಿವುಗಳನ್ನು ಭಾವಪೂರ್ಣವಾಗಿ ಮಾಡಿಸಬಹುದು. ಪ್ರಶ್ನೆಗಳ ಮೂಲಕವೂ ಸೂಚನೆಗಳ ಮೂಲಕವೂ ಚಿತ್ರಗಳನ್ನು ವಿಶ್ಲೇಷಣೆ ಮಾಡುವ ಸಾಮರ್ಥ್ಯವನ್ನು ಬೆಳೆಸಲು ಸಾಧ್ಯವಿದೆ. ಕಥೆಯ ವಾಚನದೆಡೆಗೆ ಮುಂದುವರಿಯುವ ರೀತಿಯಲ್ಲಿ ಚಿತ್ರ ವಾಚನವನ್ನು ನಡೆಸಲು ಸಾಧ್ಯವಿದೆ. ಮಕ್ಕಳು ಗಳಿಸಿದ ಆಶಯಗಳು, ನೈಪುಣ್ಯಗಳು, ಮನೋಭಾವಗಳು ಎಂಬಿವುಗಳನ್ನು ಮೌಲ್ಯಮಾಪನ ಮಾಡಲೂ ಇವುಗಳನ್ನು ಉಪಯೋಗಿಸಬಹುದು. ಬಣ್ಣಗಳಿಂದೊಡಗೂಡಿದ ಚಿತ್ರಗಳನ್ನು ಉಪಯೋಗಿಸುವುದು ಹೆಚ್ಚು ಸೂಕ್ತವಾಗಿದೆ. ಸಣ್ಣ ಮಕ್ಕಳಿಗೆ ಸೂಕ್ತವಾದ ಚಿತ್ರಗಳಿಗೆ ಹೆಚ್ಚಿನ ಪ್ರತ್ಯೇಕತೆಗಳಿವೆ.

ನಂದು ಮೂರನೇ ತರಗತಿಯಲ್ಲಿ ಕಲಿಯುತ್ತಾನೆ. ಓಣಂ ರಜೆಯ ನಂತರ ತರಗತಿಗೆ ತಲುಪಿದ ಮಕ್ಕಳೊಡನೆ ಅವರ ಓಣಂ ಆಚರಣೆಯ ಬಗ್ಗೆ ಒಬ್ಬೊಬ್ಬರಾಗಿ ಹೇಳಲು ಅಧ್ಯಾಪಿಕೆಯು ಹೇಳಿದರು. ನಂದು ಮಾತ್ರ ಒಂದೂ ಹೇಳದೆ ಕೇವಲ ಎದ್ದು ನಿಂತುಕೊಂಡನು. ಅಧ್ಯಾಪಿಕೆಯು ಅವನ ಓಣಂನ ಬಗ್ಗೆ ಒಂದೊಂದಾಗಿ ಕೇಳಿದಾಗ ಅವನು ಉತ್ತರ ಕೊಟ್ಟನು. ಆದರೆ ಇಂಟರ್‌ವೆಲ್‌ನ ಸಮಯದಲ್ಲಿ ಅವನು ಅವನ ಓಣಂನ ವಿಚಾರವನ್ನು ಅವನ ಗೆಳೆಯನಾದ ಗೋಪುವಿನೊಡನೆ ಹಂಚಿಕೊಳ್ಳುವುದನ್ನು ಅಧ್ಯಾಪಿಕೆಯು ಗಮನಿಸಿದರು. ಗೆಳೆಯನೊಡನೆ ಅನುಭವಗಳನ್ನು ಹಂಚಿಕೊಳ್ಳುವಾಗ ಆಶಯ ಪ್ರಕಟಣೆಗೆ ಯಾವುದೇ ತೊಂದರೆ ಉಂಟಾಗಲಿಲ್ಲ. ಮಕ್ಕಳು ತೊಡಗಿಸಿಕೊಳ್ಳುವ ಜ್ಞಾನ ನಿರ್ಮಾಣ ಪ್ರಕ್ರಿಯೆಯಲ್ಲಿ ಅಧ್ಯಾಪಕರು ಹೆಚ್ಚು ಕ್ರಿಯಾತ್ಮಕವಾದ ಪಾತ್ರವನ್ನು ನಿರ್ವಹಿಸುವುದಾದರೆ ಅದು ಮಕ್ಕಳ ತಿಳುವಳಿಕೆಯನ್ನು ಬಲಪಡಿಸುವುದು. ಕಲಿಕೆಗೆ ಸನ್ನದ್ಧರಾಗಿರುವ ಮಕ್ಕಳು ಸ್ವಂತ ಜ್ಞಾನವನ್ನು ನಿರ್ಮಿಸುತ್ತಾರೆ. ತಾವು ಶಾಲೆಯಲ್ಲಿ ಕಲಿಯುವ ವಾಸ್ತವಿಕತೆಗಳನ್ನು ಶಾಲೆಯ ಹೊರಗೆ ನಡೆಯುವ ಕಾರ್ಯಗಳೊಂದಿಗೆ ಜೋಡಿಸಲು ಮಕ್ಕಳಿಗೆ

ಅವಕಾಶವನ್ನೊದಗಿಸಬೇಕು. ಬಾಯಿಪಾಠ ಮಾಡಿ ಒಂದು ಸರಿಯುತ್ತರವನ್ನು ನೀಡವುದಕ್ಕೆ ಬದಲಾಗಿ ಸ್ವಂತ ಅನುಭವಗಳಿಂದ ಸ್ವಂತ ಮಾತುಗಳ ಮೂಲಕ ಉತ್ತರ ಹೇಳಲು ಪ್ರೋತ್ಸಾಹಿಸಬೇಕು. ಇವುಗಳೆಲ್ಲಾ ತಮ್ಮ ತಿಳುವಳಿಕೆಯನ್ನು ವಿಕಾಸಗೊಳಿಸಲು ಮಕ್ಕಳಿಗೆ ಸಹಾಯ ಮಾಡುವ ಸರಳವಾದ ಆದರೆ ಅಷ್ಟೇ ಪ್ರಧಾನವಾದ ಹೆಜ್ಜೆಗಳಾಗಿವೆ. ಬುದ್ಧಿಪೂರ್ವಕವಾಗಿ ಊಹಿಸುವುದು ಅರ್ಥವತ್ತಾದ ಒಂದು ಬೋಧನಾ ಉಪಾಧಿಯಾಗಿದೆ. ಅದನ್ನು ಪ್ರೋತ್ಸಾಹಿಸಬೇಕು. ಹಲವು ಸಂದರ್ಭಗಳಲ್ಲಿ ತಮ್ಮ ದೈನಂದಿನ ಅನುಭವಗಳಿಂದಲೋ, ಮಾಧ್ಯಮ ಸಂಪರ್ಕದಿಂದಲೋ ಮಕ್ಕಳ ಮನಸ್ಸಿನಲ್ಲಿ ಕೆಲವು ಆಶಯಗಳು ರೂಪುಗೊಂಡಿರಬಹುದು. ಆದರೆ, ಅಧ್ಯಾಪಿಕೆಯು ನಿರೀಕ್ಷಿಸುವ ರೀತಿಯಲ್ಲಿ ಅದನ್ನು ಪ್ರಕಟಪಡಿಸಲು ಅವರಿಗೆ ಸಾಧ್ಯವಾಗದೇ ಇರಬಹುದು. ತಿಳಿದುಕೊಂಡ ಮತ್ತು ಕಷ್ಟಪಟ್ಟು ತಿಳಿದುಕೊಳ್ಳುವುದರ ಎಡೆಯಲ್ಲಿರುವ ಜಾಗದಲ್ಲಿ ನೂತನವಾದ ತಿಳುವಳಿಕೆಗಳು ಸೃಷ್ಟಿಸಲ್ಪಡುತ್ತವೆ. ಶಾಲೆಯ ಹೊರಗೆ ಮನೆಯಲ್ಲಿಯೋ, ಸಮಾಜದಲ್ಲಿಯೋ ಬೆಳೆಸಿಕೊಂಡು ಬರುವ ಕೈ ಚಳಕಗಳ ರೂಪದಲ್ಲಿ ಹಲವು ಸಂದರ್ಭದಲ್ಲಿ ತಿಳುವಳಿಕೆಗಳು ಗೌರವಿಸಲ್ಪಡಬೇಕು. ತಿಳುವಳಿಕೆ ಮತ್ತು ಸಂವೇದನಾಶೀಲತೆಯಿರುವ ಅಧ್ಯಾಪಿಕೆಯು ಇದರ ಕುರಿತಾಗಿ ತಿಳಿದುಕೊಂಡಿರುತ್ತಾರೆ. ಮಕ್ಕಳ ವಿಕಾಸ ಸಾಧ್ಯತೆಗಳನ್ನು ಸಾಕ್ಷಾತ್ಕರಿಸಲು ಸಹಾಯಕವಾಗುವ ರೀತಿಯಲ್ಲಿ ಚಟುವಟಿಕೆಗಳನ್ನು ನೀಡಿಯೂ, ಪ್ರಶ್ನೆಗಳನ್ನು ಕೇಳಿಯೂ ಅವರನ್ನು ಮುಂದುವರಿಸಿಕೊಂಡು ಹೋಗಲು ಅಧ್ಯಾಪಿಕೆಗೆ ಸಾಧ್ಯವಿದೆ.

ಅನ್ವೇಷಣೆ, ಪರ್ಯಾವೇಷಣೆ, ಪ್ರಶ್ನೆ ಕೇಳುವುದು, ಡಿಬೇಟುಗಳು, ಸಿದ್ಧಾಂತ ರೂಪೀಕರಣಕ್ಕೂ, ಆಶಯಗಳ ಹಾಗೂ ನಿಯಮಗಳ ಸೃಷ್ಟಿಗೂ ಕೊಂಡೊಯ್ಯುವ ಪ್ರಯೋಗವೂ, ಚಿಂತನೆಯೂ ಇವುಗಳೆಲ್ಲಾ ಸಜೀವವಾದ ಮಧ್ಯವರ್ತನೆಯ ಭಾಗವಾಗಿದೆ. ಶಾಲೆಗಳು ಪ್ರಶ್ನೆಗಳನ್ನು ಕೇಳಲೂ, ಅನ್ವೇಷಣೆ ಮಾಡಲೂ, ತರ್ಕಿಸಲೂ, ಕಲಿಕಾ ಸಂಕಲ್ಪಗಳೆಡೆಗೆ ತಲುಪಲೂ, ನೂತನವಾದ ಆಶಯಗಳನ್ನು ರೂಪಿಸಲೂ ಸಹಾಯಮಾಡುತ್ತವೆ.

(ಎನ್.ಸಿ.ಎಫ್. 2005 41, 42)

## ಆಡುಭಾಷೆಯ ಪ್ರತ್ಯೇಕತೆಗಳು

ಆಡುಭಾಷೆಗೆ ಒಂದು ಪ್ರತ್ಯೇಕ ಸಂದರ್ಭವಿದೆ. ಅದರಲ್ಲಿ ಭಾಗವಹಿಸುವವರೊಳಗಿರುವ ಸಂಬಂಧವು ಭಾಷೆಯ ಮೇಲೆ ಪ್ರಭಾವ ಬೀರುತ್ತದೆ. ಆದರೆ ಈ ಎರಡು ಘಟಕಗಳು ಲಿಖಿತ ಭಾಷೆಯ ಮೇಲೆ ಪ್ರಭಾವ ಬೀರುವುದಿಲ್ಲ. ಆಡುಭಾಷೆಯಲ್ಲಿ ವಾಕ್ಯಗಳನ್ನೂ, ಪದಗಳನ್ನೂ ಸಣ್ಣದು ಮಾಡುವುದೂ ಕೇಳಿಸಿಕೊಳ್ಳುವವನ ಆಸಕ್ತಿ, ಪೂರ್ವಜ್ಞಾನ ಎಂಬಿವುಗಳನ್ನು ಪರಿಗಣಿಸಿ ಕೆಲವು ವಿಚಾರಗಳನ್ನು ಮಾತಿನ ಮೂಲಕ ಪ್ರಕಟಿಸದೆ ಬಿಡುವುದೂ ಇದೆ. ಗೆಳೆಯರೊಂದಿಗೂ ಮನೆಯವರೊಂದಿಗೂ ಮಾತನಾಡುವಾಗ ಉಪಯೋಗಿಸುವ ಪದಗಳನ್ನೋ, ವಾಕ್ಯ ರಚನೆಗಳನ್ನೋ ಔಪಚಾರಿಕ ಸಂಭಾಷಣೆಯಲ್ಲಿ ಉಪಯೋಗಿಸುವುದಿಲ್ಲ. ಔಪಚಾರಿಕೆ ಮಾತುಗಾರಿಕೆಯ ರೀತಿಗಳನ್ನು ಕ್ರಮೇಣ ಗಳಿಸಿಕೊಳ್ಳುವುದು ಎಂಬುದು ಮಾತುಗಾರಿಕೆಯ ತರಬೇತಿಯ ಒಂದು ಮುಖ್ಯ ಗುರಿಯಾಗಿದೆ. ಆಡು ಭಾಷೆಯ ವ್ಯಾಕರಣಬದ್ಧವಾದ ಕೆಲವು ಪ್ರತ್ಯೇಕತೆಗಳನ್ನು ಪ್ರಕಟಪಡಿಸುತ್ತದೆ. ಹಲವು ಉಪವಾಕ್ಯಗಳು ಒಂದು ಸಂಕೀರ್ಣವಾಕ್ಯದಲ್ಲಿ ಒಳಗೊಂಡಿರುವುದು, ಹಲವು ವಾಕ್ಯಗಳನ್ನು ಶ್ರೇಣಿಯಾಗಿ ಸೇರಿಸಿರುವುದು, ವಾಕ್ಯಗಳೆಡೆಯಲ್ಲಿ

ಸಂಬಂಧ ಪದಗಳನ್ನು ಉಪಯೋಗಿಸುವುದು ಒಂದು ವಿಚಾರವನ್ನು ಹೇಳಲು ಪ್ರಾರಂಭಿಸಿ ಪರಿಪೂರ್ಣಗೊಳಿಸದೆ ಇನ್ನೊಂದರೆಡೆಗೆ ಹೋಗುವುದು ಮೊದಲಾದವುಗಳೆಲ್ಲಾ ಆಡುಭಾಷೆಯಲ್ಲಿ ಪ್ರಕಟವಾಗಿಯೇ ಇದೆ. ಆಡುಭಾಷೆಯನ್ನು ಲಿಖಿತಭಾಷೆಗಿಂತ ವ್ಯತ್ಯಸ್ಥಗೊಳಿಸುವ ಇನ್ನೊಂದು ಘಟಕವು ಭಾಷಾ ಭೇದಗಳಾಗಿವೆ. ಭಾಷೇತರ ವಿಶೇಷತೆಗಳು, ಚಿಹ್ನೆಗಳು, ಮುಖದಲ್ಲಿ ಪ್ರಕಟಿಸುವ ಭಾವನೆಗಳು, ರಾಗ, ಒತ್ತು, ತಾಳ ಮೊದಲಾದವುಗಳೂ ಆಡುಭಾಷೆಗೆ ಪ್ರತ್ಯೇಕ ಅಸ್ತಿತ್ವವನ್ನು ನೀಡುತ್ತವೆ.

**ಮಕ್ಕಳನ್ನು ಉತ್ತಮ ಮಾತುಗಾರಿಕೆಯೆಡೆಗೆ ಕೊಂಡೊಯ್ಯಲು**

- ಮಕ್ಕಳೊಡನೆ ಧಾರಾಳವಾಗಿ ಮಾತನಾಡಿರಿ.
- ಮಕ್ಕಳಿಗೆ ಮಾತನಾಡಲು ಧಾರಾಳ ಅವಕಾಶವನ್ನೊದಗಿಸಿರಿ.
- ಮನೆಯ ಹಿರಿಯರೊಂದಿಗೆ ಆಶಯ ವಿನಿಮಯದಲ್ಲಿ ಮಗುವು ಭಾಗವಹಿಸುವಂತೆ ಮಾಡಿರಿ.
- ಕಥೆಗಳನ್ನು ಕೇಳಿಸಿರಿ, ಕೇಳಿದ ಕಥೆಗಳನ್ನು ಪದ್ಯಗಳನ್ನು ಹೇಳಲೂ, ಹಾಡಲೂ ಹೇಳಿರಿ.

**ಚಟುವಟಿಕೆಗಳು**

? ವಿದ್ಯಾಲಯದ ಮಕ್ಕಳ ಆಕಾಶವಾಣಿ ಚಟುವಟಿಕೆಗಳು ಮಾತುಗಾರಿಕೆಯ ಕೌಶಲವನ್ನು ಬೆಳೆಸಲು ಸಾಧ್ಯವೇ? ಹೇಗೆ?

? ಡಿ.ಎಲ್.ಎಡ್ 'ಮಕ್ಕಳ ಆಕಾಶವಾಣಿ' – ನಿಲಯಕ್ಕಿರುವ ಕಾರ್ಯಕ್ರಮಗಳನ್ನು ತಯಾರಿಸಿ ಪ್ರಸ್ತುತಪಡಿಸಿ ಧ್ವನಿಮುದ್ರಣ ಮಾಡಿರಿ.

? ಪ್ರಾಥಮಿಕ ಹಂತದ ಪಠ್ಯಕ್ರಮ, ಅಧ್ಯಾಪಕ ಕೈಪಿಡಿ, ಪಠ್ಯಪುಸ್ತಕದ ಕಲಿಕಾ ಚಟುವಟಿಕೆಗಳು ಎಂಬಿವುಗಳನ್ನು ಪರಿಶೋಧಿಸಿ, ಭಾಷಾ ಬೋಧನೆಯಲ್ಲಿ ಮಾತುಗಾರಿಕೆಯ ತರಬೇತಿಗೆ ಎಷ್ಟರ ಮಟ್ಟಿಗೆ ಪ್ರಾಧಾನ್ಯ ನೀಡಲಾಗಿದೆಯೆಂದು ವಿಶ್ಲೇಷಿಸಿರಿ. (ಸಂಭಾಷಣೆಗಳ ಸಂಗ್ರಹ, ಮಂಡನೆ, ಪ್ರತ್ಯೇಕತೆಗಳನ್ನು ಕಂಡುಕೊಳ್ಳುವುದು)

? ಒಂದರಿಂದ ಏಳನೆಯ ತರಗತಿಯ ವರೆಗಿನ ಭಾಷಾ ಪಠ್ಯಪುಸ್ತಕಗಳನ್ನು, ಅಧ್ಯಾಪಕ ಕೈಪಿಡಿಗಳನ್ನೂ ಪರಿಶೋಧಿಸಿ ಮಾತುಗಾರಿಕೆಯ ಸಾಧ್ಯತೆಗಳಿಗಿರುವ ಚಟುವಟಿಕೆಗಳನ್ನು ಪಟ್ಟಿ ಮಾಡಿರಿ.

? ನಿಜವಾದ ಸಂದರ್ಭಗಳಲ್ಲಿ ಪ್ರಯೋಗಿಸುವುದರ ಮೂಲಕ ಅನೌಪಚಾರಿಕ ಭಾಷೆಯು ವಿಕಾಸಗೊಳ್ಳುವುದಾದರೆ, ಅನೌಪಚಾರಿಕ ಭಾಷಾ ವಿಕಾಸಕ್ಕೆ ತರಗತಿಯಲ್ಲಿ ನಡೆಸಬಹುದಾದ ಚಟುವಟಿಕೆಗಳ ಕುರಿತಾದ ಚರ್ಚೆಯನ್ನು ಆಯೋಜಿಸಿರಿ.

**ವಾಚನ**

- ವಾಚನ ಎಂದರೇನು?

ಅಕ್ಷರಗಳನ್ನು ಸೇರಿಸಿ ಹೇಳುವುದೋ? ಓದುವಾಗ ಯಥಾರ್ಥವಾಗಿ ಏನು ಸಂಭವಿಸಬೇಕಾದುದು? ಪ್ರತೀಕಗಳನ್ನು (ಚಿಹ್ನೆಗಳ ರೂಪದಲ್ಲಿರುವ ದಾಖಲಿಸುವಿಕೆ), ವಾಖ್ಯಾನಿಸುವುದು (ಡೀಕೋಡ್ ಮಾಡುವುದು) ವಾಚನದ ಮೂಲಕ ನಡೆಯುವ ಪ್ರಕ್ರಿಯೆಯಾಗಿದೆ. ಮುದ್ರಿಸಿಯೋ, ಬರೆದೋ ಇರುವ ದಾಖಲಿಸುವಿಕೆಗಳು ಅದನ್ನು ಗುರುತಿಸಿ ತಿಳಿಯಲು ಸಾಧ್ಯವಾಗದವರಿಗೆ ಸಂಬಂಧಿಸಿದಂತೆ ಕೇವಲ ಚಿತ್ರರೂಪಗಳಾಗಿವೆ. ಮುದ್ರಣದಲ್ಲಿಯೋ, ಬರವಣಿಗೆಯಲ್ಲಿಯೋ ಅಡಗಿರುವ ಆಶಯವನ್ನು ಗ್ರಹಿಸುವುದೇ ವಾಚನದ ಗುರಿಯಾಗಿದೆ. ಮಗು ಓದುವುದು ಅದರ ಆಶಯವನ್ನಾಗಿದೆ. ಕೇವಲ ಅಕ್ಷರಗಳನ್ನೋ, ಪದಗಳನ್ನೋ ಅಲ್ಲ. ವಾಚನವು ಹೆಚ್ಚಿನ ಸಂದರ್ಭಗಳಲ್ಲಿ ಊಹೆಯಾಗಿದೆ. ಪದಗಳಲ್ಲಿಯೋ, ವಾಕ್ಯಗಳಲ್ಲೋ ಅಡಗಿರುವ ಆಶಯವು ಇಂತಹದ್ದಾಗಿರಬಹುದೆಂದು ಊಹಿಸಿಕೊಂಡು ಮಗು ಓದುತ್ತದೆ. ಇದು ಫಲಪ್ರದವಾಗಿ ನಡೆಯಬೇಕಿದ್ದರೆ ಆಶಯವನ್ನು ಪ್ರತ್ಯೇಕಿಸಿ ತೆಗೆಯುವ (decoding)ಚಟುವಟಿಕೆಯಲ್ಲಿ ಮಕ್ಕಳಿಗೆ ಧಾರಾಳ ಅನುಭವಗಳು ಲಭಿಸಬೇಕು.

ಶ್ರವಣ, ಮಾತುಗಾರಿಕೆ, ವಾಚನ, ಲೇಖನ ಎಂಬುದು ಭಾಷಾಭ್ಯಾಸದ ಅನುಪಾತಕ್ರಮವಾಗಿದೆ. ಕೇಳಿ ಅರ್ಥೈಸಿಕೊಳ್ಳುವುದು, ಹೇಳಿ ಪ್ರಕಟಿಸುವುದು ಎಂಬಿವುಗಳು ಸ್ವಾಭಾವಿಕ ಚಟುವಟಿಕೆಗಳಾಗಿವೆ. ಒಬ್ಬ ಮನುಷ್ಯನಿಗೆ ಅದನ್ನು ಸಾಧಿಸಲು ಪ್ರತ್ಯೇಕ ತರಬೇತಿಗಳು ಅಗತ್ಯವಿಲ್ಲ ಆದರೆ ಒಂದು ಭಾಷಾ ಸಮೂಹದಲ್ಲಿ ವ್ಯಾಪಕವಾಗಿ ಅಂಗೀಕರಿಸಲ್ಪಟ್ಟದ್ದೂ, ಕೃತಕವಾಗಿ ನಿರ್ಮಿಸಿದ ಅಕ್ಷರಗಳೆಂಬ ಚಿತ್ರೀಕರಣದ ತರಬೇತಿಯೂ (ಬರವಣಿಗೆ), ಅದರ ಪ್ರತ್ಯೇಕತೆಗಳನ್ನು ತಿಳಿದುಕೊಂಡು ಆಶಯವನ್ನು ಗುರುತಿಸಿ

ತಿಳಿದುಕೊಳ್ಳುವ ವಾಚನ ಎಂಬ ಪ್ರಕ್ರಿಯೆಯನ್ನು ತರಬೇತಿಯ ಮೂಲಕ ಮಾತ್ರವೇ ಒಬ್ಬರಿಗೆ ಸ್ವಾಯತ್ತಗೊಳಿಸಲು ಸಾಧ್ಯವಿದೆ. ಪ್ರತಿ ಅಕ್ಷರವನ್ನು, ಚಿಹ್ನೆ ವ್ಯವಸ್ಥೆಯನ್ನು ಚಿರಪರಿಚಯದಿಂದ ಮಾತ್ರವೇ ತಿಳಿದುಕೊಳ್ಳಲು ಸಾಧ್ಯವಿದೆ. ಹಾಗಿರುವಾಗ ಅದಕ್ಕೆ ಒಂದು ರೀತಿ ಇರಬಹುದಲ್ಲವೇ. ಮುಖಾಮುಖಿ ಭೇಟಿಯಾದಾಗ ಆಶಯಗಳನ್ನು ಪರಸ್ಪರ ಹಂಚಿಕೊಂಡಿದ್ದ ಮಾನವನು, ಪರಸ್ಪರ ಕಾಣದ ಸಂದರ್ಭಗಳಲ್ಲಿಯೂ ಆಶಯಗಳನ್ನೂ ಹಸ್ತಾಂತರಿಸಬೇಕಾದ ಅಗತ್ಯ ಕಂಡುಬಂದಾಗ ಹೊಸ ತಾಂತ್ರಿಕತೆಯನ್ನು ಅಭಿವೃದ್ಧಿಪಡಿಸಿರಬಹುದು. ನಿಜವಾಗಿ ಭಾಷೆ ಎಂಬುದು ಆಶಯವನ್ನು ನೀಡುವ ಮತ್ತು ಆಶಯವನ್ನು ಸ್ವೀಕರಿಸುವ ವ್ಯಕ್ತಿಗಳೊಳಗಿರುವ ಒಂದು ಸಾಮಾನ್ಯ ಒಪ್ಪಂದವಾಗಿದೆ. ಬರವಣಿಗೆಗೆ ಇದು ಬಾಧಕವಾಗಿದೆ. ದಾಖಲಿಸುವಿಕೆಯ ಅರ್ಥವು ಹೇಗಾಗಿರಬಹುದೆಂದು ಒಂದು ಭಾಷಾ ಸಮೂಹವು ಮಾಡಿದ ಒಪ್ಪಂದವೇ ಲಿಪಿ.

ಕಾಣುವ ಹಾಗೂ ಕಾಣದೇ ಇರುವ ಅನುಭವಗಳ ಸಂಯೋಜನೆಯೇ ವಾಚನವಾಗಿದೆ. ವಾಚನವು ಒಂದೇ ಸಂದರ್ಭದಲ್ಲಿ ಇರುವ ಕ್ರಿಯಾತ್ಮಕ ನೈಪುಣ್ಯವೂ, ಸ್ವೀಕರಣ ನೈಪುಣ್ಯವೂ ಆಗಿದೆ. ವಾಚಿಸುವಾಗ ನೂತನ ಆಶಯಗಳನ್ನು ನಾವು ಸ್ವೀಕರಿಸುತ್ತೇವೆ. ವಾಚನ ಎಂಬುದು ಒಂದು ಏಕ ನೈಪುಣ್ಯವಲ್ಲ. ಅನೇಕ ಉಪ ನೈಪುಣ್ಯಗಳು ಒಟ್ಟುಸೇರುವಾಗ ವಾಚನ ಎಂಬ ನೈಪುಣ್ಯವು ಪೂರ್ಣವಾಗುತ್ತದೆ. ಭಾಷಾಪರವಾದ ಸಾಮರ್ಥ್ಯಗಳ ಪ್ರಾಯೋಗಿಕ ಭಾಗಗಳಲ್ಲಿ ವಾಚನಕ್ಕೆ ಪ್ರಮುಖ ಸ್ಥಾನವಿದೆ.

## ವಾಚನದ ಮನಃಶಾಸ್ತ್ರಪರವಾದ ಪ್ರತ್ಯೇಕತೆಗಳು

ವಾಚನ ಎಂಬ ಪ್ರಕ್ರಿಯೆಗೆ ನಾಲ್ಕು ಘಟ್ಟಗಳಿವೆ. ಒಂದನೆಯ ಘಟ್ಟವು ಪದಗಳ ಲಿಖಿತ ರೂಪವನ್ನು ಅರ್ಥೈಸಿಕೊಳ್ಳುವುದಾಗಿದೆ. ಎರಡನೆಯದಾಗಿ ಅರ್ಥೈಸಿಕೊಂಡ ಲಿಖಿತ ರೂಪಗಳನ್ನು ಶಬ್ದಗಳಾಗಿ ಬದಲಾಯಿಸಿಕೊಳ್ಳುವುದಾಗಿದೆ. ಪ್ರತಿಶಬ್ದವೂ ಸೂಚಿಸುವ ಆಶಯಗಳು, ಪ್ರತ್ಯೇಕವಾಗಿ ಮನಸ್ಸಿಗೆ ದಾಟಿದ ಆಶಯಗಳನ್ನು ಯಾವುದಾದರೂ ಆಧಾರದಲ್ಲಿ ಏಕೀಕರಿಸುವುದು ಮೂರನೆಯ ಘಟ್ಟವಾಗಿದೆ. ಕೊನೆಯ ಘಟ್ಟದಲ್ಲಿ ಓದಿದ ವಾಕ್ಯದ ಸ್ಪಷ್ಟವಾದ ಆಶಯ ಜ್ಞಾನವು ಉಂಟಾಗುವುದು. ವಾಚನವು ಮಾನಸಿಕ ಚಟುವಟಿಕೆಯಾದರೂ ಇದು ಒಂದು ಶಾರೀರಿಕ ಚಟುವಟಿಕೆಯೂ ಆಗಿದೆ. ವಾಚನಕ್ಕೆ ಸಹಾಯ ಮಾಡುವ ಪ್ರಧಾನ ಘಟಕವು ಕಣ್ಣುಗಳಾಗಿವೆ. ಸೂಕ್ಷ್ಮವಾದ ನಿರೀಕ್ಷಣೆಗಳ ಮೂಲಕವೂ ಓದಲು ಸಾಧ್ಯವಿದೆ. ಒಂದು ಪದದಿಂದ ಇನ್ನೊಂದು ಪದದೆಡೆಗೆ ಕಣ್ಣುಗಳು ಅತಿವೇಗವಾಗಿ ಸಾಗುತ್ತವೆ. ಒಂದು ಸೆಕೆಂಡಿನ ಹತ್ತನೇ ಒಂದು ಭಾಗ ಸಮಯವನ್ನು ಮಾತ್ರವೇ ಒಂದು ಪದವನ್ನು ಗುರುತಿಸಲು ನಾವು ಉಪಯೋಗಿಸುತ್ತೇವೆ. ಕಣ್ಣುಗಳು ಒಂದು ಸಲ ದಾಟುವ ದೈರ್ಘ್ಯವನ್ನು ನಯನ ವಿಸ್ತೃತಿ (Eyesfar)) ಎನ್ನುತ್ತೇವೆ. ಒಂದು ಪದದಿಂದ ಇನ್ನೊಂದು ಪದದೆಡೆಗೆ ಸಾಗುವುದರೆಡೆಯಲ್ಲಿ ಕಣ್ಣುಗಳು ಆ ಪದಗಳನ್ನು ಗುರುತಿಸುವುದಕ್ಕಾಗಿ ಸ್ವಲ್ಪ ಸಮಯ ನಿಲ್ಲುತ್ತದೆ. ಇದನ್ನು ನಯನ ಕೇಂದ್ರೀಕರಣ (Eye fraction) ಎಂದೂ, ಕೆಲವು ಪದಗಳು ಬಿಟ್ಟು ಹೋದಾಗ ಅಥವಾ ಅರ್ಥವಾಗದೇ ಇದ್ದಾಗ ಮೊದಲು ನೋಡಿದ ಭಾಗಗಳ ಮೂಲಕ ಇನ್ನೊಮ್ಮೆ ಹಾದು ಹೋಗುವುದನ್ನು ಅಧೋಗಮನ (Regression) ಎಂದು ಕರೆಯಲಾಗುತ್ತದೆ. ನಯನ ವಿಸ್ತೃತಿಯನ್ನು ಹೆಚ್ಚು ಮಾಡಿ ನಯನ ಕೇಂದ್ರೀಕರಣ ಮತ್ತು ಅಧೋಗಮನವನ್ನು ಕಡಿಮೆ ಮಾಡಿದರೆ ಓದಿನಲ್ಲಿ ವೇಗ ಸಿಗುತ್ತದೆ.

## ವಾಚನದ ಉದ್ದೇಶಗಳು

- ಆಶಯಗ್ರಹಣ
- ಜ್ಞಾನ ಸಂಪಾದನೆ
- ಚಿಂತನೆಯ ವಿಕಾಸ
- ಸಾಂಸ್ಕೃತಿಕ ಪ್ರಗತಿ
- ಸಾಹಿತ್ಯಾಸ್ವಾದನೆ
- ಭಾಷಾ ಬೆಳವಣಿಗೆ

ತನ್ನ ಪರಿಸರವನ್ನು ಸೂಕ್ಷ್ಮವಾಗಿಯೂ ಸಮಗ್ರವಾಗಿಯೂ ವೀಕ್ಷಿಸಲೂ ಸಾಮಾಜಿಕ ಪ್ರಜ್ಞೆಯ ಆಧಾರದಲ್ಲಿ ಕಾರ್ಯ ನಿರ್ವಹಿಸಲು ತಳಪಾಯವನ್ನೊದಗಿಸುವ ಸಾಂಸ್ಕೃತಿಕ ಉಪಾಧಿಯನ್ನು ವಾಚನ ಎನ್ನಬಹುದು. ಇದು ಜ್ಞಾನ ಸ್ಫೋಟನೆಯ ಕಾಲಘಟ್ಟವಾಗಿದೆ. ವಾಚನವು ಒಂದು ರಾಷ್ಟ್ರದ ಪ್ರತಿರೋಧ ಮತ್ತು ನೆಲೆನಿಲ್ಲುವಿಕೆಯ ಪ್ರಬಲವಾದ ಆಯುಧವಾಗಿದೆ. ಅಕ್ಷರ ಜ್ವಾಲೆಯಲ್ಲಿ ವಾಚನದ ಸಂಸ್ಕಾರವನ್ನು ಕಾಯಿಸಿ ತೆಗೆದರೆ ಮಾತ್ರವೇ ಸೂರ್ಯ ತೇಜಸ್ಸು ಮತ್ತು ಸಾಮರ್ಥ್ಯವಿರುವ ಒಂದು ತಲೆಮಾರು ವಿದ್ಯಾಲಯಗಳಿಂದ ರೂಪುಗೊಳ್ಳಲು ಸಾಧ್ಯವಿದೆ. ವಾಚನಕ್ಕೆ ಬದಲಾಗಿ ವಾಚನವಲ್ಲದ ಇತರ ಚಟುವಟಿಕೆಗಳಿಲ್ಲ.

## ವಾಚನ ಅಭ್ಯಾಸ – ವಿಭಿನ್ನ ರೀತಿಗಳೂ ಸಮೀಪನಗಳೂ

ಸರಳ ಘಟಕಗಳಿಂದ ಸಮಗ್ರ ಘಟಕಗಳೆಡೆಗೆ (Bottom to top approach), ಸಮಗ್ರ ಘಟಕಗಳಿಂದ ಸರಳ ಘಟಕಗಳೆಡೆಗೆ (Top-to-bottom approach), ಅಕ್ಷರ–ಪದ–ವಾಕ್ಯ ಎಂಬ ರೀತಿಯಲ್ಲಿರುವ ವಾಚನದ ತರಬೇತಿಯು ಮೊದಲ ಸಮೀಪನದಲ್ಲಿಯೂ, ವಾಕ್ಯ ಪದ–ಅಕ್ಷರ ಎಂಬ ಕ್ರಮವು ಎರಡನೆಯ ರೀತಿಗೂ ಉದಾಹರಣೆಯಾಗಿದೆ. ಆಶಯ ಮಂಡನೆಯ ರೀತಿಯೂ ಇದೇ ತತ್ವವನ್ನು ಅನುಸರಿಸುತ್ತದೆ. ಭಾಷೆಯ ಲೇಖನ ವ್ಯವಸ್ಥೆಗಳ ಮತ್ತು ಅಕ್ಷರ ಕಲ್ಪನೆಗಳ ರೀತಿ ಮತ್ತು ಯುಕ್ತಿಯನ್ನು ಸ್ಪಷ್ಟವಾಗಿ ತಿಳಿದುಕೊಂಡು ಮುಂದಕ್ಕೆ ಹೋಗಬಹುದೆಂಬುದು ಮೊದಲ ಸಮೀಪನದ ಗುಣವಾಗಿದೆ. ಅದೇ ಸಂದರ್ಭದಲ್ಲಿ ಅರ್ಥದಿಂದ ಪ್ರತ್ಯೇಕವಾಗಿ ನಿಲ್ಲುವ ಒಂದು ತಲವು ಇದಕ್ಕಿದೆಯೆಂಬುದೂ ತೀರಾ ಯಾಂತ್ರಿಕವಾಗುವುದಕ್ಕಿರುವ ಸಾಧ್ಯತೆಯೂ ಇದಕ್ಕಿದೆಯೆಂಬುದೂ ಈ ಸಮೀಪನದ ಕೊರತೆಯಾಗಿದೆ. ಅರ್ಥಪೂರ್ಣವಾದ ಘಟಕಗಳಿಂದ ಪ್ರಾರಂಭಿಸಲು ಸಾಧ್ಯವಾಗುತ್ತದೆ ಎಂಬುದೂ ಎರಡನೇ ಸಮೀಪನದ ಹಿರಿಮೆಯಾಗಿದೆ.

ಆದರೆ ಈ ರೀತಿಯಲ್ಲಿ ವಾಚನದ ತರಬೇತಿಯನ್ನು ನೀಡಲು ಅತ್ಯಂತ ಸೂಕ್ಷ್ಮ ಮಟ್ಟದಲ್ಲಿ ಯೋಜನೆ ಮಾಡಿ ತಯಾರಿಸಿದ ವಾಚನಾ ಸಾಮಗ್ರಿಗಳು ಬೇಕು. ಅವುಗಳು ಇಲ್ಲದೇ ಇದ್ದರೆ ಬೋಧನೆಯು ಉದ್ದೇಶಿಸುವ ರೀತಿಯಲ್ಲಿ ಮುಂದಕ್ಕೆ ಹೋಗಲು ಸಾಧ್ಯವಾಗದೇ ಇರಬಹುದು. ಆದುದರಿಂದ ಈ ಸಮೀಪನವನ್ನು ಅನುಸರಿಸುವಾಗ ಬೇಕಾದಷ್ಟು ಪ್ರಗತಿ ಆಗದೇ ಇರುವ ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಅಕ್ಷರತಲದ ಬೋಧನೆಯನ್ನು ನೀಡುವ ಸಮೀಪನವನ್ನು ಈ ಕ್ಷೇತ್ರದ ವಿದ್ವಾಂಸರು ನಿರ್ದೇಶಿಸುತ್ತಾರೆ.

ಅಕ್ಷರಮಾಲಾ ಕ್ರಮದ ಮಂಡನೆ – ಇದು ಸರಳ ಘಟಕಗಳಿಂದ ಸಮಗ್ರ ಘಟಕಗಳೆಡೆಗೆ ಹೋಗುವ ರೀತಿಯಾಗಿದೆ. ಅಕ್ಷರ ಮಾಲೆಯನ್ನು ಕಲಿಸುವ ನಮ್ಮ ಪರಂಪರಾಗತ ರೀತಿ, ಸ್ವರಗಳು, ವ್ಯಂಜನಗಳು ಎಂಬಿವುಗಳನ್ನು ಪ್ರತ್ಯೇಕವಾಗಿಯೂ, ವ್ಯಂಜನಗಳೊಳಗೆ ಶಬ್ದಪರವಾಗಿ ಸಮಾನವಾದವುಗಳನ್ನು ಒಟ್ಟಾಗಿಯೂ ಅರ್ಥೈಸಿಕೊಳ್ಳಲು ಇದು ಸಹಾಯಕವಾಗಿದೆ. ಪ್ರಾಥಮಿಕ ಹಂತದಲ್ಲಿ ಈ ತಿಳುವಳಿಕೆಯು ಪ್ರಸಕ್ತವಲ್ಲದೇ ಇದ್ದರೂ ಧ್ವನಿಪರವಾದ ಗುಣಗಳನ್ನು ಆಧರಿಸಿ ಅಕ್ಷರಮಾಲೆಗಳನ್ನು ಕ್ರಮೀಕರಿಸಿರುವುದರಿಂದ ಉಚ್ಚಾರವನ್ನು ವಿಶದೀಕರಿಸಲು ಸಹಾಯಕವಾಗುತ್ತದೆ. ಅಕ್ಷರ ಮತ್ತು ಶಬ್ದಗಳೊಳಗಿನ ಸಂಬಂಧವನ್ನು ಬಲಪಡಿಸಲೂ ಇದು ಸಹಾಯಕವಾಗುತ್ತದೆ. ಅದೇ ಸಮಯದಲ್ಲಿ ಅತಿ ಹೆಚ್ಚು ಯಾಂತ್ರಿಕವೂ, ಆಸಕ್ತಿ ಹೀನವೂ ಆಗಲು ಸಾಧ್ಯವಿದೆ) ಅಕ್ಷರ ಮಾಲೆಯಲ್ಲಿಯೇ ಸರಳವಾದುದರಿಂದ ಸಂಕೀರ್ಣವಾದುದರೆಡೆಗೆ ಎಂಬ ರೀತಿಯಲ್ಲಿ ಅಕ್ಷರಗಳನ್ನು ಪ್ರಸ್ತುತಪಡಿಸುವುದು ಎಂಬುದು ಇನ್ನೊಂದು ರೀತಿಯಾಗಿದೆ. ಉದಾ: ವ,ಪ,ನ,ಸ ಎಂಬ ರೀತಿ.

## ಆಶಯ ಮಂಡನೆಯ ವಿಧಾನ

ಮನಃಶಾಸ್ತ್ರಪರವಾಗಿ ವಾಚನದ ಅಭ್ಯಾಸಕ್ಕೆ ಆಶಯ ಮಂಡನೆಯ ರೀತಿಯು ಸೂಕ್ತವಾಗಿದೆ. ಆಶಯ ಮಂಡನೆಯ ರೀತಿಯಲ್ಲಿ ಮಕ್ಕಳು ಮೊದಲು ವಿಚಾರಗಳನ್ನು ಸಂಪೂರ್ಣವಾಗಿಯೋ ವಿಪುಲವಾದ ರೀತಿಯಲ್ಲಿಯೋ ಸ್ವೀಕರಿಸುತ್ತಾರೆ. ಅದರ ನಂತರ ಸೂಕ್ಷ್ಮವಾದ ಅಂಶಗಳೆಡೆಗೆ ಸಾಗುತ್ತಾರೆ. ಕಲಿಕಾರ್ಥಿಯು ಸ್ಥೂಲತೆಯೆಡೆಯಿಂದ ಸೂಕ್ಷ್ಮತೆಯೆಡೆಗೆ ಸಾಗುತ್ತಾನೆ. ಒಂದು ವಸ್ತುವನ್ನು ಸಮಗ್ರವಾಗಿ ಕಾಣಲೂ, ಅರ್ಥೈಸಿಕೊಳ್ಳಲೂ ಇರುವ ವ್ಯಕ್ತಿಯ ಸಾಮರ್ಥ್ಯವು ಈ ರೀತಿಯಲ್ಲಿ ಪರಿಗಣಿಸಲ್ಪಡುವುದು.

ವಾಕ್ಯಸಮೂಹ, ವಾಕ್ಯ, ಪದ ಎಂಬೀ ಕ್ರಮದಲ್ಲಿ ವಿಶ್ಲೇಷಿಸಿ ಅಕ್ಷರಗಳಿಗೆ ತಲುಪಲಾಗುತ್ತದೆ. ವಿಶ್ಲೇಷಣಾ ವಿಧಾನವು (Analytical Method) ಆಶಯ ಮಂಡನಾ ರೀತಿಗೆ ಅಡಿಪಾಯವಾಗಿದೆ. ಆಧುನಿಕ ಶಿಕ್ಷಣ ತಜ್ಞರಿಗೂ, ಶಿಕ್ಷಣ ಮನಃಶಾಸ್ತ್ರಜ್ಞರಿಗೂ ಈ ರೀತಿಯು ಸ್ವೀಕಾರಾರ್ಹವಾಗಿದೆ.

## ಮೌನವಾಚನ ಮತ್ತು ಶ್ರಾವ್ಯ ವಾಚನ

**ಶ್ರಾವ್ಯ ವಾಚನ :** ಅಕ್ಷರ ಸ್ಫುಟತೆಯೊಂದಿಗೆ ಅರ್ಥವನ್ನು ಗ್ರಹಿಸಿ ಓದಲು ಶ್ರಾವ್ಯ ವಾಚನ(ಗಟ್ಟಿ ಓದು)ವು ಪ್ರಯೋಜನಕಾರಿಯಾಗಿದೆ. ವಾಕ್ಯಗಳನ್ನು ಪದಗಳನ್ನೂ ಸ್ವಾಭಾವಿಕವಾಗಿ ಉಚ್ಚರಿಸುವುದು, ಸೂಕ್ತವಾದ ರಾಗ ಮತ್ತು ಒತ್ತು ಕೊಡುವುದು ಮೊದಲಾದವುಗಳನ್ನು ಅಭ್ಯಾಸ ಮಾಡಲು ಶ್ರಾವ್ಯ ವಾಚನವು ಹೆಚ್ಚು ಸಹಾಯಕವಾಗುತ್ತದೆ. ಭಾಷಣ ಕಲೆಯೆಡೆಗೆ ಮಕ್ಕಳನ್ನು ಕೊಂಡೊಯ್ಯಲೂ ಭಾವನಾತ್ಮಕವಾದ ಶ್ರಾವ್ಯ ವಾಚನವು ಸಹಾಯಕವಾಗುವುದು. ಹೆಚ್ಚು ಸಮಯ ಗಟ್ಟಿಯಾಗಿ ಓದಲು ಸಾಧ್ಯವಿಲ್ಲವೆಂಬುದು ಇದರ ಪ್ರಧಾನ ಕೊರತೆಯಾಗಿದೆ.

**ಮಾನವಾಚನ :** ಆಶಯ ಗ್ರಹಣದ ಅತ್ಯುತ್ತಮ ಉಪಾಧಿಯು ಮೌನವಾಚನವಾಗಿದೆ. ಆಶಯ ಮತ್ತು ಚಿಂತನೆಯು ಇಲ್ಲಿ ಒಟ್ಟು ಸೇರುತ್ತದೆ. ಓದಿದ ಭಾಗಗಳ ಅರ್ಥವು ನೇರವಾಗಿ ಮನಸ್ಸಿಗೆ ತಲುಪುತ್ತದೆ ಎಂಬುದು ಇದರ ಪ್ರಧಾನ ಗುಣವಾಗಿದೆ. ಮೇಲಿನ ತರಗತಿಗಳಿಗೆ ತಲುಪುವಾಗ ಮೌನ ವಾಚನದಲ್ಲಿ ಮಗುವು ಪರಿಣತನಾಗಬೇಕು. ಅದಕ್ಕೆ ಸಾಧ್ಯವಾಗುವ ರೀತಿಯಲ್ಲಿ ಕೆಳಗಿನ ತರಗತಿಗಳಲ್ಲಿ ತರಬೇತಿ ಲಭಿಸಬೇಕು.

## ಜೈವ ವಾಚನ

ಹೆಚ್ಚಿನ ಸಂದರ್ಭಗಳಲ್ಲಿ ಹಿರಿಯರ ಆಸಕ್ತಿಗನುಗುಣವಾಗಿ ವಾಚನವನ್ನು ಕಲಿಸಲಾಗುತ್ತದೆ. ಇದು ಮಗುವಿನಲ್ಲಿ ವಾಚನಕ್ಕಿರುವ ಸ್ವಾಭಾವಿಕವಾದ ಆಸಕ್ತಿಯನ್ನು ಬೆಳೆಸಬೇಕೆಂದಿಲ್ಲ. ಮಗುವಿಗೆ ಸ್ವಂತ ಅಗತ್ಯಗಳಿಗನುಗುಣವಾಗಿ ಓದುವುದಕ್ಕಿರುವ ಅವಕಾಶವನ್ನು ಒದಗಿಸಿಕೊಡಬೇಕು. ಆಗ ಓದಿನಲ್ಲಿ ಮಗುವಿಗೆ ಇರುವ ಆಸಕ್ತಿಯು ಸ್ವಾಭಾವಿಕವಾಗಿ ಬೆಳೆದು ವಿಕಾಸ ಹೊಂದುವುದನ್ನು ಕಾಣಬಹುದು. ಮುಕ್ತ ಓದಿಗೆ ಅವಕಾಶಗಳನ್ನೊದಗಿಸುವ ಜೈವ ಪಾಠಗಳನ್ನು ಇದಕ್ಕಾಗಿ ಒದಗಿಸಬೇಕು. ತಿಳಿದಿರುವುದರಿಂದ ತಿಳಿಯದಿರುವುದರೆಡೆಗೂ ಸ್ವಂತ ಸಂಸ್ಕೃತಿಯಿಂದ ಹೊಸ ಸಂಸ್ಕೃತಿಯೆಡೆಗೂ ಪ್ರಯಾಣ ಮಾಡುವುದಕ್ಕಿರುವ ಒಂದು ಸಂಕದ ರೀತಿಯಲ್ಲಿ ಜೈವ ವಾಚನವನ್ನು ಉಪಯೋಗಿಸಬಹುದು.

## ವಾಚನಾ ತರಬೇತಿ–ಪ್ರಾಯೋಗಿಕ ಚಟುವಟಿಕೆಗಳು

## ಮೂಲಭೂತ ಹಂತ

ಮಗುವಿಗೆ ಓದಿನಲ್ಲಿ ಆಸಕ್ತಿ ಹುಟ್ಟಿಸುವುದಕ್ಕಾಗಿ ವಿವಿಧ ರೀತಿಯ ಚಟುವಟಿಕೆಗಳನ್ನು ಆಯೋಜಿಸಬೇಕಾಗಿದೆ. ಮಗುವಿನ ಪ್ರಾಯ, ಮಾನಸಿಕ ಮಟ್ಟ, ಆಸಕ್ತಿಯ ಕ್ಷೇತ್ರಗಳು ಎಂಬಿವುಗಳನ್ನು ಪರಿಗಣಿಸಿಕೊಂಡು ಚಟುವಟಿಕೆಗಳನ್ನು ಸಜ್ಜುಗೊಳಿಸಬೇಕು.

### ಪೂರ್ವಪ್ರಾಥಮಿಕ ಹಂತ

ಆರು ವರ್ಷದ ವರೆಗಿನ ಮಕ್ಕಳು ಈ ಹಂತದಲ್ಲಿ ಬರುತ್ತಾರೆ. ನೇರವಾದ ಅಕ್ಷರ ಓದು ಅವರಿಗೆ ಸಂಬಂಧಿಸಿದಂತೆ ಸರಿಯಾದ ವಿಧಾನವಲ್ಲ, ಅನೇಕ ಪೂರ್ವವಾಚನ ಚಟುವಟಿಕೆಗಳು ಈ ಹಂತದಲ್ಲಿ ಸೂಕ್ತವಾಗಿದೆ.

- ಚಿತ್ರವಾಚನ
- ಕ್ರಮೀಕರಿಸಿದ ಚಿತ್ರಗಳನ್ನು ಕಥೆಯ ರೂಪಕ್ಕೆ ಬದಲಾಯಿಸುವುದು.
- ಚಿತ್ರಗಳಾಗಿ ಪ್ರದರ್ಶಿಸಿರುವ ಕಥೆಗಳನ್ನು ಹೇಳಿ ಅವರಿಗೆ ಕೇಳಿಸುವುದು.

- ಕಥೆ ಕೇಳುವುದರೆಡೆಯಿಂದ ಕಥೆಯ ಓದಿನೆಡೆಗೆ ಮಗುವನ್ನು ಕೊಂಡೊಯ್ಯುವುದು.
- ಅಕ್ಷರ ಚಿತ್ರಗಳು
- ಅಕ್ಷರ ಕಟೌಟುಗಳು
- ಪದಗಳು ಮತ್ತು ಚಿತ್ರಗಳನ್ನೊಳಗೊಂಡ ಕಥೆಗಳು

**ಪ್ರಾಥಮಿಕ ಹಂತ**

ಆಲಿಸುವಿಕೆಯಿಂದ ಮಗುವಿಗೆ ಓದುವಿಕೆಗಿರುವ ಆಸಕ್ತಿಯು ಉಂಟಾಗುವುದು. ಮಗು ಕೇಳುವುದಕ್ಕೆ ಇಷ್ಟಪಡುವ ಕಥೆಗಳು, ಪಂಚತಂತ್ರ ಕಥೆಗಳು, ವಿಕ್ರಮಾದಿತ್ಯ ಕಥೆಗಳು, ಹಿತೋಪದೇಶದ ಕಥೆಗಳು, ಬಾಲಕಥೆಗಳು, ಕೇಳಲು ಇಷ್ಟಪಡುವ ಕವಿತೆಗಳು– ಮೊದಲಾದವುಗಳು –ಅಧ್ಯಾಪಕರಿಂದಲೂ, ರಕ್ಷಕರಿಂದಲೂ ಕೇಳುವುದಕ್ಕಿರುವ ಧಾರಾಳ ಅವಕಾಶಗಳನ್ನು ಒದಗಿಸಬೇಕು.

ಪ್ರಾಥಮಿಕ ಹಂತವು ಮುಗಿಯುವಾಗ ಮಗುವಿಗೆ ಸ್ವತಂತ್ರ ವಾಚನವು ಸಾಧ್ಯವಾಗಬೇಕು. ವಾರ್ತಾಪತ್ರಿಕೆಗಳು, ಬಾಲಮಾಸಿಕಗಳು, ಬಾಲಪಂಕ್ತಿಗಳು ಮೊದಲಾದವುಗಳನ್ನು ಸ್ವತಂತ್ರವಾಗಿ ಓದಿ ಆಸ್ವಾದಿಸಲು ಸಾಧ್ಯವಾಗಬೇಕು. ಕಥಾಸ್ಪರ್ಧೆಗಳು, ಪ್ರವಾಸ ವಿವರಣೆಗಳು, ಆಸ್ವಾದನಾ ಟಿಪ್ಪಣಿಗಳು, ಸಣ್ಣ ಭಾಷಣಗಳು, ಆಲಾಪನೆ, ಕಾವ್ಯರಚನೆ ಮೊದಲಾದವುಗಳನ್ನೆಲ್ಲಾ ವಾಚನದೊಂದಿಗೆ ಹೊಂದಿಸಿ ನಡೆಸಲೂ ಆ ಮೂಲಕ ವಾಚನದೆಡೆಗೆ ಮಗುವನ್ನು ಕೊಂಡೊಯ್ಯಲೂ ಸಾಧ್ಯವಾಗಬೇಕು.

ಕಥಾಪೂರಣ, ಆಶಯ ವಿಸ್ತರಣೆ, ಸಾಲುಗಳನ್ನು ಒಟ್ಟು ಸೇರಿಸುವುದು ಮೊದಲಾದ ಚಟುವಟಿಕೆಗಳನ್ನು ಕಲಿಕಾರ್ಥಿಗಳ ವಾಚನಾ ಸಾಮರ್ಥ್ಯವನ್ನು ಬೆಳೆಸುವುದಕ್ಕಿರುವ ಚಟುವಟಿಕೆಗಳಾಗಿ ಪ್ರಯೋಗಿಸಬಹುದು. ಭಾಷಾ ಚಟುವಟಿಕೆಗಳು ಕೇವಲ ಶಾಲೆಯಲ್ಲಿ ಮಾತ್ರವೇ ಇರಬೇಕಾದವುಗಳಲ್ಲ, ಸ್ವಾಭಾವಿಕವಾಗಿಯೂ ಶಾಲಾ ಮಟ್ಟದ ಚಟುವಟಿಕೆಗಳನ್ನು ಮನೆಗಳಿಗೂ ವಿಸ್ತರಿಸಬೇಕಾಗಿದೆ. ಮಕ್ಕಳಿಗೆ ಉಪಯೋಗವಾಗುವ ಪುಸ್ತಕಗಳ ಸಂಗ್ರಹವನ್ನು ಮನೆಗಳಲ್ಲಿ ಒದಗಿಸಿ ಅವುಗಳನ್ನು ಉಪಯೋಗಿಸುವುದಕ್ಕಿರುವ ಅವಕಾಶವನ್ನೊದಗಿಸಬೇಕು.

ಪ್ರಾಥಮಿಕ ತರಗತಿಗಳಲ್ಲಿ ಈ ರೀತಿಯ ಕೆಲವು ವಾಚನಾ ತರಬೇತಿಯ ರೀತಿಗಳನ್ನು ಉಪಯೋಗಿಸಬಹುದು.

- ಸಂಯುಕ್ತ ವಾಚನ
- 'ಅಯ್ಯೋ ತಪ್ಪಾಯ್ತು' ಓದು
- ಗುಂಪು ಓದು
- ವೈಯಕ್ತಿಕ ಓದು
- ಪೂರ್ತಿಗೊಳಿಸಿ ಓದುವುದು
- ಅಡಗಿರುವವುಳನ್ನು ಕಂಡುಹಿಡಿಯುವುದು.
- ಎಷ್ಟು ಸಲ ಪುನರಾವರ್ತಿಸಲಾಯಿತು ಎಂದು ಕಂಡುಹಿಡಿಯುವುದು.
- ಕಥಾಪಾತ್ರಗಳನ್ನು ಬದಲಾಯಿಸಿ ಓದುವುದು.
- ಪರಸ್ಪರ ಭರ್ತಿಮಾಡಿ ಓದುವುದು.

## ಗ್ರಾಫಿಕ್ ರೀಡಿಂಗ್

ನಟಿಸುತ್ತಾ ಓದುವುದು ಸಣ್ಣ ಮಕ್ಕಳ ಪ್ರತ್ಯೇಕತೆಯಾಗಿದೆ. ಅಮ್ಮನ ಚಿತ್ರವನ್ನು ನೋಡಿ ಅಮ್ಮಾ ಎಂದು ಹೇಳುವುದೂ, ಕಥಾಚಿತ್ರಗಳ ಮೂಲಕ ಕಥೆ ಹೇಳುವುದೂ, ಮನೆಯ ಪತ್ರಿಕೆಯು ಬದಲಾಗುವಾಗ ಗುರುತಿಸುವುದೂ ಗ್ರಾಫಿಕ್ ರೀಡಿಂಗಿನ ಮೊದಲ ಮೆಟ್ಟಿಲಾಗಿದೆ. ತುಂಬಾ ಹೆಸರುಗಳಿಂದ ಸ್ವಂತ ಹೆಸರನ್ನು ಕಂಡುಹಿಡಿಯುವುದೂ, ಮಗು ಹೇಳುವ ಪದವನ್ನು ಅಧ್ಯಾಪಿಕೆ ಬರೆಯುವಾಗ ಪ್ರತ್ಯೇಕವಾಗಿ ಗಮನಿಸುವುದೂ, ನಂತರ ಅದನ್ನು ಗುರುತಿಸಿ ತೋರಿಸುವುದೂ ವಾಚನದ ಪ್ರಾರಂಭದ ಚಟುವಟಿಕೆಗಳಾಗಿವೆ. ವಾಕ್ಯಗಳ ಶಬ್ದ ಮತ್ತು ಅದರ ಲಿಖಿತ ರೂಪವನ್ನು ಜೊತೆಗೊಳಿಸುವುದಕ್ಕಿರುವ ಚಟುವಟಿಕೆಗಳು ವಾಚನಾ ತರಬೇತಿಯ ಪ್ರಾರಂಭದ ಹಂತದಲ್ಲಿ ಮಗುವಿಗೆ ಲಭಿಸಬೇಕು.

ಈ ರೀತಿಯ ಚಟುವಟಿಕೆಗಳನ್ನು ನಡೆಸುವುದರ ಮುಂಚಿತವಾಗಿ ಪುಸ್ತಕಗಳ ಚಿತ್ರಗಳನ್ನು ಉಪಯೋಗಿಸಿರುವ ಚಿತ್ರವಾಚನವನ್ನು ಮಾಡಿಸುವುದು ಮಗುವನ್ನು ವಾಚನದೆಡೆಗೆ ಕೊಂಡೊಯ್ಯಲು ಸಹಾಯಕವಾದೀತು.

### ವಾಚನದಲ್ಲಿ ಆಶಯಗ್ರಹಣವನ್ನೂ ದೃಢೀಕರಿಸುವ ಚಟುವಟಿಕೆಗಳು

ವಾಚನವನ್ನು ಪ್ರೋತ್ಸಾಹಿಸಲೂ ಅದರ ಮೂಲಕ ಆಶಯಗ್ರಹಣವು ನಡೆಯುತ್ತದೆಂದು ದೃಢೀಕರಿಸಲೂ ಓದಿದ ಭಾಗದ ಆಧಾರದಲ್ಲಿ ಆಶಯಪ್ರಕಟಣೆಗಿರುವ ಅನೇಕ ಸಂದರ್ಭಗಳನ್ನು ಒದಗಿಸಬೇಕು.

- ನಾಟಕಾವಿಷ್ಕಾರ
- ರೋಲ್ ಪ್ಲೇ
- ಮೈಮಿಂಗ್
- ಚಿತ್ರ ರಚನೆ
- ಪ್ರಶ್ನೋತ್ತರ ಸ್ಪರ್ಧೆ
- ಆಶಯ ಸಂಕ್ಷೇಪಿಸುವುದು
- ಆಶಯ ವಿಸ್ತರಿಸಿ ಹೇಳುವುದು
- ಕಥಾಪಾತ್ರವಗಿ ಸಂಕಲ್ಪಿಸಿ ಹೇಳುವುದು
- ಕಥೆಯನ್ನು ಬದಲಾಯಿಸಿ ಹೇಳುವುದು
- ಕಥಾಪೂರಣ
- ಕವಿತಾ ಪೂರಣ
- ಕಥೆಯನ್ನು ವಿಪುಲೀಕರಿಸುವುದು (ನಂತರ ಏನಾಯಿತು?)

### ಚಟುವಟಿಕೆಗಳು

- ಗ್ರಾಫಿಕ್ ಓದಿನ ಸಾಧ್ಯತೆಗಳನ್ನು ಒಂದನೇ ತರಗತಿಯಲ್ಲಿ ಪರೀಕ್ಷಿಸಿ ನೋಡಿರಿ. ಕಂಡುಕೊಂಡ ವಿಚಾರಗಳನ್ನು ತರಗತಿಯಲ್ಲಿ ಹಂಚಿಕೊಳ್ಳಿರಿ.
- ವಿದ್ಯಾಲಯದಲ್ಲಿ ವಾಚನಕ್ಕೆ ಪ್ರಾಧಾನ್ಯವನ್ನು ನೀಡಿ ನಡೆಸುವ ಚಟುವಟಿಕೆಗಳು, ದಿನಾಚರಣೆಗಳು ಮೊದಲಾದವುಗಳ ಲಕ್ಷ್ಯಗಳನ್ನೂ ಚಟುವಟಿಕೆಗಳನ್ನೂ ಕೇಳಿ ತಿಳಿದುಕೊಂಡು ಟಿಪ್ಪಣಿ ತಯಾರಿಸಿರಿ.
- ವಿಭಿನ್ನ ವಾಚನಾ ರೀತಿಗಳಾದ ವಾರ್ತಾವಾಚನ, ಕಥಾವಾಚನ ಎಂಬಿವುಗಳನ್ನು ಸೇರಿಸಿ ವಾಚನಾ ಆಟಗಳನ್ನು ಆಯೋಜಿಸಿರಿ.
- ಶ್ರಾವ್ಯ ವಾಚನದ ಉತ್ತಮ ಮಾದರಿಗಳನ್ನು (ಆಡಿಯೋ) ಸಂಗ್ರಹಿಸಿರಿ.

### ಬರಹ ಕೌಶಲ

ಬರಹಕೌಶಲ ಅಥವಾ ಲೇಖನ ಕೌಶಲವು ಭಾಷಾ ಕೌಶಲಗಳಲ್ಲಿ ಕೊನೆಯದ್ದೂ ಅತ್ಯಂತ ಸಂಕೀರ್ಣವೂ ಆದ ಕೌಶಲವಾಗಿದೆ. ಪದಗಳನ್ನು ಪ್ರತ್ಯೇಕ ಕ್ರಮದಲ್ಲಿ ಪರಸ್ಪರ ಸೇರಿಸಿ ಒಂದು ವಾಕ್ಯವನ್ನುಂಟುಮಾಡುವುದಕ್ಕಿರುವ ಸಾಮರ್ಥ್ಯವೇ

ಬರಹ ಕೌಶಲ. ಬರವಣಿಗೆಯು ಅಭ್ಯಾಸದ ಮೂಲಕ ಮಾತ್ರವೇ ಲಭಿಸುವ ಒಂದು ಭಾಷಾ ನೈಪುಣ್ಯವಾಗಿದೆ. ಭಾಷೆಯು ಒಂದು ವ್ಯವಸ್ಥೆಯಾಗಿದೆ. ಶಬ್ದ ಮತ್ತು ಅದನ್ನು ದಾಖಲಿಸುವುದಕ್ಕಿರುವ ಲಿಪಿ ಸಂಪ್ರದಾಯವು ಆ ವ್ಯವಸ್ಥೆಯ ಅವಿಭಾಜ್ಯ ಘಟಕಗಳಾಗಿವೆ. ಶಬ್ದಕ್ಕೆ ಸಂಬಂಧಿಸಿದಂತೆ ಪ್ರಪಂಚದ ಎಲ್ಲಾ ಭಾಷೆಗಳೂ ಸಮಾನ ಸ್ವಭಾವವುಳ್ಳವುಗಳಾಗಿವೆ. ಆದರೆ ಲಿಪಿಯಲ್ಲಿ ದೊಡ್ಡ ವ್ಯತ್ಯಾಸವಿದೆ. ಲೇಖನ ವಿದ್ಯೆಯ ಸಂಶೋಧನೆಯೊಂದಿಗೆ ಶೈಕ್ಷಣಿಕವಾಗಿ ಮನುಷ್ಯನು ಪ್ರಗತಿ ಸಾಧಿಸಲು ಪ್ರಾರಂಭಿಸಿದನು. ಈ ಮೂಲಕ ಗಳಿಸಿದ ತಿಳುವಳಿಕೆಯನ್ನು ಮುಂದಿನ ಜನಾಂಗಕ್ಕಾಗಿ ದಾಖಲಿಸಿಡಲು ಸಾಧ್ಯವಾಯಿತು.

ಅಂದ, ವೇಗ, ಸ್ಪಷ್ಟತೆ, ಅನುಪಾತ ಕ್ರಮ ಎಂಬಿವುಗಳು ಬರವಣಿಗೆಗೆ ಇರಬೇಕಾದ ಪ್ರತ್ಯೇಕತೆಗಳಾಗಿವೆ. ಅಂದವಾಗಿ ಬರೆದರೆ ಸಾಲದು ವೇಗವೂ ಬೇಕು. ಅಭ್ಯಾಸದ ಮೂಲಕ ಇದನ್ನು ಸಾಧಿಸಬೇಕು. ವೇಗವಾಗಿ ಬರೆಯಬೇಕಾದರೆ ಕೈಯ ಸ್ನಾಯುಗಳು ಬಹಳ ವೇಗವಾಗಿ ಚಲಿಸಬೇಕು. ಸ್ಪಷ್ಟತೆಯು ಬರವಣಿಗೆಗೆ ಇರಬೇಕಾದ ಮೂರನೆಯ ಗುಣ. ನಾವು ಬರೆಯುವುದು ಇತರರಿಗೆ ಅರ್ಥವಾಗುವ ರೀತಿಯಲ್ಲಿರಬೇಕು. ನಾಲ್ಕನೆಯದು ಅನುಪಾತ ಕ್ರಮವಾಗಿದೆ. ಎಲ್ಲಾ ಅಕ್ಷರಗಳನ್ನೂ ಒಂದೇ ಗಾತ್ರದಲ್ಲಿ ಬರೆಯಬೇಕು. ಅಕ್ಷರಗಳ ಸ್ವಾಭಾವಿಕವಾದ ರೂಪಗಳನ್ನು ವಿಕೃತಗೊಳಿಸಬಾರದು. ಗೆರೆಗಳೆಡೆಯ ಅಂತರವನ್ನು ಪಾಲಿಸಬೇಕು.

## ಬರವಣಿಗೆಯಲ್ಲಿ ಕೈಗಳ ಚಲನೆಯ ಪ್ರಾಧಾನ್ಯ

ಭಾಷೆಯ ಇತರ ಮೂರು ಕೌಶಲಗಳನ್ನು ಗಳಿಸಿದ ನಂತರ ಮಾತ್ರವೇ ಬರವಣಿಗೆಯೆಡೆಗೆ ದಾಟಬೇಕು. ಬೆರಳುಗಳ ವ್ಯತ್ಯಸ್ಥವಾದ ಚಲನೆಗಳನ್ನು ಮೊದಲು ಬಲಪಡಿಸಬೇಕು. ಬರವಣಿಗೆಗೆ ಸಹಾಯಕವಾಗುವ ಕೈಗಳ ಸೂಕ್ಷ್ಮ ಸ್ನಾಯುಗಳನ್ನೂ ಸ್ಥೂಲ ಸ್ನಾಯುಗಳನ್ನೂ ಚಲಿಸುವಂತೆ ಮಾಡಲು ಸಾಧ್ಯವಾಗುವ ರೀತಿಯಲ್ಲಿ ನೇರವಾಗಿ ಮತ್ತು ಓರೆಯಾಗಿ ಇರುವ ಗೆರೆಗಳನ್ನು ಮಕ್ಕಳಿಗೆ ಇಷ್ಟವಾಗುವ ರೀತಿಯಲ್ಲಿ ಎಳೆಯಲು ಬೇಕಾದ ಅವಕಾಶಗಳನ್ನು ಅವರಿಗೆ ಲೇಖನದ ಮೊದಲ ಹಂತದಲ್ಲಿ ನೀಡಬೇಕು. ಅದರ ನಂತರ ನಿಶ್ಚಿತ ಆಕೃತಿಗಳನ್ನೂ (ವೃತ್ತ, ಚೌಕ,ತ್ರಿಕೋನ), ಮಕ್ಕಳಿಗೆ ಸುಲಭವಾಗಿ ರಚಿಸಲು ಸಾಧ್ಯವಾಗುವ ಚಿತ್ರಗಳನ್ನೂ ರಚಿಸಲು ಹೇಳಬೇಕು. ಮೊದಲು ಸುಲಭದ ಅಕ್ಷರಗಳನ್ನು ಬರೆಸಬೇಕು. ಒಂದು ಅಕ್ಷರವನ್ನು ಇನ್ನೊಂದು ಅಕ್ಷರವಾಗಿ ಬದಲಾಯಿಸಲು ಸಾಧ್ಯವಾಗುವ ರೀತಿಯಲ್ಲಿರುವ ಅಕ್ಷರಗಳನ್ನು ಮೊದಲು ಕಲಿಸುವುದು ಮಕ್ಕಳಿಗೆ ಆಸಕ್ತಿದಾಯಕವೂ ಸುಲಭವೂ ಆಗುವುದು. ಉದಾಹರಣೆಗೆ ಸ ಅಕ್ಷರವನ್ನು ನ, ವ, ಪ, ಷ ಎಂಬೀ ಅಕ್ಷರಗಳಾಗಿ ಬದಲಾಯಿಸಬಹುದು.

## ಬರವಣಿಗೆಯ ತರಬೇತಿಗಿರುವ ವಿವಿಧ ರೀತಿಗಳು

ಅಕ್ಷರಗಳನ್ನು ಸರಿಯಾಗಿ ಬರೆಯುವ ರೀತಿಯನ್ನು ಬರವಣಿಗೆಯ ಅಭ್ಯಾಸದ ಸಮಯದಲ್ಲಿ ಪ್ರತ್ಯೇಕವಾಗಿ ಗಮನಿಸಬೇಕು. ಹೆಚ್ಚಿನ ಕನ್ನಡ ಅಕ್ಷರಗಳನ್ನು ಆ ಅಪ್ರದಕ್ಷಿಣೆಯ (Anticlockwise) ರೂಪದಲ್ಲಿ ಬರೆಯಲಾಗುತ್ತದೆ. ತಪ್ಪಾದ ಬರವಣಿಗೆಯ ಕ್ರಮವನ್ನು ಪರಿಚಯಿಸಿದರೆ ನಂತರ ಅದನ್ನು ಸರಿಮಾಡಲು ಬಹಳ ಕಷ್ಟ. ಮೊದಲ ಹಂತಗಳಲ್ಲಿ ಅಕ್ಷರಗಳ ರೂಪದಲ್ಲೂ, ಗಾತ್ರದಲ್ಲಿಯೂ ನಿಖರತೆಯನ್ನೂ, ಪರಿಪೂರ್ಣತೆಯನ್ನೂ ತೋರಿಸಬೇಕಾಗಿಲ್ಲದಿದ್ದರೂ ಗಾತ್ರ, ಅಗಲ ಎಂಬಿವುಗಳನ್ನು ಸರಿಮಾಡಬೇಕು. ಸರಿಯಾದ ಬರವಣಿಗೆಯ ಕ್ರಮವನ್ನು ಪಾಲಿಸುವುದರಿಂದ ಬರವಣಿಗೆಯ ವೇಗ ಮತ್ತು ಅಂದವನ್ನು ಹೆಚ್ಚಿಸಲು ಸಾಧ್ಯವಿದೆ.

- ಆಲೇಖನ ಮಾದರಿಗಳನ್ನು ಉಪಯೋಗಿಸಿ ಅವುಗಳ ಸರಿಯಾದ ಪ್ರಯೋಗಗಳ ಪ್ರಾಧಾನ್ಯವನ್ನು ಚರ್ಚಿಸಿರಿ.

### 1. ಮರಳಿನಲ್ಲಿ ಬರೆಯುವುದು

ಸಮತಲದ ಮೇಲ್ಮೈಯಲ್ಲಿ ಮೊದಲು ಅಕ್ಷರಾಭ್ಯಾಸವನ್ನು ಪ್ರಾರಂಭಿಸಬೇಕು. ಬೆರಳಿನ ಮೂಲಕ ಮರಳಿನಲ್ಲಿ ಬರೆಯುವಾಗ ಉಂಟಾಗುವ ಸ್ಪರ್ಶ ಸಂವೇದನೆಯು ಅಕ್ಷರ ರೂಪವನ್ನೂ, ಅದಕ್ಕೆ ಉಪಯೋಗಿಸಿದ ಕೈಯ ಚಲನೆಯನ್ನೂ ಮನಸ್ಸಿನಲ್ಲಿ ಬಲಪಡಿಸಲು ಸಹಾಯಕವಾಗುವುದೆಂದು ಮನಃಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ.

**2. ಬೋರ್ಡಿನಲ್ಲಿ ಬರೆಯುವುದು**

ಮರಳಿನಲ್ಲಿ ಅಭ್ಯಾಸ ಮಾಡಿದ ನಂತರ ಗಟ್ಟಿಯಾದ ವಸ್ತುವಿನಲ್ಲಿಯೂ ಬರೆದು ಅಭ್ಯಾಸಮಾಡಬೇಕು. ಅದಕ್ಕಾಗಿ ಬೋರ್ಡನ್ನು ಉಪಯೋಗಿಸಬಹುದು. ಗಟ್ಟಿಯಾದ ವಸ್ತುವಿನಲ್ಲಿ ಬರೆಯುವಾಗ ಬೆರಳುಗಳಿಗೂ ಕೈಗಳಿಗೂ ಹೆಚ್ಚಿನ ಶಕ್ತಿ ಬೇಕಾಗುವುದು. ಕೈಯನ್ನು ಒಟ್ಟಾಗಿ ಚಲಿಸುವಂತೆ ಮಾಡಿ ಬೋರ್ಡಿನಲ್ಲಿ ಬರೆಯಬೇಕು. ಹೀಗೆ ಮಾಡುವಾಗ ಕೈಗಳ ಸ್ಥೂಲ ಪೇಶಿಗಳಿಗೂ, ಸೂಕ್ಷ್ಮ ಪೇಶಿಗಳಿಗೂ ಅಗತ್ಯವಿರುವಷ್ಟು ಚಲನೆಯ ಅಭ್ಯಾಸವನ್ನು ಮಾಡಿಸಲು ಬೋರ್ಡಿನಲ್ಲಿ ಬರೆಯುವ ರೀತಿಯು ಸಹಾಯಕವಾಗುವುದು.

**3. ಸ್ಲೇಟಿನಲ್ಲಿ ಬರೆಯುವುದು.**

ಸ್ಲೇಟಿನಲ್ಲಿ ಬರೆಯುವುದರ ಮೂಲಕ ಗಟ್ಟಿಯಾದ ಮೇಲ್ಮೈಯಿಂದ ನಯವಾದ ಮೇಲ್ಮೈಯಲ್ಲಿ ಬರೆಯುವುದಕ್ಕೆ ಆರಂಭ ಮಾಡಲಾಗುತ್ತದೆ. ಅಕ್ಷರಗಳನ್ನು ದೊಡ್ಡದಾಗಿ ಬರೆಯಲು ಹೇಳಬೇಕು.

**4. ಕಾಗದದಲ್ಲಿ ಬರೆಯುವುದು**

ಸ್ಲೇಟಿನಲ್ಲಿ ಬರೆದು ಅಭ್ಯಾಸ ಮಾಡಿದ ನಂತರ ತೆಳುವಾದ ಕಾಗದದಲ್ಲಿ ಬರೆಯಬೇಕು. ಬರವಣಿಗೆಯ ಅಭ್ಯಾಸದ ಗುರಿಯು ವೇಗವಾಗಿ ಮತ್ತು ಅಂದವಾಗಿ ಬರೆಯುವ ಸಾಮರ್ಥ್ಯವನ್ನು ಬೆಳೆಸುವುದಾಗಿದೆ.

**ಬರವಣಿಗೆಯ ಸಾಮರ್ಥ್ಯವನ್ನು ಬೆಳೆಸುವಾಗ ಗಮನಿಸಬೇಕಾದ ವಿಚಾರಗಳು**

- ಒಂದನೇ ತರಗತಿಯ ಗೋಡೆಗಳನ್ನು ಮನೋಹರವಾದ ಅಕ್ಷರರೂಪಗಳಿಂದ ಆಕರ್ಷಕಗೊಳಿಸಬೇಕು.
- ಬರವಣಿಗೆಗಾಗಿ ವೈವಿಧ್ಯಮಯವಾದ ಸಂದರ್ಭಗಳನ್ನು ಒದಗಿಸಬೇಕು. ಇವುಗಳನ್ನು ಅರ್ಥಪೂರ್ಣವಾದ ಅನುಭವಗಳನ್ನಾಗಿ ಬದಲಾಯಿಸಲು ಗಮನಿಸಬೇಕು.

**ನೀಡಬಹುದಾದ ಚಟುವಟಿಕೆಗಳು**

- ಚಿತ್ರಗಳಿಂದ ಆಶಯಗಳನ್ನು ಕಂಡುಹಿಡಿದು ಪದಗಳು, ವಾಕ್ಯಗಳು ಎಂಬಿವುಗಳನ್ನು ಬರೆಯಲು ಸಂದರ್ಭವನ್ನೊದಗಿಸುವುದು.
- ಅರ್ಥಮಾಡಿಕೊಂಡ ವಿಚಾರಗಳನ್ನು ನಿಶ್ಚಿತ ಪದಗಳಲ್ಲಿ ಚಿತ್ರೀಕರಣ ಸಹಿತ ಪ್ರಸ್ತುತಪಡಿಸುವುದು.
- ಸರಿಯಾದ ಆಲೇಖನ ರೀತಿಯನ್ನು ಪಾಲಿಸಿ ಅಧ್ಯಾಪಿಕೆಯು ಬರೆಯುವುದನ್ನು ಕಾಣುವುದಕ್ಕಿರುವ ಸಂದರ್ಭ ಮತ್ತು ಮಾದರಿಯನ್ನೂ ನೋಡಿ ಬರೆಯುವುದಕ್ಕಿರುವ ಅವಕಾಶವನ್ನೊದಗಿಸುವುದು.
- ಪಾಠಭಾಗದಲ್ಲಿರುವ ರಚನೆಯ ಭಾಗಗಳನ್ನು ಭರ್ತಿ ಮಾಡುವುದು.
- ಚಿತ್ರಗಳು, ಸ್ವಂತ ಅನುಭವಗಳು ಎಂಬಿವುಗಳನ್ನು ಆಧಾರವಾಗಿರಿಸಿ ಸ್ವತಂತ್ರವಾಗಿ ಬರೆಯುವುದಕ್ಕಿರುವ ಅವಕಾಶವನ್ನೊದಗಿಸುವುದು.
- ಮುಕ್ತವಾಗಿ ಸೃಜನಶೀಲ ರಚನೆಗಳಲ್ಲಿ ತೊಡಗಿಸಿಕೊಳ್ಳುವುದಕ್ಕಿರುವ ಸಂದರ್ಭವನ್ನೊದಗಿಸುವುದು.
- ಪ್ರಾರಂಭದಲ್ಲಿ ಬರವಣಿಗೆಯ ಪರಿಪೂರ್ಣತೆಗೆ ಹೆಚ್ಚಿನ ಒತ್ತು ಕೊಡಬಾರದು. ಅದು ಅವರ ಆತ್ಮವಿಶ್ವಾಸವನ್ನು ಪ್ರತಿಕೂಲವಾಗಿ ಬಾಧಿಸುವುದು.

### ಬರವಣಿಗೆ–ಬೋಧನಾ ಸಮೀಪನಗಳು

ತರಗತಿಯಲ್ಲಿ ಬರವಣಿಗೆಯ ಅಭ್ಯಾಸವನ್ನು ನಡೆಸುವುದು ಕಲಿಕೆಗೂ ಬೋಧನೆಗೂ ಇರುವ ಒಂದು ಉಪಕರಣವಾಗಿಯಾಗಿದೆ. ಅಥವಾ ಬರವಣಿಗೆಯ ಸಾಮರ್ಥ್ಯವನ್ನು ಉತ್ತಮಗೊಳಿಸುವ ಉದ್ದೇಶದಿಂದಾಗಿರುತ್ತದೆ. ಎಲ್ಲಾ ಲೇಖನ ಚಟುವಟಿಕೆಗಳಲ್ಲೂ ಇತರ ಸಾಮರ್ಥ್ಯಗಳೂ ಒಳಗೊಳ್ಳುತ್ತವೆ. ಬರವಣಿಗೆಯ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಕಲಿಕಾರ್ಥಿಯು ಮಾಹಿತಿ ಸಂಗ್ರಹಿಸುವುದು, ಹೋಲಿಕೆ ಮಾಡುವುದು, ವಾದಗತಿಗಳನ್ನು ಪರಿಶೋಧಿಸುವುದು, ಆಶಯಗಳನ್ನು ಕ್ರಮಬದ್ಧಗೊಳಿಸುವುದೇ ಮೊದಲಾದ ಅನೇಕ ಸಾಮರ್ಥ್ಯಗಳ ಮೂಲಕ ದಾಟಿ ಹೋಗುತ್ತಾನೆ. ಬರಹ ಕೌಶಲವನ್ನು ಉತ್ತಮಪಡಿಸುವ ಉದ್ದೇಶದಿಂದ ಇರುವ ಲೇಖನ ಅಥವಾ ಬರವಣಿಗೆಯು ಬೇರೆಯಾಗಿದೆ. ಇವೆರಡನ್ನೂ ಸೂಕ್ತವಾಗಿ ಹೊಂದಾಣಿಕೆ ಮಾಡಬೇಕು.

### ವಿಷಯದ ಹೂರಣ ಮತ್ತು ಮಂಡನೆಯ ವಿಧಾನ

ಆಶಯಪರವಾದ ವಿಷಯ ಮತ್ತು ಮಂಡನೆಗಳೊಳಗಿನ ಸಮತೋಲನವು ಯಾವ ರೀತಿಯಲ್ಲಿರಬೇಕೆಂಬ ಸಮಸ್ಯೆಯು ಎಲ್ಲಾ ಲೇಖನ ಚಟುವಟಿಕೆಗಳಲ್ಲೂ ಬರುತ್ತದೆ. ಲೇಖನದ ಉದ್ದೇಶವು ಆಶಯವಿನಿಮಯವಾಗಿದೆಯಲ್ಲವೇ, ಆದುದರಿಂದ ಒಂದು ಲೇಖನದ ಅತ್ಯಂತ ಹೆಚ್ಚು ಪ್ರಧಾನವಾದ ತಲವು ಅದರಲ್ಲಿ ಒಳಗೊಂಡಿರುವ ಆಶಯಗಳಾಗಿವೆ ಎಂದು ಹೇಳಬಹುದು. ಅದೇ ಸಂದರ್ಭದಲ್ಲಿ ಫಲಪ್ರದವಾದ ರೀತಿಯಲ್ಲಿ ಪ್ರಸ್ತುತಪಡಿಸದಿದ್ದರೆ ಆಶಯವಿನಿಮಯಕ್ಕೆ ಅಡ್ಡಿಯುಂಟಾಗಬಹುದು. ಆದುದರಿಂದ ಆಶಯಗಳನ್ನು ಯಾವ ರೀತಿಯಲ್ಲಿ ಮಂಡಿಸಲಾಗುತ್ತದೆ ಎಂಬುದೂ ಪ್ರಧಾನವಾಗಿದೆ. ಲೇಖನ ಚಟುವಟಿಕೆಗಳಲ್ಲಿ ಇದರ ಯಾವ ಘಟಕಕ್ಕೆ ಪ್ರಾಧಾನ್ಯ ನೀಡಬೇಕೆಂದು ಮೊದಲೇ ತೀರ್ಮಾನಿಸಲು ಸಾಧ್ಯವಿಲ್ಲ. ಪ್ರತಿ ಲೇಖನದ ಉದ್ದೇಶ, ಸ್ವಭಾವಕ್ಕನುಗುಣವಾಗಿ ಇದನ್ನು ತೀರ್ಮಾನಿಸಬೇಕಾಗಿದೆ.

### ಪ್ರಾರಂಭದ ಹಂತಕ್ಕೆ ಸೂಕ್ತವಾದ ಲೇಖನ ಚಟುವಟಿಕೆಗಳು

- ಒಂದು ಪ್ರತ್ಯೇಕ ಕಾರ್ಯವನ್ನು ಮಾಡುವುದಕ್ಕಿರುವ ನಿರ್ದೇಶಗಳನ್ನು ಬರೆಯಿರಿ (ಉದಾ: ಅಡುಗೆ ಟಿಪ್ಪಣಿ, ಒರಿಗಾಮಿ ರೂಪಗಳನ್ನು ನಿರ್ಮಿಸುವುದು)
- ವ್ಯಕ್ತಿಯ ಅನುಭವಗಳು
- ಪ್ರಕೃತಿ ದೃಶ್ಯಗಳ ವಿವರಣೆ
- ವ್ಯಕ್ತಿಗಳ ಕುರಿತಾದ ವಿವರಣೆ
- ಪತ್ರಗಳಿಗೆ ಉತ್ತರ ಬರೆಯುವುದು.
- ಕೆಲಸಕ್ಕೆ ಬೇಕಾದ ಅರ್ಜಿಯನ್ನು ತಯಾರಿಸುವುದು.
- ಬದಲಾವಣೆಗಳನ್ನು ಸೂಚಿಸುವುದು (ಉದಾ: ಶಾಲೆಯ ನಡೆಸುವಿಕೆಯಲ್ಲಿ, ಸಾರಿಗೆ ನಿಯಂತ್ರಣದಲ್ಲಿ...)
- ವಾರ್ತೆಯನ್ನು ತಯಾರಿಸುವುದು.

### ಚಟುವಟಿಕೆಗಳು

? ಪೂರ್ವಲೇಖನ ತರಬೇತಿಗೆ (ಸ್ಥೂಲ ಪೇಶಿ, ಸೂಕ್ಷ್ಮ ಪೇಶಿ ಉಪಯೋಗ) ನಿರ್ದೇಶಿಸಬಹುದಾದ ಕೆಲವು ಚಟುವಟಿಕೆಗಳನ್ನು (ಉದಾ: ಗಿಳಿಯನ್ನು ಗೂಡಿಗೆ ತಲುಪಿಸುವುದು; ದಾರಿ ಕಂಡುಹಿಡಿಯುವುದು) ಕಂಡು ಹಿಡಿದು ಸಣ್ಣ ತರಗತಿಗಳಲ್ಲಿ ಟ್ರೈ ಔಟ್ ಮಾಡಿರಿ.

? ಕನ್ನಡದ ಕೆಲವು ಪ್ರಾಚೀನ ಲಿಖಿತಗಳನ್ನು ಪರಿಶೋಧಿಸಿ (ತಾಳೆಯೋಲೆಗಳು, ದಾಖಲೆಗಳು, ಹಳೆಯ ಕಾಲದ ಪುಸ್ತಕಗಳು...) ಲಿಪಿ ವಿಕಾಸವನ್ನು ತೋರಿಸುವ ಚಾರ್ಟ್ ತಯಾರಿಸಿರಿ.

? ಬರವಣಿಗೆಯ ಮೇಲೆ ಪ್ರಭಾವ ಬೀರುವ ಘಟಕಗಳನ್ನು (ಉಚ್ಚಾರದ ಸಮಸ್ಯೆಗಳು, ಡಿಸ್‌ಗ್ರಾಫಿಯಾ, ಶ್ರವಣ ವೈಕಲ್ಯ, ಮೊದಲಾದವುಗಳು) ಕಂಡುಹಿಡಿದು ಅವುಗಳನ್ನು ಸರಳಗೊಳಿಸುವುದಕ್ಕಿರುವ ಚಟುವಟಿಕೆಗಳನ್ನು ಕಂಡುಹಿಡಿಯಿರಿ.

? ಪ್ರಸಿದ್ಧ ವ್ಯಕ್ತಿಗಳು, ಕವಿಗಳು ಮೊದಲಾದವರ ಕೈಬರಹಗಳನ್ನು ಸಂಗ್ರಹಿಸಿ ಹೋಲಿಕೆ ಮಾಡಿ ಅವುಗಳ ಪ್ರತ್ಯೇಕತೆಗಳನ್ನು ಕಂಡುಹಿಡಿದು ಬರವಣಿಗೆಯ ವೈವಿಧ್ಯವನ್ನು ಚರ್ಚೆ ಮಾಡಿರಿ.

? ಉಚ್ಚಾರಕ್ಕೆ ಅನುಗುಣವಾದ ಬರವಣಿಗೆಯ ರೀತಿಗಳು ಕನ್ನಡದಲ್ಲಿರುವುದು. ಉದಾಹರಣೆಯಾಗಿ ಮಾದರಿಗಳನ್ನು ಪ್ರಸ್ತುತಪಡಿಸಿರಿ.

**ಆಕರ ಗ್ರಂಥಗಳು**


1. ವಿದ್ಯಾಭ್ಯಾಸ ಪರಿವರ್ತನತ್ತಿನೊರಾಮುಖಂ – ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್
2. ಆಧುನಿಕ ಭಾಷಾ ಶಾಸ್ತ್ರಂ – ಡಾ.ಕೆ.ಎಂ. ಪ್ರಭಾಕರ ವಾರಿಯರ್
3. ಭಾಷಾ ಪ್ರವೇಶಿಕ – ಡಾ.ಇ.ವಿ.ಎನ್. ನಂಬೂದಿರಿ
4. ವಾಯನಯುಡೆ ಲೋಕತ್ತೇಕ್ ಸ್ನೇಹಪೂರ್ವಂ – ಮಲಪ್ಪುರ ಡಯೆಟ್
5. ವಿವಿಧ ಅಧ್ಯಾಪಕ ಕೈಪಿಡಿಗಳು


* * *

ಘಟಕ – 4

# ಮಕ್ಕಳ ಸಾಹಿತ್ಯ

ಮಾತೃಭಾಷೆಯನ್ನು ಪ್ರಾಥಮಿಕ ತರಗತಿಗಳಲ್ಲಿ ಕಲಿಯುವ ಆರರಿಂದ ಹದಿನಾಲ್ಕರ ಹರೆಯದ ಮಕ್ಕಳಿಗೆ ಅತ್ಯಂತ ಪ್ರಿಯವಾದ ಸಾಹಿತ್ಯವೇ ಮಕ್ಕಳ ಸಾಹಿತ್ಯ. ಒಂದರಿಂದ ಎಂಟನೇ ತರಗತಿಯ ವರೆಗೆ ಈ ವಿಷಯವನ್ನು ಕಲಿಸುವ ಅಧ್ಯಾಪಕರು ಮಕ್ಕಳ ಸಾಹಿತ್ಯದ ವಿವಿಧ ವಲಯಗಳನ್ನು, ಶಾಖೆಗಳನ್ನು, ಕಾಲಘಟ್ಟಗಳನ್ನು ಮತ್ತು ಪ್ರಕಟಿತ ಕೃತಿಗಳನ್ನು ತಿಳಿದಿರಬೇಕು. ಮಕ್ಕಳ ಸಾಹಿತ್ಯ ಎಂಬ ಈ ಘಟಕದ ಮೂಲಕ ಕನ್ನಡದಲ್ಲಿ ಮಕ್ಕಳ ಸಾಹಿತ್ಯದ ವಿಶೇಷತೆಗಳು, ಮಕ್ಕಳ ಸಾಹಿತ್ಯ ಕೃತಿಗಳು ಮತ್ತು ಪ್ರಕಟಿತ ಕೃತಿಗಳ ತರಗತಿ ವಿನಿಮಯ ಸಾಧ್ಯತೆಗಳ ಕುರಿತು ಸ್ಪಷ್ಟವಾದ ತಿಳುವಳಿಕೆ ಪಡೆಯಲು ಪ್ರತಿಯೊಬ್ಬ ಅಧ್ಯಾಪಕ ವಿದ್ಯಾರ್ಥಿಗೆ ಸಾಧ್ಯವಾಗಬೇಕು. ಕನ್ನಡದಲ್ಲಿ ವೈವಿಧ್ಯದಿಂದ ಕೂಡಿದ ಮಕ್ಕಳ ಸಾಹಿತ್ಯ ಇದೆಯೆಂದೂ ಅವುಗಳಲ್ಲಿ ಮಕ್ಕಳಿಗೆ ಅನುಯೋಜ್ಯವಾದ ಭಾಷೆ, ಮತ್ತು ವಸ್ತುಗಳಿದ್ದು ಮಕ್ಕಳಲ್ಲಿ ಜಿಜ್ಞಾಸೆ, ಓದು, ಸೃಜನಶೀಲತೆಗಳನ್ನು ಬೆಳೆಸಲು ಸಾಧ್ಯವೆಂದೂ ತಿಳಿದುಕೊಳ್ಳಬೇಕು. ಮಕ್ಕಳಿಗಾಗಿ ಹಿರಿಯರು ಬರೆದ ಮತ್ತು ಮಕ್ಕಳೇ ಬರೆದ ಸಾಹಿತ್ಯ ಕೃತಿಗಳು ಮಕ್ಕಳ ಸಾಹಿತ್ಯ ರಚನೆಗಳನ್ನು ಶ್ರೀಮಂತಗೊಳಿಸಿವೆ. ಇಂತಹ ಮಕ್ಕಳ ಸಾಹಿತ್ಯಗಳನ್ನು ಮತ್ತು ಪ್ರಕಟಿತ ಕೃತಿಗಳನ್ನು ಸೇರಿಸಿಕೊಂಡು ಕಲಿಕಾಪ್ರಕ್ರಿಯೆಗಳನ್ನು ಆಯೋಜಿಸುವಾಗ ಭಾಷಾ ಕಲಿಕೆಯ ತರಗತಿಗಳು ಗುರಿಯನ್ನು ತಲುಪಲು ಖಂಡಿತ ಸಾಧ್ಯವಾಗುತ್ತದೆ.

## ಮಕ್ಕಳ ಸಾಹಿತ್ಯ ಎಂದರೇನು?

ಮಕ್ಕಳ ಮನಸ್ಸಿನಲ್ಲಿ ಆಲೋಚನೆಗಳನ್ನು ಮತ್ತು ಭಾವನೆಗಳನ್ನು ಬೆಳೆಸುವುದು ಅತ್ಯಂತ ಮಹತ್ವದ ಕೆಲಸವಾಗಿದೆ. ಮೂರ್ತವೂ ಚಲನಾತ್ಮಕವೂ ಆದವುಗಳ ಕಡೆಗೆ ಮಾತ್ರವೇ ಮಕ್ಕಳ ಮನಸ್ಸು ಸಂಚರಿಸುತ್ತದೆ. ಏನನ್ನು ಕಂಡರೂ ಕೇಳಿದರೂ ಅದರ ವಿವರಗಳ ಕಡೆಗೆ ಮಕ್ಕಳ ಮನಸ್ಸು ಓಡುತ್ತದೆ. ಮಕ್ಕಳಲ್ಲಿ ಜಿಜ್ಞಾಸೆ ಬೆಳೆಯಬೇಕು, ಅವರ ಮನಸ್ಸು ಕನ್ನಡಿಯ ಹಾಗೆ. ಸ್ವಭಾವ ರೂಪೀಕರಣಕ್ಕೂ ಮೊದಲ ಸ್ಥಾನವಿರುವ ಎಳವೆಯಲ್ಲಿ ಅವರಿಗೆ ಲಭಿಸುವ ಸಾಹಿತ್ಯ ರಚನೆಗಳು ಇಂತಹ ಹಲವು ವಿಚಾರಗಳನ್ನು ಒಳಗೊಂಡಿರಬೇಕು. ಮಕ್ಕಳ ಸಾಹಿತ್ಯವು ಅವುಗಳ ಸಮಸ್ತ ವಿಚಾರಗಳಲ್ಲಿಯೂ ಪ್ರತಿಪಾದನೆಗಳಲ್ಲಿಯೂ ಸಮಗ್ರತೆಯನ್ನು ಪಡೆದಿರಬೇಕೆಂದು ಅರ್ಥ. ಮಕ್ಕಳ ಸಾಹಿತ್ಯದ ಭಾಷೆ, ಶೈಲಿ, ಮಂಡನೆ ಇತ್ಯಾದಿಗಳಲ್ಲದೆ ಎಲ್ಲ ವಿಚಾರಗಳೂ ಅವರ ಅಭಿರುಚಿಗೆ ತಕ್ಕಂತಿರಬೇಕು. ಮಕ್ಕಳ ಮನೋವಿಜ್ಞಾನವನ್ನು ತಿಳಿದುಕೊಂಡು ಅವರ ಭಾವನೆಗಳೊಂದಿಗೆ ಹೊಂದಿಕೊಳ್ಳುವ ರಚನೆಗಳು ಉತ್ತಮ ಮಟ್ಟದ ಮಕ್ಕಳ ಸಾಹಿತ್ಯದಲ್ಲಿ ಸೇರುತ್ತವೆ. ಹಿರಿಯರ ಪ್ರಪಂಚದಿಂದ ತೀರಾ ಭಿನ್ನವಾಗಿರುವ ಒಂದು ಪ್ರಪಂಚ – ಮಕ್ಕಳಿಗೆ ಸೀಮಿತವಾದ ಒಂದು ಮಾಯಾಪ್ರಪಂಚವನ್ನು ಸೃಷ್ಟಿಸುವ ಮಹತ್ವದ ಕೆಲಸವೊಂದನ್ನು ಉತ್ತಮ ಮಕ್ಕಳ ಸಾಹಿತ್ಯ ರಚನಾಕಾರರು ಮಾಡುತ್ತಿದ್ದಾರೆ.

ಮಕ್ಕಳ ಸಾಹಿತ್ಯವು ಕೇವಲ ವಿನೋದಕ್ಕೆ ಮಾತ್ರ ಸೀಮಿತವಾಗಬಾರದು. ಸ್ನೇಹ, ದಯೆ, ಸತ್ಯಸಂಧತೆ, ಅನುಸರಣೆ, ಶಿಸ್ತು, ಸಾಹೋದರ್ಯ, ಸಹಕಾರ, ಗುರುಭಕ್ತಿ, ರಾಷ್ಟ್ರಪ್ರೇಮ, ಪ್ರಕೃತಿ ಸ್ನೇಹ, ಹೆತ್ತವರಲ್ಲಿ ಪ್ರೀತಿ, ಸ್ವಾತಂತ್ರ್ಯದ ಮೌಲ್ಯ ಮೊದಲಾದ ಉನ್ನತ ಆಶಯಗಳ ಮೊದಲ ಬೆಳಕು ಮಕ್ಕಳಲ್ಲಿ ಮೂಡಲು ಮಕ್ಕಳ ಸಾಹಿತ್ಯಕ್ಕೆ ಸಾಧ್ಯವಾಗಬೇಕು. ತಾವು ಜೀವಿಸುವ ಸಾಮಾಜಿಕ ಪರಿಸರವು ಮಕ್ಕಳ ಭವಿಷ್ಯವನ್ನು ನಿಯಂತ್ರಿಸುತ್ತದೆ. ಒಂದು ಮಗು ತಾನು ಬೆಳೆಯುತ್ತಿದ್ದಂತೆ ವಿವಿಧ ಹಂತಗಳನ್ನು ದಾಟಬೇಕಾಗುತ್ತದೆ. ಪ್ರತಿಯೊಂದು ಹಂತದಲ್ಲಿಯೂ ಮಗುವಿನ ಮಾನಸಿಕ, ವೈಜ್ಞಾನಿಕ, ಭಾವನಾತ್ಮಕವಾದ ಅಗತ್ಯಗಳನ್ನು ನೆರವೇರಿಸಲು ಔಪಚಾರಿಕ ಶಿಕ್ಷಣಕ್ಕೆ ಸಾಧ್ಯವಿಲ್ಲ. ಹೆಚ್ಚಿನ ಓದಿಗೆ ಇನ್ನಿತರ ಪುಸ್ತಕಗಳು ಬೇಕಾಗಬಹುದು. ಇಲ್ಲಿ ಮಕ್ಕಳ ಸಾಹಿತ್ಯವು ಪ್ರಧಾನ ಪಾತ್ರ ವಹಿಸುತ್ತದೆ.

ಈ ಸಂದರ್ಭದಲ್ಲಿ ಅವರಿಗೆ ಓದಲು ಲಭಿಸುವ ಕೃತಿಗಳು ಹೆಚ್ಚು ರಸವತ್ತಾಗಿಯೂ, ಸ್ವಾಭಾವಿಕವಾಗಿ ಹೆಚ್ಚು ಸತ್ಯನಿಷ್ಠವಾಗಿಯೂ, ಕಲಾತ್ಮಕವಾಗಿಯೂ ಹೆಚ್ಚು ರಮಣೀಯವಾಗಿಯೂ ಶೈಶವದ ಸೂಕ್ಷ್ಮವೂ ನಿತ್ಯನೂತನವೂ ಆದ ಸಂವೇದನೆಯೊಂದಿಗೆ ಪ್ರತಿಕ್ರಿಯಿಸುವ ಎಲ್ಲ ಗುಣಗಳಲ್ಲಿಯೂ ಸಮೃದ್ಧವಾಗಿರಬೇಕು.

## ಮಕ್ಕಳ ಸಾಹಿತ್ಯದ ಕುರಿತು ಸಾಹಿತಿಗಳ ಅಭಿಪ್ರಾಯಗಳು

### ಮಕ್ಕಳ ಸಾಹಿತ್ಯ–ಪ್ರಾರಂಭದ ಹೆಜ್ಜೆಗಳು

ಇಪ್ಪತ್ತನೇ ಶತಮಾನದ ಆರಂಭದಲ್ಲಿ ಒಂದು ಪ್ರತ್ಯೇಕ ಸಾಹಿತ್ಯ ರೂಪವಾಗಿ ಮಕ್ಕಳ ಸಾಹಿತ್ಯವು ಬೆಳೆದು ಬಂತು. ಪ್ರಾಚೀನ ಭಾರತದಲ್ಲಿ ಮತ್ತು ಮಧ್ಯಕಾಲದ ಯುರೋಪಿನಲ್ಲಿ ಮಕ್ಕಳ ಸಾಹಿತ್ಯದ ಪ್ರಾರಂಭದ ರಚನೆಗಳನ್ನು ಇದಕ್ಕಿಂತಲೂ ಮೊದಲೇ ಕಾಣಬಹುದು. ವಿಷ್ಣುಶರ್ಮನ ಪಂಚತಂತ್ರ ಮತ್ತು ಬೌದ್ಧಮತಕಾಲದ ಜಾತಕ ಕತೆಗಳನ್ನು ಭಾರತದ ಮತ್ತು ಈಸೋಪನ ಕತೆಗಳು, ಕಾಸ್ಟನ್ ಬರೆದ ಮರ್ಯಾದೆಯ ಪುಸ್ತಕ, ಗಲಿವರನ ಯಾತ್ರಾ ಕತೆಗಳು, ಆಲೀಸ್ ಕಂಡ ಅದ್ಭುತ ಲೋಕ, ಗ್ರಿಮ್ಮಿ ಮತ್ತು ಆಂಡರ್ಸನ್‌ನ ಕತೆಗಳನ್ನು ಮಧ್ಯಕಾಲದ ಯುರೋಪಿನ ಪ್ರಾರಂಭಕಾಲದ ಮಕ್ಕಳ ಸಾಹಿತ್ಯ ಕೃತಿಗಳಾಗಿ ಪರಿಗಣಿಸಬಹುದು. 1657ರಲ್ಲಿ ಕೊಮಿನಿಯಸ್ ಎಂಬ ಶಿಕ್ಷಣ ತಜ್ಞನು ರಚಿಸಿದ ಓರ್ಬಿಸ್ ಪಿಕ್ಚರ್ಸ್ ಎಂಬ ಕೃತಿಯು ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಪರಿವರ್ತನೆಗೆ ದಾರಿ ಮಾಡಿತು. ಇದು ಚಿತ್ರಗಳಿಂದ ಕೂಡಿದ ಪ್ರಥಮ ಮಕ್ಕಳ ಸಾಹಿತ್ಯ ಕೃತಿಯಾಗಿದೆ. ಹದಿನೆಂಟು, ಹತ್ತೊಂಬತ್ತನೇ ಶತಮಾನಗಳಲ್ಲಿ ಪಾಶ್ಚಾತ್ಯ ಸಾಹಿತ್ಯಗಳಲ್ಲಿ ಮಕ್ಕಳ ಸಾಹಿತ್ಯಕ್ಕೆ ಕ್ರಮಾನುಗತವಾದ ಬೆಳವಣಿಗೆಯುಂಟಾಯಿತು. ಜೊತೆಗೆ ಕನ್ನಡದಲ್ಲಿಯೂ ಅದೊಂದು ಸಾಹಿತ್ಯ ಚಳುವಳಿಯಾಗಿ ಬೆಳೆಯಿತು.

## ಕನ್ನಡದಲ್ಲಿ ಮಕ್ಕಳ ಸಾಹಿತ್ಯ

ಮಕ್ಕಳ ಮನಸ್ಸನ್ನು ಅರಳಿಸಿ, ಕುತೂಹಲವನ್ನು ಕೆರಳಿಸಿ, ಕಲ್ಪನೆಯನ್ನು ರೂಪಿಸಿ, ಭಾವನೆಗಳನ್ನು ಪ್ರಚೋದಿಸಿ, ಆನಂದದಲ್ಲಿ, ಮೀಯಿಸಿ ಅವರ ವ್ಯಕ್ತಿತ್ವವನ್ನು ರೂಪಿಸುವ ಸಾಹಿತ್ಯವು ಕನ್ನಡದಲ್ಲಿ ಇತ್ತಾದರೂ, ಅದಕ್ಕೆ 'ಮಕ್ಕಳ ಸಾಹಿತ್ಯ' ವೆಂಬ ಸ್ಪಷ್ಟ ರೂಪ ಬಂದದ್ದು ಆಧುನಿಕ ಶಿಕ್ಷಣ ಹಾಗೂ ನವೋದಯ ಸಾಹಿತ್ಯ ಸಂದರ್ಭದಲ್ಲಿ ಎನ್ನಬಹುದು. ಕನ್ನಡದಲ್ಲಿ ಮಕ್ಕಳ ಸಾಹಿತ್ಯದ ಬೇರನ್ನು ಜಾನಪದ ಪರಂಪರೆಯಲ್ಲಿಯೇ ಕಾಣಬಹುದು. ಅಜ್ಜಿ ಹೇಳುವ ಲಾಲಿಪದಗಳು, ಪ್ರಾಸಬದ್ಧವಾದ ಆಟದ ಪದಗಳು, ಒಗಟುಗಳು, ಕತೆಗಳು, ಅದರಲ್ಲೂ ರಾಜಕುಮಾರಿಯರ ಕತೆ, ಅದ್ಭುತ ರಮ್ಯ ಕತೆ, ಕಾಗಕ್ಕ ಗುಬ್ಬಕ್ಕನ ಕತೆ, ಪಂಚತಂತ್ರದ ಕತೆ– ಇವೆಲ್ಲ ಮಕ್ಕಳ ಸಾಹಿತ್ಯದ ಆರಂಭದ ಹೆಜ್ಜೆಗಳಾಗಿವೆ.

## ಇತಿಹಾಸ ಮತ್ತು ಮಕ್ಕಳ ಸಾಹಿತ್ಯ

ಇತಿಹಾಸಗಳು ಮಕ್ಕಳ ಸಾಹಿತ್ಯ ರಚನೆಗೆ ಅವಲಂಬಿಸಬಹುದಾದ ಅತ್ಯಂತ ಶ್ರೇಷ್ಠ ಮೂಲಗಳಾಗಿವೆ. ಕಥಾ ಸರಿತ್ಸಾಗರ, ಪಂಚತಂತ್ರ, ಮಕ್ಕಳ ರಾಮಾಯಣ, ಮಕ್ಕಳ ಭಾಗವತ, ಮಕ್ಕಳ ಮಹಾಭಾರತ ಮೊದಲಾದ ಅನೇಕ ಕೃತಿಗಳು ಈ ವಿಭಾಗದಲ್ಲಿವೆ. ಆತ್ಮಾನಂದ ಮಾತ್ರವಲ್ಲ ಕೌಟುಂಬಿಕ ಜೀವನದಲ್ಲಿ ದಾರಿ ತಪ್ಪುವವರಿಗೆ ಸರಿಯಾದ ದಾರಿಯನ್ನು ಇವು ತೋರಿಸುತ್ತವೆ.

## ಮಕ್ಕಳ ಸಾಹಿತ್ಯ–ಅನುವಾದ

ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಅನುವಾದದ ಮೂಲಕ ಧಾರಾಳ ಕೃತಿಗಳು ಬಂದಿವೆ. ರಷ್ಯನ್, ಚೈನೀಸ್, ಇಂಗ್ಲೀಷ್, ಬಂಗಾಳಿ, ಹಿಂದಿ ಮೊದಲಾದ ಭಾಷೆಗಳಿಂದ ಸಾಕಷ್ಟು ಕೃತಿಗಳು ಅನುವಾದಗೊಂಡಿವೆ.

### ನರ್ಸರಿ ಗೀತೆಗಳು

ಮಕ್ಕಳನ್ನು ಸಂತೋಷಪಡಿಸಲು, ಸಮಾಧಾನಪಡಿಸಲು ಸಾಧ್ಯವಾಗುವ ಮನೋಹರವಾದ ಸಾಹಿತ್ಯ ಪ್ರಕಾರವೇ ನರ್ಸರಿ ಗೀತೆಗಳು. ಪರಿಸರ ಗೀತೆಗಳು, ಅಕ್ಷರ ಗೀತೆಗಳು, ಸಂಖ್ಯಾ ಗೀತೆಗಳು, ಅಭಿನಯ ಗೀತೆಗಳು, ಅನುಕರಣ ಗೀತೆಗಳು, ಒಗಟಿನ ಗೀತೆಗಳು ಇತ್ಯಾದಿಗಳು ಈ ವಿಭಾಗದಲ್ಲಿ ಸೇರುತ್ತವೆ.

### ಮಕ್ಕಳ ಕವಿತೆಗಳು

ಕನ್ನಡದಲ್ಲಿ ಹಲವಾರು ಮಂದಿ ಮಕ್ಕಳ ಹಾಡುಗಳನ್ನು ಬರೆದಿದ್ದಾರೆ. ಪಂಜೆ ಮಂಗೇಶರಾಯರು, ಜಿ.ಪಿ. ರಾಜರತ್ನಂ, ಕುವೆಂಪು, ಸಿದ್ದಯ್ಯ ಪುರಾಣಿಕ, ವೆಂಕಟರಾಜ ಪುಣಿಂಚಿತ್ತಾಯ ಮೊದಲಾದವರು ಇವರಲ್ಲಿ ಪ್ರಮುಖರು. ಗೋವಿನ ಹಾಡು, ತಿರುಕನ ಕನಸು, ತುತ್ತೂರಿ, ಕಡಲೆಪುರಿ, ಕಿಂದರಿ ಜೋಗಿ, ನನ್ನ ಕುದುರೆ ಮೊದಲಾದವು ಪ್ರಸಿದ್ಧ ಮಕ್ಕಳ ಹಾಡುಗಳಾಗಿವೆ.

### ಮಕ್ಕಳು ಮತ್ತು ಚಿತ್ರಕತೆಗಳು

ಕತೆಗಳು ಚಿತ್ರರೂಪದಲ್ಲಿ ಬರುತ್ತವೆಯೆಂದರೆ ಒಂದು ಚಿತ್ರ ಅಥವಾ ಹಲವು ಚಿತ್ರಗಳನ್ನು ಕಂಡು ಆ ಚಿತ್ರಗಳಿಗೆ ಸಂಬಂಧಿಸಿದ ಕತೆಗಳನ್ನು ಆಸ್ವಾದಿಸಲು ಸಾಧ್ಯವಾಗುತ್ತದೆ ಎಂದರ್ಥ. ಚಿತ್ರಗಳ ಮೂಲಕ ಕತೆಗಳಿಗೆ, ಕತೆಗಳ ಮೂಲಕ ಚಿತ್ರಗಳಿಗೆ ತಲುಪಲು ಸಾಧ್ಯವಾಗುವ ವಿಶೇಷ ರಚನೆಗಳನ್ನು 'ಚಿತ್ರಕತೆ'ಗಳೆಂದು ಕರೆಯಬಹುದು. 1970ರ ನಂತರ ಚಿತ್ರಕತೆಗಳು ಬೆಳಕಿಗೆ ಬಂದುವು. ಚಿತ್ರಕತೆಗಳು ಮಕ್ಕಳ ಮನಸ್ಸನ್ನು ಸೂರೆಗೊಂಡುವು.

### ಮಕ್ಕಳ ಸಾಹಿತ್ಯದಲ್ಲಿ ಹಾಸ್ಯ

ಮಕ್ಕಳ ಸಾಹಿತ್ಯದಲ್ಲಿ ಹಾಸ್ಯವನ್ನು ಪ್ರಯೋಗಿಸುವಾಗ ಗಮನಿಸಬೇಕಾದ ಪ್ರಧಾನ ವಿಚಾರವೆಂದರೆ, ಹಾಸ್ಯ ಅಂಶಗಳನ್ನು ಗುರುತಿಸಿಕೊಂಡು ಆಸ್ವಾದಿಸಲು ಮಕ್ಕಳಿಗೆ ಸಾಧ್ಯವಾಗಬೇಕು. ಮಕ್ಕಳನ್ನು ನಕ್ಕು ನಗಿಸುವ ಹಾಸ್ಯಕೃತಿಗಳು ಮಕ್ಕಳ ಸಾಹಿತ್ಯದಲ್ಲಿವೆ.

### ಮಕ್ಕಳ ಸಾಹಿತ್ಯ ಮತ್ತು ಮನೋವಿಜ್ಞಾನ

ಶಾರೀರಿಕ ಬೆಳವಣಿಗೆಗೆ ಆಹಾರ ಮತ್ತು ವ್ಯಾಯಾಮಗಳು ಹೇಗೆ ಅಗತ್ಯವೋ ಹಾಗೆಯೇ ಮಾನಸಿಕ ಬೆಳವಣಿಗೆಗೆ ಮತ್ತು ವ್ಯಕ್ತಿತ್ವ ವಿಕಾಸಕ್ಕೆ ಅನುಗುಣವಾದ ಸನ್ನಿವೇಶಗಳು ಅಗತ್ಯ. ಅವುಗಳಲ್ಲಿ ಪ್ರಧಾನ ಸ್ಥಾನವು ಮಕ್ಕಳ ಪಠ್ಯಪುಸ್ತಕ ಮತ್ತು ಅವರು ಓದುವ ನಿಯತಕಾಲಿಕಗಳಾಗಿವೆ. ಇಲ್ಲಿ ಮಕ್ಕಳ ಸಾಹಿತ್ಯದ ಮಹತ್ವ ವ್ಯಕ್ತವಾಗುತ್ತದೆ. ಈ ಕ್ಷೇತ್ರದಲ್ಲಿ ಸಾಹಿತ್ಯಾಭಿರುಚಿ ಮತ್ತು ಜ್ಞಾನವನ್ನು ಒದಗಿಸುವುದಕ್ಕಿಂತಲೂ ಬುದ್ಧಿವಿಕಾಸಕ್ಕೆ ಮಹತ್ವ ನೀಡಲಾಗುತ್ತದೆ. ಜೊತೆಗೆ ಮಕ್ಕಳಲ್ಲಿ ಮಾದರಿಯಾಗಿರಬೇಕಾದ ವ್ಯಕ್ತಿ ವಿಕಾಸಕ್ಕೂ ಮಕ್ಕಳ ಸಾಹಿತ್ಯವು ಅವಕಾಶ ಕಲ್ಪಿಸಬೇಕು.

### ಮಕ್ಕಳು ಮತ್ತು ಸಾಮಾನ್ಯ ವಿಜ್ಞಾನ

ಸಾಮಾನ್ಯ ವಿಜ್ಞಾನ ಏನು? ಯಾಕೆ? – ಒಬ್ಬ ವ್ಯಕ್ತಿಯನ್ನು ತನ್ನ ಸುತ್ತಲಿನ ಪ್ರಪಂಚದೊಂದಿಗೆ ಮೇಳೈಸುವ ವಿಚಾರಗಳ ಕೂಟವೇ ಸಾಮಾನ್ಯ ವಿಜ್ಞಾನ. ಪೌರಪ್ರಜ್ಞೆ, ಪ್ರಕೃತಿಸ್ನೇಹ, ಮಾನವೀಯತೆ, ನೀತಿನ್ಯಾಯ ಅರಿವು ಇತ್ಯಾದಿಗಳು ಮಕ್ಕಳಲ್ಲಿ ಬೆಳೆದು ಬರಬೇಕು. ಚೆಲ್ಲಾಪಿಲ್ಲಿಯಾಗಿರುವ ಜ್ಞಾನದ ತುಣುಕುಗಳೊಳಗಿನ ಸಂಬಂಧವನ್ನು ತಿಳಿದುಕೊಳ್ಳುವುದೇ ಜ್ಞಾನದ ಉಗಮ. ಅಲ್ಲಿಗೆ ಮುಗ್ಧ ಮಕ್ಕಳನ್ನು ಕೊಂಡೊಯ್ಯುವ ಪುಸ್ತಕಗಳು ಮತ್ತು ದೃಶ್ಯ–ಶ್ರಾವ್ಯ ಸಂಚಿಕೆಗಳು, ಕಮ್ಮಟಗಳು ಒಳಗೊಂಡಿರುವವುಗಳೇ ಈ ಕ್ಷೇತ್ರದ ಮಕ್ಕಳ ಸಾಹಿತ್ಯ.

### ಮಕ್ಕಳ ಸಿನೆಮ ಮತ್ತು ನಾಟಕ

ಮಕ್ಕಳಿಗಾಗಿ ನಿರ್ಮಿಸುವ ನಾಟಕ ಹಾಗೂ ಸಿನೆಮಗಳಿಗೆ ಶೈಕ್ಷಣಿಕ ಮಹತ್ವವಿದೆ. ಮಕ್ಕಳಿಗಾಗಿ ಮಂಡಿಸಲಾಗುವ ನಾಟಕ, ಸಿನೆಮಗಳನ್ನು ವಿಶೇಷ ಶ್ರದ್ಧೆಯಿಂದ ತಯಾರಿಸಲಾಗುತ್ತದೆ. ಅವುಗಳಿಗಾಗಿ ಸ್ಕ್ರಿಪ್ಟ್ ಬರೆಯುವ ಸಾಹಿತಿಗಳು ಮಕ್ಕಳೊಂದಿಗೆ ಬೆರೆತು ಅವರ ರಸಾನುಭವ ಕ್ಷೇತ್ರಗಳನ್ನು ತಿಳಿದುಕೊಂಡು ಬರೆಯುತ್ತಾರೆ. ಹಾಗಾದರೆ ಮಾತ್ರ ಅದು ಜಯ ಗಳಿಸುತ್ತದೆ. ಮಕ್ಕಳ ಕಲಾಭಿರುಚಿಯನ್ನು ಹೆಚ್ಚಿಸುವುದರೊಂದಿಗೆ ಕಲೆಗೆ ಸಂಬಂಧಿಸಿದ ವಿವಿಧ ವಿಚಾರಗಳಲ್ಲಿ ತಾಂತ್ರಿಕ ಜ್ಞಾನವನ್ನು ಗಳಿಸಿಕೊಳ್ಳಲು ಇಂತಹ ಮಕ್ಕಳ ಸಾಹಿತ್ಯಕ್ಕೆ ಸಾಧ್ಯವಾಗುತ್ತದೆ.

- ಕತೆ, ಕವಿತೆ, ಜೀವನಚರಿತ್ರೆ, ವಿಜ್ಞಾನ ಮೊದಲಾದ ಸಾಮಾನ್ಯ ವಿಷಯಗಳಿಗೆ ಸಂಬಂಧಿಸಿದ ಮಕ್ಕಳ ಸಾಹಿತ್ಯಗಳಿವೆ. ಮಕ್ಕಳ ಸಾಹಿತ್ಯವನ್ನು ಸಂಪನ್ನಗೊಳಿಸಿದ ಪಂಜೆಯವರನ್ನು ಸ್ಮರಿಸಲೇ ಬೇಕು. ಅಲ್ಲದೆ ಮಕ್ಕಳ ಮನಸ್ಸನ್ನು ಸೂರೆಗೊಂಡ ಜಿ.ಪಿ. ರಾಜರತ್ನಂ, ಕುವೆಂಪು ಮೊದಲಾದವರು ಮಕ್ಕಳ ಸಾಹಿತ್ಯಕ್ಕೆ ವಿಶೇಷ ಕೊಡುಗೆಗಳನ್ನು ನೀಡಿದರು.

### ಮಕ್ಕಳ ಸಾಹಿತ್ಯವು ಒಳಗೊಳ್ಳುವ ವಿಭಿನ್ನ ಕ್ಷೇತ್ರಗಳು

ಇವುಗಳನ್ನು ಈ ಕೆಳಗಿನಂತೆ ವಿಶ್ಲೇಷಿಸಬಹುದು.

**ಮಕ್ಕಳ ಸಾಹಿತ್ಯ**

| **ಸೃಜನಶೀಲ ಸಾಹಿತ್ಯ** | **ವಿಜ್ಞಾನ ಸಾಹಿತ್ಯ** |
|---|---|
| ಗದ್ಯ, ಕತೆ, ಕಾದಂಬರಿ | ಪುಸ್ತಕಗಳು (ಒಂದು ಕೃತಿ, ಧಾರಾವಾಹಿ) |
| ಕವಿತೆ | ವಿಷಯ ಚಿತ್ರೀಕರಣ |
| ನಾಟಕ, ಚಿತ್ರಕತೆ | ಸಿನೆಮದ ವಸ್ತು |
| ಭಾಷೇತರ (ಚಿತ್ರ, ಶಬ್ದಲೇಖನ) | ಜೀವನಚರಿತ್ರೆ |
| | ಆಕರ ಗ್ರಂಥಗಳು |
| | ಶಬ್ದಕೋಶಗಳು, ವಿಜ್ಞಾನ ಕೋಶಗಳು |
| | ವಿವರಣೆಯಿರುವ, ಇಲ್ಲದಿರುವ ಚಿತ್ರಗಳು |

### ಮಕ್ಕಳ ಸಾಹಿತ್ಯದ ಭಾಷೆ

ವಿಭಿನ್ನ ಪ್ರಾಯದ ಮಕ್ಕಳ ಅಥವಾ ವಿವಿಧ ತರಗತಿಗಳಲ್ಲಿ ಕಲಿಯುವ ಮಕ್ಕಳ ಭಾಷಾ ಮಟ್ಟದ ಕುರಿತು ಸ್ಪಷ್ಟವಾದ ತಿಳುವಳಿಕೆಯಿರಬೇಕು. ಭಾಷೆಯ ಎಲ್ಲ ಹಂತ ಮತ್ತ ವ್ಯಾಪ್ತಿಯನ್ನು ಒಳಗೊಂಡು ಈ ಮಟ್ಟವನ್ನು ಕಂಡುಕೊಳ್ಳಬೇಕು. ಅಕ್ಷರಗಳು, ಲಿಪಿ, ಸಂಯುಕ್ತ ವ್ಯಂಜನಗಳು, ಪದ, ವಾಕ್ಯರಚನೆ, ಶೈಲಿ ಇತ್ಯಾದಿ ಭಾಷೆಯ ವಿವಿಧ ಹಂತಗಳಲ್ಲಿ ಯಾವುದನ್ನು ತಿಳಿದಿದ್ದಾರೆ, ಇನ್ನು ತಿಳಿದುಕೊಳ್ಳಲು ಬಾಕಿ ಯಾವುದು ಇತ್ಯಾದಿಗಳನ್ನು ಅರಿತುಕೊಳ್ಳಬೇಕು.

ಮಕ್ಕಳ ಸಾಹಿತ್ಯದ ಭಾಷೆಯು 'ಆಡುಭಾಷೆ'ಗೆ ಹತ್ತಿರವಿರಬೇಕು. ಅದು ಸುಲಭದಲ್ಲಿ ಆಶಯಗ್ರಹಣಕ್ಕೆ ಅನುಕೂಲವಾಗುತ್ತದೆ. ಮಕ್ಕಳೊಂದಿಗೆ ಮಕ್ಕಳ ಭಾಷೆಯಲ್ಲಿಯೇ ಮಾತಾಡಬೇಕು. ಮಕ್ಕಳ ಸಾಹಿತ್ಯದಲ್ಲಿ ಆಯಾ ಹಂತದ ಭಾಷೆಗಳಲ್ಲಿ ವ್ಯವಹರಿಸಬೇಕು.

ಮಕ್ಕಳ ಭಾಷೆ 'ನೇರ ಬಾ ನೇರಹೋಗು' ಎಂಬ ರೀತಿಯದ್ದಲ್ಲ. ಅದು ಲವಲವಿಕೆಯಿಂದ ಕೂಡಿರುತ್ತದೆ. ಚಿಕ್ಕ ಮಕ್ಕಳ ಕತೆಗಳಲ್ಲಿ ಪದಗಳ ಆವರ್ತನೆಯಿರುತ್ತದೆ. ಉದಾ: "ಒಂದಾನೊಂದು ಕಾಲದಲ್ಲಿ ಕರ್ನಾಟಕ ಎಂಬ ದೇಶದಲ್ಲಿ ಜೀರಿಗೆ ಜೀರಿಗೆ ಎಂಬ ಬೀಜವನ್ನು ಬಿತ್ತಿದರು" ಮಕ್ಕಳ ಸಾಹಿತ್ಯದ ಭಾಷೆಗೆ ಸಾಮಾನ್ಯವಾಗಿ ಸ್ಪಷ್ಟತೆ ಬೇಕಾಗಿಲ್ಲ, ಕತೆ ಹೇಳುವಾಗ ಮಗುವನ್ನು ಕತೆಯ ಭಾಗವಾಗಿ ಹೇಳುವುದರಿಂದ ಅವರಿಗೆ ಆಸಕ್ತಿ ಹೆಚ್ಚುತ್ತದೆ. ಅದೇ ರೀತಿ ಸಂಭಾಷಣೆಗೆ ಹೆಚ್ಚಿನ ಪ್ರಾಧಾನ್ಯ ನೀಡಬಹುದು. ಮಕ್ಕಳ ಸಾಹಿತ್ಯದಲ್ಲಿ ಸರಳವಾದ ಆಖ್ಯಾನ ರೀತಿಯನ್ನು ಬಳಸಬೇಕು. ಹೆಚ್ಚು ಕಷ್ಟದಾಯಕವಲ್ಲದ ಬಹುಪಾಲು ಕಿರು ವಿವರಣೆಯಿಂದ ಕೂಡಿದ ಕಠಿಣಪದಗಳಿಲ್ಲದ ಶೈಲಿ ಅವರಿಗೆ ಇಷ್ಟವಾಗುತ್ತದೆ. ಘುಂ ಘುಂ, ಶ್ಯ್, ಶ್ಯ್ ಮೊದಲಾದ ಶಬ್ದಗಳೂ ಅವರಿಗೆ ಇಷ್ಟ. ಕಥಾಪಾತ್ರಗಳ ಹೆಸರುಗಳು ವಿಶೇಷಣದಿಂದ ಕೂಡಿರಬೇಕು. (ಉದಾ: ಬಲಭೀಮ, ಕಿಲಾಡಿ ಕಿಟ್ಟ ಇತ್ಯಾದಿ....) ಹಿರಿಯರ ಭಾಷೆಯಲ್ಲಿ ಉಪಯೋಗಿಸುವ ಸರ್ವನಾಮಗಳು ಮಕ್ಕಳಿಗೆ ಇಷ್ಟವಲ್ಲ. ಆದ್ದರಿಂದ "ಪುಟ್ಟನ ತಂದೆ ಪುಟ್ಟನಿಗೆ ಏನು ತಂದಿದ್ದಾರೆ?", 'ಪುಟ್ಟಿಗೆ ಪುಟ್ಟಿಯ ಅಮ್ಮನಲ್ಲಿ ಸಿಟ್ಟು' ಇತ್ಯಾದಿ ಪ್ರಯೋಗಗಳು ಅವರಿಗೆ ಇಷ್ಟವಾಗುತ್ತದೆ.

ರಾಜಭಾಷೆ, ರಾಕ್ಷಸಭಾಷೆ, ಮಂತ್ರವಾದಿ ಭಾಷೆ, ಕಾಡುಜನರ ಭಾಷೆ ಮೊದಲಾದ ಕೃತಕ ಭಾಷೆಗಳು ಮಕ್ಕಳ ಸಾಹಿತ್ಯದಲ್ಲಿ ಅತ್ಯಗತ್ಯ. 'ಹಾಯ್ !' 'ಹಾಂ!' 'ಅಯ್ಯೋ!' ಅಮ್ಮಾ..... ಇತ್ಯಾದಿ ಪ್ರಯೋಗಗಳು.... ಪರ್ವತದಷ್ಟು ಎತ್ತರದ ರಾಕ್ಷಸ, ಬಟ್ಟಲ ಕಣ್ಣು, ನೆಲಕ್ಕೆ ತಾಗುವ ತಲೆಕೂದಲು ಇತ್ಯಾದಿ ಅತಿಶಯೋಕ್ತಿಯ ಪ್ರಯೋಗಗಳು ಮಕ್ಕಳ ಸಾಹಿತ್ಯದಲ್ಲಿದ್ದರೆ ಮಕ್ಕಳಿಗೆ ಇಷ್ಟವಾಗುವುದರಲ್ಲಿ ಸಂಶಯವಿಲ್ಲ.

## ಮಕ್ಕಳ ಸಾಹಿತ್ಯದ ಕಥಾಪಾತ್ರಗಳು

ಚಿಕ್ಕ ಮಕ್ಕಳಿಗೆ ಮೃಗಗಳು, ಪರಿಚಿತ ವಸ್ತುಗಳು ಮತ್ತು ಜೀವಿಗಳು ಕಥಾಪಾತ್ರವಾಗಿರುವವುಗಳು ಹೆಚ್ಚು ಇಷ್ಟ. ಈ ಕಥಾಪಾತ್ರಗಳೂ ಮಾತನಾಡುವಂತಿರಬೇಕು. ಮೃಗಗಳಲ್ಲಿ ಅಸಾಧಾರಣ ಸ್ವಭಾವವಿರುವುದು ಅವರಿಗೆ ಇನ್ನಷ್ಟು ಇಷ್ಟವಾಗುತ್ತದೆ. ಕಣ್ಣಿನಿಂದ ಬೆಂಕಿಯುಗುಳುವ ಕುದುರೆ ಹಾರುವ ಆನೆ, ಬಾಲ ಉದ್ದವಾಗುವ ಮಂಗ ಮೊದಲಾದ ವಿಶೇಷ ಸ್ವಭಾವದ ಕಥಾಪಾತ್ರಗಳು ಮಕ್ಕಳ ಸಾಹಿತ್ಯ ಕೃತಿಗಳಲ್ಲಿ ಸಾಮಾನ್ಯವಾಗಿ ಇವೆ. ಪಕ್ಷಿಗಳು, ಮೃಗಗಳು, ಮಕ್ಕಳು, ಅಲೌಕಿಕ ದೇವತೆಗಳು, ರಾಜರು, ರೂಪವಿಲ್ಲದವರು, ಅದೃಶ್ಯರು, ಕುಳ್ಳಗಿನ ಮನುಷ್ಯರು ಇತ್ಯಾದಿಗಳು ಮಕ್ಕಳ ಸಾಹಿತ್ಯ ಕೃತಿಗಳ ಕಥಾಪಾತ್ರಗಳಾಗಿರುತ್ತವೆ. ಅದೇ ರೀತಿ ಬೊಂಬೆಗಳನ್ನು, ಹಲಸಿನೆಲೆಯ ಎತ್ತುಗಳನ್ನು, ತೊಟ್ಟಿಲಿನಲ್ಲಿರುವ ತಮ್ಮನನ್ನು ಒಂದೇ ರೀತಿಯಲ್ಲಿ ಮಕ್ಕಳು ಪರಿಗಣಿಸುತ್ತಾರೆ. ತಾನು ಪ್ರಧಾನ ಕಥಾಪಾತ್ರವಾಗಿ ಅಥವಾ ಕಥಾಪಾತ್ರದ ಜೊತೆಗೆ ಸಂಚರಿಸಿ ಮಕ್ಕಳು ಆಸ್ವಾದಿಸುತ್ತಾರೆ.

ಹಳೆಯ ಕಾಲ ಮತ್ತು ಆ ಕಾಲದ ಪ್ರೌಢಿಮೆಯನ್ನು ಕತೆಗಳಲ್ಲಿ ಕಾಣುವುದು ಮಕ್ಕಳಿಗೆ ಇಷ್ಟ. ರಾಜ, ಮಂತ್ರಿ, ಅರಮನೆ, ರಥ, ಮಾಳಿಗೆಮನೆ ಇತ್ಯಾದಿಗಳು ಉದಾಹರಣೆಗಳಾಗಿವೆ. ಕುಳ್ಳ ಮನುಷ್ಯರು ಮಕ್ಕಳ ಸಾಹಿತ್ಯದ ಪ್ರಧಾನ ಕಥಾಪಾತ್ರಗಳಾಗಿವೆ. ಕುವೆಂಪುರವರ ಕಿಂದರಿ ಜೋಗಿ, ಬಾಲಮಂಗಳದ ಡಿಂಗ. ಮೊದಲಾದ ಕಥಾಪಾತ್ರಗಳು ಮಕ್ಕಳ ಮನಸ್ಸಿನಲ್ಲಿ ಸದಾ ನಲಿದಾಡುತ್ತವೆ. ಇಂತಹ ಕಥಾಪಾತ್ರಗಳು, ಅವುಗಳ ಸೃಷ್ಟಿಕರ್ತರು, ರಚನೆಗಳು ಇತ್ಯಾದಿಗಳನ್ನು ಕಂಡುಕೊಳ್ಳುವುದು ಆಸಕ್ತಿದಾಯಕ ಚಟುವಟಿಕೆಯಾಗಬಹುದು.

## ಕೇರಳ ರಾಜ್ಯ ಬಾಲಸಾಹಿತ್ಯ ಸಂಸ್ಥೆ

ಮಕ್ಕಳ ಸಾಹಿತ್ಯ ಕ್ಷೇತ್ರಕ್ಕೆ ಶಕ್ತಿ ಮತ್ತು ಪ್ರೋತ್ಸಾಹ ನೀಡುವುದಕ್ಕಾಗಿ 1981ರಲ್ಲಿ ಅಸ್ತಿತ್ವಕ್ಕೆ ಬಂದ ಸಂಸ್ಥೆಯೇ ಕೇರಳ ರಾಜ್ಯ ಬಾಲ ಸಾಹಿತ್ಯ ಸಂಸ್ಥೆ. ಇಲ್ಲಿಂದ ಮಲಯಾಳದ ಪ್ರಸಿದ್ಧ ಬಾಲಸಾಹಿತ್ಯ ಮಾಸಿಕವಾದ 'ತಳಿರ್' ಪ್ರಕಟವಾಗುತ್ತದೆ. ಕೇರಳ ಸರಕಾರದ ಸಂಸ್ಕೃತಿ ಇಲಾಖೆಯ ಆಶ್ರಯದಲ್ಲಿರುವ ಈ ಸಂಸ್ಥೆಯು ಮಕ್ಕಳಿಗಾಗಿ ಅನೇಕ ಪುಸ್ತಕಗಳನ್ನು ಮತ್ತು ನಿಯತಕಾಲಿಕಗಳನ್ನು ಪ್ರಕಟಿಸುತ್ತದೆ. ಎಂಟು ಭಾಗಗಳಾಗಿ ಪ್ರಕಟಿಸಿದ ಬಾಲಕೈರಳಿ ವಿಜ್ಞಾನಕೋಶವು ಈ ಸಂಸ್ಥೆಯ ಪ್ರಧಾನ ಪ್ರಕಟಣೆಯಾಗಿದೆ.

ಅಲ್ಲದೆ ಪಠ್ಯಪುಸ್ತಕಗಳಿಗೆ ಅನುಬಂಧವಾಗಿ ಪೂರಕ ಓದಿಗಿರುವ ಕೃತಿಗಳನ್ನು ಪ್ರಕಟಿಸುತ್ತಿದೆ. ಅಕ್ಷರ ಕೈರಳಿ, ದರ್ಶನ ಕೈರಳಿ, ಚರಿತ್ರ ಕೈರಳಿ, ವಿಜ್ಞಾನ ಕೈರಳಿ, ಶಾಸ್ತ್ರ ಕೈರಳಿ ಮೊದಲಾದ ವಿವಿಧ ಧಾರಾವಾಹಿಗಳಲ್ಲಿ ಅತೀ ಹೆಚ್ಚು ಕೃತಿಗಳನ್ನು ಈ ಸಂಸ್ಥೆಯು ಪ್ರಕಟಿಸಿದೆ. ವಿಶ್ವ ಶಾಸ್ತ್ರಗಳ ಪುನರಾಖ್ಯಾನಗಳಾದ ವಿಶ್ವಕೈರಳಿ ಧಾರಾವಾಹಿಯು ತುಂಬ ಪ್ರಸಿದ್ಧವಾಗಿದೆ.

ಮಲಯಾಳದಲ್ಲಿ ಮಕ್ಕಳ ಸಾಹಿತ್ಯವನ್ನು ಪ್ರೋತ್ಸಾಹಿಸಲು ಬಾಲಸಾಹಿತ್ಯ ಪುರಸ್ಕಾರಗಳನ್ನು ನೀಡುವುದಲ್ಲದೆ ಮಕ್ಕಳಲ್ಲಿ ಓದುವ ಹವ್ಯಾಸವನ್ನು ಪ್ರೋತ್ಸಾಹಿಸಲು 'ತಳಿರ್ ವಾಚನ ಸ್ಪರ್ಧೆ'ಗಳನ್ನು ಈ ಬಾಲಸಾಹಿತ್ಯ ಸಂಸ್ಥೆ ನಡೆಸುತ್ತಿದೆ. ಸರಕಾರದ ಸಂಸ್ಕೃತಿ ಇಲಾಖೆಯ ಸಚಿವರು ಇದರ ಚೆಯರ್‌ಮಾನ್ ಆಗಿದ್ದಾರೆ.

### ಚಟುವಟಿಕೆಗಳು

- ಮಕ್ಕಳ ಸಾಹಿತ್ಯ ಕೃತಿಗಳನ್ನು ಆಯ್ಕೆ ಮಾಡಿ ಓದಿ ಓದಿನ ಟಿಪ್ಪಣಿ, ಆಸ್ವಾದನ ಟಿಪ್ಪಣಿಗಳನ್ನು ಸ್ವಂತ ಅಭಿಪ್ರಾಯದೊಂದಿಗೆ ದಾಖಲಿಸುವುದು.
- ಒಂದರಿಂದ ಎಂಟರವರೆಗಿನ ತರಗತಿಗಳ ಪಠ್ಯಪುಸ್ತಕದಲ್ಲಿರುವ ಮಕ್ಕಳ ಸಾಹಿತ್ಯದಲ್ಲಿ ಒಳಗೊಳ್ಳುವ ಪಾಠಗಳ ಓದು, ಮಂಡನೆ, ಮೌಲ್ಯನಿರ್ಣಯ
- ಓದಿದ ಮಕ್ಕಳ ಸಾಹಿತ್ಯ ಕೃತಿಗಳು, ಮಕ್ಕಳ ಸಾಹಿತ್ಯದಲ್ಲಿ ಬರುವ ಪಾಠಗಳು, ಆಕರ ಗ್ರಂಥಗಳು ಇತ್ಯಾದಿಗಳನ್ನು ಓದಿ ಅವುಗಳ ಭಾಷೆ, ವಸ್ತು ಇತ್ಯಾದಿಗಳು ಮಕ್ಕಳ ಸಾಹಿತ್ಯಕ್ಕೆ ಹೊಂದಿಕೊಳ್ಳುತ್ತವೆಯೇ ಎಂಬ ವಿಷಯದಲ್ಲಿ ಚರ್ಚೆ. ಚರ್ಚೆಯ ಆಧಾರದಲ್ಲಿ ಚರ್ಚಾ ಟಿಪ್ಪಣಿ ತಯಾರಿಸಬೇಕು.
- ಮಕ್ಕಳ ಸಾಹಿತ್ಯ ಕೃತಿಗಳನ್ನು ಪರಿಶೀಲಿಸಿ ಅವು ಮಕ್ಕಳಲ್ಲಿ ಜಿಜ್ಞಾಸೆ, ಓದು, ಸೃಜನಶೀಲತೆಗಳನ್ನು ಹೇಗೆ ಬೆಳೆಸುತ್ತವೆಯೆಂಬುದನ್ನು ಕಂಡುಕೊಳ್ಳುವುದು (ಪಂಚತಂತ್ರದ ಕತೆಗಳು, ಈಸೋಪನ ಕತೆಗಳು ಇತ್ಯಾದಿಗಳನ್ನು ಪರಿಶೀಲಿಸಬಹುದು)
- ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿ ಲಭಿಸುವ ಚಿತ್ರಕತೆ, ಸಿನೇಮ, ನಾಟಕ, ಮಕ್ಕಳಿಗಾಗಿ ನಿರ್ಮಿಸುವ ವೀಡಿಯೋಗಳು, ಇತ್ಯಾದಿಗಳ ಸಂಗ್ರಹ – ICT ಸಾಧ್ಯತೆಗಳನ್ನು ಬಳಸಿ ಪ್ರದರ್ಶನ – ಮೌಲ್ಯನಿರ್ಣಯ.
- ನರ್ಸರಿ ಗೀತೆಗಳು, ಶಿಶುಗೀತೆಗಳು, ನೀತಿಕತೆಗಳು, ಮಕ್ಕಳ ವೈಜ್ಞಾನಿಕ ಕೃತಿಗಳು, ಇತಿಹಾಸ ಮತ್ತು ಮಕ್ಕಳ ಸಾಹಿತ್ಯ, ಮಕ್ಕಳ ಸಾಹಿತ್ಯ ರಚಿಸಿದ ಪ್ರಸಿದ್ಧ ಸಾಹಿತಿಗಳು, ಕೃತಿಗಳು ಇತ್ಯಾದಿಗಳ ಸಂಗ್ರಹ (ಗುಂಪು ಚಟುವಟಿಕೆಯಾಗಿ ಕೈಗೆತ್ತಿಕೊಂಡು, ಪ್ರತಿಯೊಂದು ಗುಂಪಿನವರು ಒಂದೊಂದು ಕ್ಷೇತ್ರವನ್ನು ಆರಿಸಿಕೊಂಡು, ಮಾಹಿತಿಗಳನ್ನು ಪರಸ್ಪರ ಹಂಚಿಕೊಂಡು ಈ ಚಟುವಟಿಕೆಯನ್ನು ಯಶಸ್ವಿಯಾಗಿ ನಡೆಸಬಹುದು)

  ಇದನ್ನು ವಿಚಾರಗೋಷ್ಠಿಯಾಗಿಯೂ ನಡೆಸಬಹುದು.

### ಮಕ್ಕಳ ಸಾಹಿತ್ಯ ಕೃತಿಗಳು ಮತ್ತು ನಿಯತಕಾಲಿಕಗಳ ತರಗತಿ ಕೋಣೆಯ ಸಾಧ್ಯತೆಗಳು

### ಮಕ್ಕಳ ನಿಯತಕಾಲಿಕಗಳು

ಕನ್ನಡ ನಿಯತಕಾಲಿಕಗಳು ಹತ್ತೊಂಭತ್ತನೇ ಶತಮಾನದ ವರದಾನಗಳಾಗಿವೆ. ಆಧುನಿಕ ಶಿಕ್ಷಣದ ಪ್ರಚಾರವನ್ನು ಗುರಿಯಾಗಿರಿಸಿ ಅನೇಕ ಶೈಕ್ಷಣಿಕ ಮಾಸಿಕಗಳು ಪ್ರಕಟವಾದವು. ಬಾಲ್ಯ ಕೌಮಾರ್ಯ ಕಾಲಗಳು ಮಕ್ಕಳಿಗೆ ಸಂಬಂಧಿಸಿ ಅವರ ವ್ಯಕ್ತಿತ್ವ ವಿಕಾಸಕ್ಕೆ ಭದ್ರ ಬುನಾದಿಯನ್ನು ಹಾಕುವ ಕಾಲಗಳಾಗಿವೆ. ಗೆಳೆಯರು ಮತ್ತು ಅವರು ಓದುವ ಪುಸ್ತಕಗಳು ಅವರ ಮೇಲೆ ಪ್ರಭಾವ ಬೀರುವ ಪ್ರಧಾನ ಘಟಕಗಳಾಗಿವೆ. ಮಕ್ಕಳು ಬೆಳೆಯುವ ಈ ಹಂತದಲ್ಲಿ ಅವರ ಪ್ರಾಯಕ್ಕೆ ಅನುಸರಿಸಿದ ಕೃತಿಗಳು

ಓದಲು ಸಿಗಬೇಕು. ಮಕ್ಕಳಿಗೆ ಪುಸ್ತಕಗಳನ್ನು ಆಯ್ಕೆ ಮಾಡಿ ಕೊಡುವಾಗ ಅವರ ಪ್ರಾಯವನ್ನು ಪ್ರತ್ಯೇಕವಾಗಿ ಗಮನಿಸಬೇಕು. ಹೀಗೆ ವಿವಿಧ ಪ್ರಾಯದವರಿಗೆ ಅಗತ್ಯವಾದ ನಿಯತಕಾಲಿಕಗಳು ಇಂದು ಕನ್ನಡದಲ್ಲಿ ಧಾರಾಳ ಇವೆ.

ಮಕ್ಕಳ ಸಾಹಿತ್ಯವನ್ನು ಮಕ್ಕಳ ಬೆಳವಣಿಗೆಯ ಹಂತಕ್ಕನುಸಾರವಾಗಿ ಶಿಶುಸಾಹಿತ್ಯ, ಬಾಲಸಾಹಿತ್ಯ, ಕಿಶೋರ ಸಾಹಿತ್ಯ, ಕೌಮಾರ ಸಾಹಿತ್ಯ ಎಂಬುದಾಗಿ ವಿಭಾಗಿಸಬಹುದು. ಒಂದರಿಂದ ಆರು ವರ್ಷ ಪ್ರಾಯದವರೆಗಿನ ಮಕ್ಕಳದ್ದು ಶಿಶುಸಾಹಿತ್ಯ. ನರ್ಸರಿ ಗೀತೆಗಳು, ಅರ್ಥಕ್ಕೆ ಪ್ರಾಧಾನ್ಯವಿಲ್ಲದ ಪ್ರಾಸಪ್ರಧಾನವಾದ ಗೀತೆಗಳು ಈ ಹರೆಯದ ಮಕ್ಕಳಿಗೆ ಇಷ್ಟ. ಆರರಿಂದ ಹತ್ತು ವರ್ಷ ಪ್ರಾಯದವರೆಗಿನ ಮಕ್ಕಳಿಗಿರುವ ಬಾಲ ಸಾಹಿತ್ಯದಲ್ಲಿ ಕಿರು ಕವಿತೆಗಳು, ಯಕ್ಷಿಕತೆಗಳು, ಪ್ರಕೃತಿ ಕಥೆಗಳು, ಚರಿತ್ರೆ ಕತೆಗಳು, ವಿನೋದ ಕತೆಗಳು, ಪುರಾಣ ಕತೆಗಳು ಮೊದಲಾದುವು ಒಳಗೊಳ್ಳುತ್ತದೆ. ಹತ್ತರಿಂದ ಹನ್ನೆರಡು ವರ್ಷ ಪ್ರಾಯದ ಮಕ್ಕಳ ಕಿಶೋರ ಸಾಹಿತ್ಯದಲ್ಲಿ ಕಿರು ಜೀವನ ಚರಿತ್ರೆಗಳು, ಬಾಲಕತೆಗಳು, ಬಾಲಕವಿತೆಗಳು ಇತ್ಯಾದಿಗಳು ಒಳಗೊಳ್ಳುತ್ತವೆ. ಹನ್ನೆರಡರಿಂದ ಹದಿನಾರು ವರ್ಷ ಪ್ರಾಯದ ಮಕ್ಕಳ ಕೌಮಾರ ಸಾಹಿತ್ಯದಲ್ಲಿ ಸಾಹಸ ಕತೆಗಳು, ವಿಜ್ಞಾನಕ್ಕೆ ಸಂಬಂಧಿಸಿದ ಕಿರು ಲೇಖನಗಳು, ಕಾದಂಬರಿ, ಜೀವನಚರಿತ್ರೆ, ಕತೆ, ಕವನ ಇತ್ಯಾದಿಗಳು ಒಳಗೊಳ್ಳುತ್ತವೆ. ಈ ರೀತಿಯಲ್ಲಿ ವಿಂಗಡಿಸಬಹುದಾದರೂ ಇವುಗಳನ್ನು ಒಟ್ಟಾಗಿ 'ಮಕ್ಕಳ ಸಾಹಿತ್ಯ' ವೆಂದು ಕರೆಯುತ್ತಾರೆ.

ಚಂದಮಾಮ, ಚಂಪಕ, ಬಾಲಮಂಗಳ, ತುಂತುರು ಮೊದಲಾದ ಅನೇಕ ನಿಯತಕಾಲಿಕಗಳು ಮಕ್ಕಳಿಗಾಗಿ ಪ್ರಕಟವಾಗುತ್ತಿವೆ. ಪತ್ತೆದಾರಿ ಕತೆಗಳು, ಮಂತ್ರವಾದ ಕತೆಗಳು, ಪ್ರಾಣಿಕತೆಗಳು ಹೆಚ್ಚಿನ ನಿಯತಕಾಲಿಕಗಳಲ್ಲಿಯೂ ಇರುತ್ತವೆ. ಶಾಲಾ ಪಠ್ಯ ಪುಸ್ತಕಗಳಲ್ಲಿ ಮತ್ತು ನಿಯತಕಾಲಿಕಗಳಲ್ಲಿ ಇರುವ ಜೀವನ ಮೌಲ್ಯಗಳನ್ನು ಮಕ್ಕಳು ಸ್ವಾಯತ್ತ ಮಾಡಬೇಕಾದರೆ ಅವುಗಳ ಕರ್ತೃಗಳು ಮತ್ತು ಅವುಗಳನ್ನು ಮಕ್ಕಳಿಗೆ ಒದಗಿಸುವವರು ಹೆಚ್ಚಿನ ಗಮನ ಹರಿಸಬೇಕು.

**ನಿಯತಕಾಲಿಕಗಳನ್ನು ಅವುಗಳು ಪ್ರಕಟವಾಗುವ ಕಾಲಕ್ಕನುಸರಿಸಿ, ವಾರಪತ್ರಿಕೆ, ಪಾಕ್ಷಿಕ, ಮಾಸಪತ್ರಿಕೆ, ದ್ವೈಮಾಸಿಕ, ತ್ರೈಮಾಸಿಕ, ಅರ್ಧವಾರ್ಷಿಕ, ವಾರ್ಷಿಕ ಪತ್ರಿಕೆಗಳೆಂಬುದಾಗಿ ವರ್ಗೀಕರಿಸಬಹುದು.**

ಕನ್ನಡದ ದಿನಪತ್ರಿಕೆಗಳು ಮಕ್ಕಳ ಸಾಹಿತ್ಯಕ್ಕೆ ಪ್ರತ್ಯೇಕ ಪರಿಗಣನೆ ನೀಡುತ್ತಿವೆ. ಕಲಿಕಾ ಚಟುವಟಿಕೆಗಳಿಗೆ ಸಂಬಂಧಿಸಿದ, ದಿನಾಚರಣೆಗಳಿಗೆ ಸಂಬಂಧಿಸಿದ ವಿಷಯಗಳು ಮತ್ತು ಪೂರಕ ಓದಿಗೆ ಸಂಬಂಧಿಸಿದ ವಿಷಯಗಳನ್ನು ಈ ಪತ್ರಿಕೆಗಳು ನೀಡುತ್ತಿವೆ.

**ಚಟುವಟಿಕೆಗಳು**

- ಶಿಕ್ಷಣಕ್ಕೆ ಪ್ರಾಧಾನ್ಯವಿರುವ, ಪ್ರಾಥಮಿಕ ತರಗತಿಗಳಲ್ಲಿ ಭಾಷಾ ಬೋಧನೆಗೆ ಸಹಾಯಕವಾಗುವ ನಿಯತಕಾಲಿಕಗಳಲ್ಲಿರುವ ಮಕ್ಕಳ ಸಾಹಿತ್ಯದ ಸಂಗ್ರಹ
- ಸಂಗ್ರಹಗಳ ವರ್ಗೀಕರಣ
- ವಿವಿಧ ಪ್ರಾಯದ ಮಕ್ಕಳಿಗೆ ಹೊಂದಿಕೆಯಾಗುವಂತಹ ಸಾಹಿತ್ಯ ಕೃತಿಗಳನ್ನು ಒಳಗೊಂಡ ಸಂಚಿಕೆ ತಯಾರಿ
- ಇವುಗಳನ್ನು ತರಗತಿಗಳಲ್ಲಿ ಬಳಸಿಕೊಳ್ಳಬಹುದಾದ ಸಾಧ್ಯತೆಗಳ ಬಗ್ಗೆ ಚರ್ಚೆ
- ಚರ್ಚಾ ಟಿಪ್ಪಣಿ ದಾಖಲಿಸುವುದು.
- ಪರಿಚಯಿಸಿಕೊಂಡ ಮಕ್ಕಳ ಸಾಹಿತ್ಯಕೃತಿಗಳು ಮತ್ತು ಅವುಗಳ ಪ್ರತ್ಯೇಕತೆಗಳನ್ನು ತಿಳಿದುಕೊಂಡು ಸೃಜನಶೀಲ ಮಕ್ಕಳ ಸಾಹಿತ್ಯ ರಚನೆಗಳಲ್ಲಿ ತೊಡಗಿ ಉತ್ತಮ ರಚನೆಗಳನ್ನು ನಿರ್ಮಿಸಬೇಕು.
- ಒಬ್ಬ ಅಧ್ಯಾಪಕ ವಿದ್ಯಾರ್ಥಿಯೇ ಅನೇಕ ರಚನೆಗಳನ್ನು ಮಾಡಿದ್ದರೆ ಅವುಗಳನ್ನು ಒಟ್ಟು ಸೇರಿಸಿ ಸಂಚಿಕೆ ತಯಾರಿಸಬಹುದು.
- ತರಗತಿಗೆ ಒಟ್ಟು ಮಕ್ಕಳ ಸಾಹಿತ್ಯ ರಚನೆಗಳ ಸಂಚಿಕೆ ನಿರ್ಮಾಣ.

ಪ್ರಾಥಮಿಕ ತರಗತಿಗಳಲ್ಲಿ ಕಲಿಕಾ ಚಟುವಟಿಕೆಗಳನ್ನು ಆಯೋಜಿಸಲು ಮತ್ತು ವಿನಿಮಯ ಮಾಡಲು ಮಕ್ಕಳ ಸಾಹಿತ್ಯ ಕೃತಿಗಳನ್ನು ಬಳಸಿಕೊಳ್ಳಬಹುದು. ಹೀಗೆ ಆಯೋಜಿಸುವುದಕ್ಕಿಂತ ಮೊದಲು ಕಿರಿಯ ಪ್ರಾಥಮಿಕ ಹಂತ ಮತ್ತು ಹಿರಿಯ ಪ್ರಾಥಮಿಕ ಹಂತದ ಮಕ್ಕಳಿಗೆ ಹೊಂದಿಕೆಯಾಗುವ ರಚನೆಗಳನ್ನು ಆಯ್ಕೆ ಮಾಡಲು ಪ್ರತ್ಯೇಕ ಗಮನ ನೀಡಬೇಕು.

**ಕಿರಿಯ ಪ್ರಾಥಮಿಕ**

- ಪೂರ್ವ ಪ್ರಾಥಮಿಕ ಹಂತವನ್ನು ದಾಟಿ ಬರುವ ಆರರಿಂದ ಹತ್ತು ವರ್ಷ ಪ್ರಾಯವಿರುವವರು.
- ಇವರು ಕಂಡು ತಿಳಿದುಕೊಳ್ಳಲು ಮತ್ತು ಕೇಳಿ ತಿಳಿದುಕೊಳ್ಳಲು ಹೆಚ್ಚು ಅವಕಾಶ ಪಡೆದವರು.
- ಶೈಶವ ಕಾಲದ ಜೀವನಾನುಭವಗಳು ಮತ್ತು ನಿರ್ಣಾಯಕ ಸಂದರ್ಭಗಳು ಕಥಾವಸ್ತುವಾಗಿ ಬರುವವುಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯ.
- ಇಂತಹ ಕತೆಗಳಲ್ಲಿ ಕತೆ ಮುಂದುವರಿಸಲು ಸಾಧ್ಯವಾಗುವ ಸಂಭಾಷಣೆಯೂ ಆಗಬಹುದು.
- ಸುತ್ತುಬಳಸಿ ಹೇಳದ, ಲಲಿತವಾದ, ಸ್ಪಷ್ಟವಾದ ರಚನೆಗಳನ್ನು ಪ್ರಾಥಮಿಕ ಹಂತದವರು ಇಷ್ಟಪಡುವರು.
- ಕಲಿಕೆಯನ್ನು ರಸವತ್ತಾಗಿಸಲು ಯೋಗ್ಯವಾದ ಸಂದರ್ಭಗಳನ್ನು ಸ್ವೀಕರಿಸಬಹುದು.

**ಹಿರಿಯ ಪ್ರಾಥಮಿಕ**

- ಹತ್ತರಿಂದ ಹದಿಮೂರು ವರ್ಷ ಪ್ರಾಯವಿರುವವರು.
- ಸ್ವಯಂ ಚಿಂತಿಸಲು ಮತ್ತು ಕಾರ್ಯಪ್ರವೃತ್ತರಾಗಲು ಆರಂಭಿಸುವರು.
- ಕಲ್ಪನೆಗಳ ಸಾಮರ್ಥ್ಯವಿರುವುದರಿಂದ ಕಾಲ್ಪನಿಕ ಕತೆಗಳನ್ನು ತಿಳಿದುಕೊಳ್ಳುವರು.
- ಸಾಹಸ ಕತೆಗಳು, ಪುರಾಣ ಕತೆಗಳು, ಜೀವನ ಚರಿತ್ರೆಗಳನ್ನು ಇಷ್ಟಪಡುವರು.
- ಲವಲವಿಕೆಯಿಂದ ಕೂಡಿದ, ಸುತ್ತುಬಳಕೆಯಿಲ್ಲದ, ಚಿಕ್ಕ ಚಿಕ್ಕ ವಾಕ್ಯಗಳಲ್ಲಿ ಹೇಳುವುದು ಈ ಪ್ರಾಯದವರಿಗೆ ಇಷ್ಟ.

**ಚಟುವಟಿಕೆಗಳು**

- ಒಂದರಿಂದ ಎಂಟನೇ ತರಗತಿ ವರೆಗಿನ ಅಧ್ಯಾಪಕ ಪಠ್ಯಗಳನ್ನು ಪರಿಶೀಲಿಸಿ ಅವುಗಳಲ್ಲಿ ಮಕ್ಕಳ ಸಾಹಿತ್ಯ ರಚನೆಗಳನ್ನು ಬಳಸಿಕೊಂಡಿರುವುದರ ಔಚಿತ್ಯವನ್ನು ಕಂಡುಕೊಳ್ಳುವುದು.
- ಪರಿಚಯಿಸಿಕೊಂಡ, ಸ್ವಯಂ ತಯಾರಿಸಿದ ರಚನೆಗಳನ್ನು ಯಾವ ಯಾವ ಪಾಠಭಾಗಗಳಲ್ಲಿ ಕಲಿಕಾ ಚಟುವಟಿಕೆಗಳಾಗಿ ಬಳಸಿಕೊಳ್ಳಬಹುದೆಂದು ಚರ್ಚಿಸಿ ತೀರ್ಮಾನಿಸುವುದು.
- ಮಕ್ಕಳ ಸಾಹಿತ್ಯ ರಚನೆಗಳನ್ನು ಪ್ರವೇಶ ಚಟುವಟಿಕೆಯಾಗಿ ಅಥವಾ ಬೇರೆ ರೀತಿಯಲ್ಲಿ ಸೇರಿಸಿಕೊಂಡು ದೈನಂದಿನ ಯೋಜನೆ ತಯಾರಿಸಬಹುದು.

**ಆಕರ ಗ್ರಂಥಗಳು**

- ಕನ್ನಡ ವಿಷಯ ವಿಶ್ವಕೋಶ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ

* * *